ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 2

ಜನವರಿ 13, 2008

ಜನಶಕ್ತಿ

ಕನ್ನಡ ವಾರಪತ್ರಿಕೆ

ರೂ. 5/-

'ಕರ್ನಾಟಕದ ಕಾಶ್ಮೀರ'ದೊಳಗೊಂದು ಇಣುಕು







ನಂದಿ ಗ್ರಾಮದಲ್ಲಿ ಅಪೂರ್ವ ರ್‍ಯಾಲಿ

ರೈಲ್ವೆ ನೇಮಕಾತಿ ನೀತಿಯೂ ಪ್ರತಿಭಟನೆಯ ರೀತಿಯೂ

ಕೋಮುಗಲಭೆ :



ಅಲ್ಲಿ ಒರಿಸ್ಸಾದಲ್ಲಿ ಇಲ್ಲಿ ಬಂಟ್ವಾಳದಲ್ಲಿ





ಆರೋಗ್ಯರಂಗಕ್ಕೆ ಅಂಟಿಕೊಂಡಿರುವ ಮೌಢ್ಯ

ಇದ್ದದ್ದು ಇದ್ದಾಂಗ......




ವಾಕ್ಯ ರಚನೆ ದೋಷ

"ಹೊಸ ತಲೆಮಾರಿನ ಯುವ ಬರಹಗಾರರಲ್ಲಿ ವಾಕ್ಯರಚನೆಯಲ್ಲಿ ದೋಷಗಳಿದ್ದು ಅವುಗಳನ್ನು ಸರಿಪಡಿಸಿಕೊಂಡು ನಿರ್ಭೀತಿಯಿಂದ ನಿಷ್ಪಕ್ಷಪಾತವಾಗಿ ಬರೆಯಬೇಕು"

- ನಾಡೋಜ ಪ್ರೊ.ಕೆ.ಎಸ್.ನಿಸಾರ್ ಅಹಮದ್

★

ಸವಾಲು



"ಶ್ರೀರಾಮ ಸೇತುವೆ ನಾಶಗೊಳಿಸುವ ಯೋಜನೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅನುಮೋದನೆ ನೀಡಿರಲಿಲ್ಲ ಎಂದು ಮಾಜಿ ಪ್ರಧಾನಿ ವಾಜಪೇಯಿ ಹೇಳಿಕೆ ನೀಡಿ, ಸಾಬೀತುಪಡಿಸಿದರೆ ರಾಜಕೀಯ ಸನ್ಯಾಸ ಸ್ವೀಕರಿಸಿ ಸಂಸದ ಸ್ಥಾನಕ್ಕೆ ರಾಜಿನಾಮೆ ನೀಡುತ್ತೇನೆ".

- ಬಿ.ಜನಾರ್ಧನ ಪೂಜಾರಿ, ಕಾಂಗ್ರೆಸ್ ಮುಖಂಡರು

★


ಸರ್ವ ರೋಗಗಳಿಗೂ ಕೋರ್ಟ್ ಮದ್ದಲ್ಲ

"ಸರ್ವ ರೋಗಗಳಿಗೂ ಹೈಕೋರ್ಟ್ ಮದ್ದಲ್ಲ. ತಮ್ಮ ವ್ಯಾಪ್ತಿಯಲ್ಲೇ ಬಗೆಹರಿಯುವ ಸಮಸ್ಯೆಗಳನ್ನು ಸ್ಥಳೀಯ ಅಧಿಕಾರಿ ಅಥವಾ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ವಿವರಿಸಿ ಸಾರ್ವಜನಿಕರು ಪರಿಹಾರ ಕಂಡುಕೊಳ್ಳಬೇಕು. ಅಗಲೂ ಪರಿಹಾರ ಸಿಗದಿದ್ದರೆ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯ"

- ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ಪೀಠ.

★

ಗ್ರಾಮೀಣರು ಮತ್ತು ಭಾಷೆ



"ಅನಕ್ಷರಸ್ಥರಿಂದ ಭಾಷೆ ಯಾವತ್ತೂ ಉಳಿಯುತ್ತದೆ ಎಂಬ ನನ್ನ ವಾದವನ್ನು ತಪ್ಪಾಗಿ ಅರ್ಥೈಸಲಾಗಿದೆ. ಗ್ರಾಮೀಣ ಪ್ರದೇಶದ ಜನ ಮಾತನಾಡುವ 10 ವಾಕ್ಯಗಳಲ್ಲಿ ಒಂದಾದರೂ ನಾಣ್ಣುಡಿ ಅಥವಾ ಗಾದೆ ಸೇರಿರುತ್ತದೆ. ಭಾಷೆಯ ಸಾಧ್ಯತೆಗಳು ಗ್ರಾಮೀಣದಲ್ಲಿ ಸಹಜವಾಗಿ ಇರುತ್ತದೆ"

- ಡಾ. ಯು.ಆರ್.ಅನಂತಮೂರ್ತಿ

★

ಉಡುಪಿ ವಿವಾದ

"ಕೃಷ್ಣಪೂಜೆ ಎಂಬುದು ಉಡುಪಿಯ ಅಷ್ಟಮಠಗಳ ಆಡಳಿತಕ್ಕೆ ಒಳಪಟ್ಟ ವ್ಯವಸ್ಥೆ. ಅದರ ನಿಯಮಾವಳಿಗಳು ಪೂರ್ಣವಾಗಿ ಆ ಮಠಗಳದ್ದೇ' ಎಂದು ಮಾತಿಗೆ ತಲೆದೂಗಿ ಸುಮ್ಮನೆ ಕೂಡಲು ಸಾಧ್ಯವೇ? ಕೃಷ್ಣನನ್ನು ಖಾಸಗಿ ಆಸ್ತಿಯನ್ನಾಗಿ ಮಾಡಿಕೊಳ್ಳುವುದನ್ನು ಒಪ್ಪಲು ಜನತೆ ತಯಾರಿಲ್ಲ. ಈ




ವಿಚಾರದಲ್ಲಿ ಜನತೆಗೆ ತಮ್ಮ ಅಭಿಪ್ರಾಯ ಮಂಡಿಸುವ ಪೂರ್ಣ ಹಕ್ಕಿದೆ. ಮಠಗಳು ಶೂನ್ಯದಲ್ಲಿ ಇದ್ದು ಬಿಡಲು ತೀರ್ಮಾನಿಸಿದ್ದರೆ ಅದು ಮಠಗಳ ಆಯ್ಕೆ. ಆದರೆ ಭಕ್ತರದ್ದೇನಿದ್ದರೂ ಕಾಣಿಕೆ ಸಲ್ಲಿಸುವುದು, ಕೈಗೆ ಸುರಿಯುವ ತೀರ್ಥ ಸ್ವೀಕರಿಸುವುದು, ಇವೆಲ್ಲದರ ಸುತ್ತ ನಡೆಯುವ ಅಲೌಕಿಕ, ಅವ್ಯೆಚಾರಿಕ, ಸಂಕುಚಿತ ಆಗುಹೋಗುಗಳಿಗೆ ಮೂಕವಾಗಿಯೂ, ಕುರುಡಾಗಿಯೂ ಇದ್ದುಬಿಡುವುದು ಇಷ್ಟೇ ಭಕ್ತರ ಕರ್ತವ್ಯ ಎಂದು ತೀರ್ಮಾನಿಸುವುದು ತಿರಸ್ಕರಣೀಯ ವಾದ".

- ಜಿ.ಕೆ.ಗೋವಿಂದರಾವ್

ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ



ಹಿಂದಿನ ಸಂಚಿಕೆಯಿಂದ	
ಬಿ.ಇ.ಎಲ್. ನೌಕರರ ಸಂಘ	ರೂ. 13,38,056
ಅಣ್ಣಪ್ಪ ಚಿಕ್ಕಣ್ಣನವರ, ಹಾನಗಲ್	1,00,000
ಜಿಲಾನಿಖಾನ್ ಮುಲ್ಲಾ, ಹಾನಗಲ್	200
ಪ್ರವೀಣ್‌ಕುಮಾರ್.ಎಂ.	100
ರುದ್ರಪ್ಪದಾಸ್ ಜಾಬಿನ, ಹಾವೇರಿ	100
ಹಿತೈಷಿಗಳು, ಬೆಂಗಳೂರು	100
ಹಿತೈಷಿಗಳು,ಬೆಂಗಳೂರು	10,000
ಕೃಷ್ಣಪ್ಪಶೆಟ್ಟಿ, ರಗೋ ಕಾಂಪೌಂಡ್, ಬೋಳಾರ,ಮಂಗಳೂರು	5,000
ಒಟ್ಟು	100
	ರೂ.14,53,756.00

ಚುಚ್ಚುಮದ್ದು


ಧ್ಯಾನ ಮತ್ತು ಬಂದೂಕು

● "ವಿಶ್ವದಲ್ಲಿ ಭಯೋತ್ಪಾದನೆ ಹಾಗೂ ಅಶಾಂತಿ ತೊಲಗಿಸಲು ಧ್ಯಾನ ಮಾರ್ಗವೇ ಸೂಕ್ತವಾದದ್ದು"

- ವಿವಿಧ ಸ್ವಾಮೀಜಿಗಳು, ಸಮಾರಂಭವೊಂದರಲ್ಲಿ

▶ ಸಮಸ್ಯೆಗಳಿಗೆ ರಾಜಕೀಯ ಪರಿಹಾರ ಹುಡುಕದೇ ಬಂದೂಕು ಹಿಡಿದವರೆದುರು ಧ್ಯಾನಕ್ಕೆ ಕೂತರೆ - ಡಮಾರ್!

ಪ್ರತ್ಯೇಕತೆ



● "ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಮೋದಿ ಅಥವಾ ಬಿಜೆಪಿ ಗೆಲುವು ಪಡೆಯುವಲ್ಲಿ ನಮ್ಮ ಶ್ರಮವಿಲ್ಲ. ಅಲ್ಲಿ ನಮ್ಮ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸಿದೆ. ಗುಜರಾತ್‌ನಲ್ಲಿ ಮೋದಿಯ ಗೆಲುವಿಗೆ ಕಾರಣವಾದ ಎನ್‌ಡಿಎಯಿಂದ ಜೆಡಿ(ಯು) ಪಕ್ಷ ಪ್ರತ್ಯೇಕವಾಗಿ ಸ್ಪರ್ಧಿಸಿತ್ತು."

- ನಿತೀಷ್‌ಕುಮಾರ್
ಬಿಹಾರ ಮುಖ್ಯಮಂತ್ರಿ, ಜೆಡಿ(ಯು) ನಾಯಕ

▶ ನರೇಂದ್ರ ಮೋದಿ ಅಂದ್ರೇನು ಅಂತ ಹೇಳಿದ್ದಕ್ಕೆ ಧನ್ಯವಾದ, ಎನ್‌ಡಿಎಯನ್ನು ಪೂರ್ಣ ತೊರೆದರೆ ನಿಮ್ಮ ಮಾತಿಗೆ ಹೆಚ್ಚು ಬೆಲೆ

● ಪೊಲೀಸ್ ಪೇದೆಯಿಂದ ಬಾಲೆ ಮೇಲೆ ಅತ್ಯಾಚಾರ'

- ಸುದ್ದಿ

▶ ಬೇಲಿಯೇ ಎದ್ದು ಹೊಲ ನುಂಗಿತು

● "ಚುನಾವಣೆ ಮುಗಿಯುವವರೆಗೆ ಮನೆಗೆ ಮರುಳುವುದಿಲ್ಲ. ಅಗತ್ಯ ಬಿದ್ದರೆ ಬಿಜೆಪಿ ಜನಜಾಗೃತಿ ಯಾತ್ರೆಯನ್ನು ಹೋಬಳಿ ಮಟ್ಟಕ್ಕೂ ಕೊಂಡೊಯ್ಯುವೆವು"

- ಯಡಿಯೂರಪ್ಪ, ಬಿಜೆಪಿ ಮುಖಂಡರು

▶ ಯಾರಿಗೆ ಅಗತ್ಯ ಬಿದ್ದರೆ?

ಏಜೆನ್ಸಿದಾರರೇ,
ಕೋರ್ ಬ್ಯಾಂಕಿಂಗ್ ಸೌಲಭ್ಯ ಬಳಸಿ
ದಯಮಾಡಿ ಬಾಕಿ ಹಣ ಪಾವತಿಸಿ

ನೀವು 'ಜನಶಕ್ತಿ ಕನ್ನಡ ವಾರಪತ್ರಿಕೆ'ಗೆ ಚಂದಾಹಣ ಅಥವಾ ಏಜೆನ್ಸಿ ಬಿಲ್ ಪಾವತಿಸುವವರಾದರೆ ಈ ವಿಚಾರ ಗಮನಿಸಿ.

'ಜನಶಕ್ತಿ' ಕನ್ನಡ ವಾರಪತ್ರಿಕೆ ಯ ಖಾತೆಗೆ ನೀವು ನಿಮ್ಮ ಊರುಗಳಲ್ಲಿದ್ದೇ ನೇರವಾಗಿ ಹಣ ತುಂಬಬಹುದು. ಈ ಕೆಳಗೆ ಬ್ಯಾಂಕ್ ಅಕೌಂಟ್ ಸಂಖ್ಯೆ ನೀಡಲಾಗಿದೆ.

ನೀವು ಮಾಡಬೇಕಾದುದಿಷ್ಟೆ, ನಿಮ್ಮ ಊರಿನಲ್ಲಿರುವ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ) ಶಾಖೆಗೆ ಹೋಗಿ ಇಲ್ಲಿ ನೀಡಲಾಗಿರುವ ಹೆಸರಿನ, ಸಂಖ್ಯೆಯ ಖಾತೆಗೆ ಹಣ ತುಂಬಿ. ಮತ್ತು ಇದನ್ನು ಮರೆಯಬೇಡಿ.

ಈ ರೀತಿ ನೀವು ಹಣ ತುಂಬಿದ ಕೂಡಲೇ ದಯಮಾಡಿ ಹಣ ತುಂಬಿದ ವಿವರ, ಉದ್ದೇಶವನ್ನು ಕಛೇರಿಯ ವಿಳಾಸಕ್ಕೆ ಒಂದು ಕಾರ್ಡ್ ಬರೆದು ತಿಳಿಸಿ. ಚಂದಾ ಆದರೆ ವಿಳಾಸ ನೀಡಿ. ಪತ್ರ ಕಛೇರಿಗೆ ತಲುಪಿರುವ ಬಗ್ಗೆ ಫೋನ್ ಮಾಡಿ ಖಚಿತ ಮಾಡಿಕೊಳ್ಳಿ.

ಈ ಸಂಬಂಧ ನೀವು ಸಂಪರ್ಕಿಸಬೇಕಾದದ್ದು ವೀರಣ್ಣಕಲ್ಮನಿ : 9480430594.

ಪತ್ರಿಕೆಯ ಕಾರ್ಯಾಲಯದ ವಿಳಾಸ:
ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560 027.

ಖಾತೆ ಹೆಸರು
Janashakthi Kannada Varapathrike'
ಜನಶಕ್ತಿ ಕನ್ನಡ ವಾರಪತ್ರಿಕೆ,

ಬ್ಯಾಂಕ್ ಖಾತೆ ಸಂಖ್ಯೆ: 64020446625
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ), ಸಂಪಂಗಿರಾಮನಗರ ಶಾಖೆ, ಬೆಂಗಳೂರು.

ಡಿ.ಡಿ. ಮಾಡಿಸುವಾಗ ಕೊಡಬೇಕಾಗುವ ಶುಲ್ಕವನ್ನು ಇಲ್ಲೂ ಭರಿಸಬೇಕಾಗುತ್ತದೆ. ಚಲನ್‌ನಲ್ಲಿ ಏಜೆನ್ಸಿದಾರರ ಅಥವಾ ಚಂದಾದಾರರ ಹೆಸರು ಹಾಕುವುದು ಮರೆಯಬೇಡಿ.

ಸಂಪಾದಕೀಯ

ಅದಃಪತನದ ಸ್ಥಿತಿ

ವಿದೇಶಿ ಯಾತ್ರೆ ಮಾಡಿದ ಪುತ್ತಿಗೆ ಮಠಾದೀಶರು ಉಡುಪಿಯ ಕೃಷ್ಣನ ದೇವಸ್ಥಾನದ ಗರ್ಭಗುಡಿ ಪ್ರವೇಶಿಸಿ ಪೂಜೆ ಸಲ್ಲಿಸುವ ಅವಕಾಶದ ಕುರಿತು, ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ಕೆಲವು ಪತ್ರಿಕೆ, ಟಿ.ವಿ.ಗಳು ಇದನ್ನೇ ರಂಜನೀಯವಾಗಿ ಮತ್ತು ಇದೇ ಇಂದಿನ ಪ್ರಧಾನ ವಿಷಯವೆಂಬಂತೆ ಹಲವಾರು ದಿನಗಳಿಂದ ಬಿಂಬಿಸುತ್ತಿರುವುದು ಮಾಧ್ಯಮಲೋಕ ಯಾವ ಯಾವ ಹಿತಾಸಕ್ತಿಗಳನ್ನು ಪ್ರತಿಫಲಿಸುತ್ತಿದೆ ಎಂಬುದನ್ನು ಹೊರಹಾಕಿದೆ.

ಇಂತಹ ಪೂಜಾ ಆಕ್ಷೇಪವನ್ನು ಪೇಜಾವರ ವಿಶ್ವೇಶ್ವರ ತೀರ್ಥ ಮಠಾದೀಶರು ತೀವ್ರವಾಗಿ ಎತ್ತಿಕೊಂಡಿದ್ದಾರೆ. ಸಮುದ್ರಲಂಘನ ಧರ್ಮಶಾಸ್ತ್ರಗಳಲ್ಲಿ ಪೂಜಾ ನಿಷಿದ್ಧತೆಯನ್ನು ಹೇಳಿದ್ದು, ಇದನ್ನು ನಿರ್ಲಕ್ಷಿಸಿದರೆ ಪರಿಣಾಮಕ್ಕೆ ಬೇರೆಯವರೇ ಹೊಣೆಯೆಂದೂ ಬೆದರಿಕೆಯ ಭಾಷೆಯನ್ನು ಬಳಸಿರುವುದು ಗಮನಾರ್ಹ. ಈ ಮಾತುಗಳನ್ನು ಮಾಧ್ಯಮಗೋಷ್ಠಿಯಲ್ಲಿ ಆಡುವಾಗ, ಪಕ್ಕದಲ್ಲಿ ವಿಶ್ವಹಿಂದೂ ಪರಿಷತ್‌ನ ಮುಖಂಡರು 'ಆಸೀನ'ರಾಗಿದ್ದದ್ದು ಅವರ ಮಾತಿನ 'ಬಲ'ವನ್ನು ತೋರಿಸುತ್ತದೆ...


ಕೃಷ್ಣನ ಪೂಜೆಯ ಅವಕಾಶದ ಬದಲಾವಣೆಯನ್ನು ಉಡುಪಿಯ ಎಂಟು ಮಠಗಳು (ಬ್ರಾಹ್ಮಣರ) ಸರಣಿ ಕ್ರಮದಲ್ಲಿ ವಹಿಸಿಕೊಳ್ಳುವುದು ಪರ್ಯಾಯವೆಂದೂ ಇದನ್ನೇ (ಪೂಜಾರಿ ಆಯ್ಕೆಯಲ್ಲೇ) ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಕೋಟ್ಯಾಂತರ ರೂಪಾಯಿಗಳ ದವಸ, ಹಣ ಇತ್ಯಾದಿ ಸಂಗ್ರಹಿಸಲಾಗುತ್ತದೆ. 'ಪರ್ಯಾಯ' ವಹಿಸಿಕೊಳ್ಳುವ ಮಠಾದೀಶರಿಗೆ ಅದನ್ನು ನೀಡಲಾಗುತ್ತದೆ. ಈ ವಹಿವಾಟು ಮತ್ತು ಕೃಷ್ಣನ ದೇವಸ್ಥಾನದ ಆದಾಯ ಇತ್ಯಾದಿಗಳು ಅತ್ಯಂತ 'ಆಕರ್ಷಣೀಯವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ' ಪ್ರತಿಷ್ಠೆ ಮತ್ತು ಸಂಪತ್ತು ತರುವ ಈ ಪರ್ಯಾಯಕ್ಕೆ ಸ್ಪರ್ಧೆ ಸಹಜವಾದರೂ, ಕಾಲವನ್ನು ಸಮಾನವಾಗಿ ಹಂಚಿಕೊಳ್ಳಲಾಗಿದೆ.

ಇಂದು ಪೇಜಾವರ ಮಠಾಧೀಶರು ಎತ್ತಿದ ಪ್ರಶ್ನೆಯು ತೀವ್ರ ವಿಮರ್ಶೆಗೂ ಒಳಗಾಗಿದೆ. ಬದಲಾಗುತ್ತಿರುವ ಈ ಜಗತ್ತಿನಲ್ಲಿ ಶಾಸ್ತ್ರ, ಸೂತ್ರ ತೋರಿಸುತ್ತಿರುವ ಪೇಜಾವರರ ವಾದವೇ ಅಸಮರ್ಥನೀಯ. ಇಂದು ಖಂಡ, ಉಪಖಂಡವಾಗುವ ಮೊದಲು ಇಡೀ ಭೂಮಿಯೇ ಒಂದಾಗಿದ್ದದ್ದು 'ಸರ್ವಜ್ಞ ಪೀಠಸ್ಥ'ರಾದ ಯತಿಗಳಿಗೆ ತಿಳಿದಿಲ್ಲವೇ. ಭಗವಂತ ಸರ್ವಶಕ್ತನೆಂದೂ, ಸರ್ವಾಂತರ್ಯಾಮಿ ಎಂದೂ, ಭಾವಿಸಿದಲ್ಲಿ ಪ್ರತ್ಯಕ್ಷನಾಗುವನೆಂದು ಉಪನ್ಯಾಸ ನೀಡುವ ಈ ಯತಿಗಳಿಗೆ ಭಗವಂತ ಸಮುದ್ರದಾಚೆಗೂ, ಅಮೇರಿಕಾದಲ್ಲಿಯೂ ಇರುವುದಿಲ್ಲವೇ? ದೇವರೇ ಸಮುದ್ರಲಂಘಿಸಿದ ಮೇಲೆ ಉಳಿದವರ ಪಾಡೇನು? ಈ ಯತಿಗಳು ಆರಾಧಿಸುವ ಶ್ರೀರಾಮ, ಹನುಮಂತರು ಸಮುದ್ರದಲ್ಲಿ ವಾಪಾಸ್ಸಾಗಲಿಲ್ಲವೇ? ಜಾಗತೀಕರಣದ ಈ ಯುಗದಲ್ಲಿ ವಿದೇಶದ ಡಾಲರ್, ಪೌಂಡ್‌ಗಳಿಗೆ ಹಾತೊರೆಯುವ ಯತಿಗಳು ಅದು ಪರದೇಶಿ ಎಂದೇಕೆ ಭಾವಿಸುವುದಿಲ್ಲ. ವಿದೇಶಗಳಲ್ಲಿಯೂ ಲಕ್ಷ್ಮೀನಾರಾಯಣ, ಕೃಷ್ಣರ ದೇವಸ್ಥಾನಗಳನ್ನು ನಿರ್ಮಿಸಿರುವುದರಿಂದ ದೇವರನ್ನೇ ಸಮುದ್ರೋಲ್ಲಂಘನ ಮಾಡಿದಂತಾಗಿಲ್ಲವೇ? ಹೀಗಿರುವಾಗ ಎಂದೋ ನಿರ್ಬಂಧಿಸಲ್ಪಟ್ಟ ಕಟ್ಟಳೆಯನ್ನು ಇಂದಿಗೂ 'ಅನುಕೂಲ'ಕ್ಕೆ ತಕ್ಕಂತೆ ಬಳಸುವುದು ಧರ್ಮಹಿತವೇ?

ವಿದೇಶ ಪ್ರವಾಸಕ್ಕೆ ಯತಿಗಳಿಗೆ ಅನುವು ಮಾಡಿಕೊಟ್ಟಲ್ಲಿ ಸಹಜ ದೌರ್ಬಲ್ಯಗಳಿಗೆ ಈಡಾಗಬಹುದೆಂಬ ಆತಂಕ, ಹಣ ಕೇಂದ್ರೀತ ಹಿತಚಿಂತನೆಗಳೇ ಇಂದು ಧಾರ್ಮಿಕ ಸಂಸ್ಥೆ ಅಥವಾ ಮಠಗಳು ತಲುಪಿರುವ ಸ್ಥಿತಿಯನ್ನು, ಅಲ್ಲಿನ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಹೀಗಾಗಿ ಘೋಷಿತವಾದ ಧರ್ಮದ ಮುಖ್ಯಸ್ಥರಾಗಿರುವುದು ಎಷ್ಟು ಕಾಲಬಾಹಿರ ಎಂಬುದನ್ನು ಸೂಚಿಸುತ್ತದೆ.

ಕೃಷ್ಣನ ಪೂಜಾರಿ ಕೆಲಸ ವಹಿಸಿಕೊಳ್ಳುವ ವಿಷಯದ ಬಗ್ಗೆ ಎಂಟು ಮಠಾದೀಶರಲ್ಲಿ ಆರು ಮಠಾದೀಶರು ವಿರೋಧಿಸಿದ್ದಾರೆ. ಇದು ಜಾರಿಗೊಳಿಸಬೇಕಿಲ್ಲ ಎಂದು ಪುತ್ತಿಗೆ ಮಠಾಧೀಶರು ಹೇಳಿದ್ದಾರೆ. ಅದು ಪರಂಪರಾಗತವಾದುದು ತಡೆಯಲು ಸಾಧ್ಯವಿಲ್ಲ ಎಂದೂ ಆ ಕೆಲಸ ವಹಿಸಿಕೊಳ್ಳುವುದಾಗಿ ಹೇಳಿರುವುದು ಸಂಘರ್ಷದ ಸನ್ನಿವೇಶ ಹುಟ್ಟುಹಾಕಿದೆ. ಈಗಾಗಲೇ ನ್ಯಾಯಾಲಯದ ಮೆಟ್ಟಿಲೇರಿದೆ. ಈ ಮೊದಲೇ ಕೃಷ್ಣನ ದೇವಾಲಯವನ್ನು ಸರ್ಕಾರದ ಮುಜರಾಯಿ ಇಲಾಖೆ ವಹಿಸಿಕೊಳ್ಳಬೇಕೆಂಬ ಅರ್ಜಿಯೂ ನ್ಯಾಯಾಲಯದ ಮುಂದಿದೆ. ಈ ಒಟ್ಟು ವಿವಾದ ಧರ್ಮಕಾರಣಕ್ಕಿಂತ ಸ್ವಹಿತಾಸಕ್ತಿ ಕೇಂದ್ರಿತ ಹಾಗೂ ಕಾಲಬಾಹೀರ ಮೌಲ್ಯಗಳು ಮತ್ತು ಈಗಿನ ಸನ್ನಿವೇಶದ ನಡುವಿನ ಸಂಘರ್ಷವಾಗಿದೆ.

ರೈಲ್ವೆ ನೇಮಕಾತಿ ರೀತಿಯೂ ಪ್ರತಿಭಟನೆಯ ಪರಿಯೂ



ಜನವರಿ 3 ರಂದು ಬೆಂಗಳೂರಿನ ಯಶವಂತಪುರದಲ್ಲಿ ರೈಲ್ವೆ ಇಲಾಖೆಯ ಡಿ ಗುಂಪಿನ ನೌಕರರ ನೇಮಕಾತಿ ಸಂಬಂಧ ನಡೆಯುತ್ತಿದ್ದ ದೈಹಿಕ ಪರೀಕ್ಷೆಯು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ಪ್ರತಿಭಟನೆಯಿಂದಾಗಿ ಸ್ಥಗಿತಗೊಂಡಿದೆ. ವೇದಿಕೆ ಕಾರ್ಯಕರ್ತರ ಪ್ರತಿಭಟನೆಯಿಂದ ಹೆದರಿದ ವಿವಿಧ ರಾಜ್ಯಗಳ ಅಭ್ಯರ್ಥಿಗಳು ಬೆದರಿ ದೂರ ಓಡಿದ್ದಾರೆ. ಅಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾದರೂ ಹೆಚ್ಚಿನ ಅನಾಹುತಗಳು ಸಂಭವಿಸಿಲ್ಲ ಎನ್ನುವುದು ಸ್ವಲ್ಪ ಸಮಾಧಾನದ ವಿಷಯವಾಗಿದೆ.

ಈ ಘಟನೆ ಏಕಕಾಲಕ್ಕೆ ನಮ್ಮ ಮುಂದೆ ಹಲವು ಪ್ರಶ್ನೆಗಳನ್ನೆತ್ತಿದೆ. ಹಲವು ಸಮಸ್ಯೆಗಳ ಮುಖವನ್ನು ನಮ್ಮ



ಮುಂದೊಡ್ಡಿದೆ.

ಉದ್ಯೋಗಕ್ಕಾಗಿ ಯುವಜನರ ನಡುವೆ ಇರುವ ತಹ ತಹ.. ನಿರುದ್ಯೋಗದ ಭೀಕರ ಪರಿಸ್ಥಿತಿ ಒಂದು ಕಡೆ, ಮತ್ತೊಂದು ಕಡೆ ರೈಲ್ವೆ ಇಲಾಖೆಯ ನೇಮಕಾತಿ ಪ್ರಕ್ರಿಯೆ ಪಾರದರ್ಶಕವಾಗಿಲ್ಲದೆ ಸ್ವಜನ ಪಕ್ಷಪಾತ ಮತ್ತು ಅಕ್ರಮಗಳಿಂದ ಕೂಡಿರುವುದು ಮತ್ತು ಇಂತಹ ಸಮಸ್ಯೆಗಳು ಹೇಗೆ ಭಾಷಾಂಧತೆಗೆ ಪೂರಕವಾದ ವಾತಾವರಣ ನಿರ್ಮಿಸಲು ಸಹಾಯಕವಾಗುತ್ತದೆ ಎಂಬ ಅಂಶ.

ನೈರುತ್ಯ ರೈಲ್ವೆಯ ಸುಮಾರು 4000 ಹುದ್ದೆಗಳ ಸಂಬಂಧ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಈ ನೇಮಕಾತಿಯನ್ನು ಕ್ರಮವಾಗಿ ರೈಲ್ವೆ ನೇಮಕಾತಿ ಮಂಡಳಿ ನಡೆಸಬೇಕಿತ್ತು. ಆದರೆ ಹುಬ್ಬಳ್ಳಿಯ ನೈರುತ್ಯ ರೈಲ್ವೆ ಮೂಲಕ ನಡೆಸಲಾಗುತ್ತಿದೆ. ಈ ನೇಮಕಾತಿ ಸಂಬಂಧ ಸ್ಥಳೀಯವಾಗಿ ಜಾಹೀರಾತು ನೀಡಬೇಕಾಗಿದ್ದು, ಹಾಗೇ ನೀಡಿಲ್ಲ ಎನ್ನಲಾಗಿದೆ. ಇದಲ್ಲದೆ ರೈಲ್ವೆ ಸಚಿವರ ರಾಜ್ಯ ಬಿಹಾರ ಮತ್ತು ರೈಲ್ವೆ ರಾಜ್ಯ ಸಚಿವರ ರಾಜ್ಯವಾದ ತಮಿಳುನಾಡಿನಿಂದ ಈ ಸಂದರ್ಭಕ್ಕೆ ವಿಶೇಷ ರೈಲುಗಳ ವ್ಯವಸ್ಥೆ ಮಾಡಿದ್ದಾರೆ. ಇಂತಹ ಕಾರಣಗಳಿಗಾಗಿ ಪರೀಕ್ಷೆಗೆ ಹಾಜರಾದವರಲ್ಲಿ ಬಹಳಷ್ಟು ಮಂದಿ ಹೊರ ರಾಜ್ಯದವರೇ ಆಗಿದ್ದಾರೆ. ಕರ್ನಾಟಕದ ಜನರು ಬಹುತೇಕ ಅಲ್ಲಿರಲೇ ಇಲ್ಲ ಎಂಬ ವರದಿಗಳಿವೆ.



ಡಿ ದರ್ಜೆಯ ಹುದ್ದೆಗಳನ್ನು ಸ್ಥಳೀಯರಿಗೆ ನೀಡಬೇಕೆಂಬ ನ್ಯಾಯ ಸಮ್ಮತವಾದ ಒತ್ತಾಯ ಹಿಂದಿನಿಂದಲೂ ಇದೆ. ಕೇಂದ್ರ ಸರ್ಕಾರ ಈ ಸಂಬಂಧ ರಾಷ್ಟ್ರೀಯ ಉದ್ಯೋಗ ನೀತಿಯೊಂದನ್ನು ರೂಪಿಸಬೇಕಾದ ತುರ್ತು ಅಗತ್ಯವಿದೆ. ಇಲ್ಲದಿದ್ದಲ್ಲಿ ಇಂತಹ ಭಾವೋದ್ವೇಗದ ಪ್ರತಿಭಟನೆ, ಘರ್ಷಣೆಗಳನ್ನು ನಿವಾರಿಸುವುದು ಕಷ್ಟವೇ. ಇಂತಹ ಪ್ರತಿಭಟನೆಗಳು ರಾಜ್ಯದಲ್ಲಿ ಮಾತ್ರವಲ್ಲ ಹೊರ ರಾಜ್ಯಗಳಲ್ಲೂ ನಡೆದು ಅಹಿತಕಾರಿ ರೂಪ ಪಡೆದುಕೊಂಡಿದೆ.

ರೈಲ್ವೆ ಇಲಾಖೆಯ ಅಪಾರದರ್ಶಕ, ಸ್ವಜನ ಪಕ್ಷಪಾತದ ಧೋರಣೆ ಖಂಡನಾರ್ಹ. ಈ ಸಂಬಂಧದಲ್ಲಿ ಪ್ರತಿಭಟನೆ ನಡೆದರೆ ಅದು ನ್ಯಾಯವೇ. ಸ್ಥಳೀಯರಿಗೆ ಡಿ ದರ್ಜೆ ಹುದ್ದೆ ನೀಡಿ ಎಂದು ಕೇಳುವುದರಲ್ಲೂ ತಪ್ಪಿಲ್ಲ.

ಆದರೆ ಯಾವುದೇ ಪ್ರತಿಭಟನೆ ಭಾವೋದ್ರೇಕ, ಭಾಷಾಂಧತೆಯನ್ನು ಕೆರಳಿಸದಂತೆ, ಪ್ರಜಾಸತ್ತಾತ್ಮಕವಾದ ರೀತಿ ನೀತಿಯ ಚೌಕಟ್ಟನ್ನು ದಾಟದಂತೆ ಎಚ್ಚರ ವಹಿಸಬೇಕಾದದ್ದು ಅತ್ಯಂತ ಅವಶ್ಯಕ.

ಯುವಜನರ ಉದ್ಯೋಕಾಂಕ್ಷೆಗಳಿಗೆ ಮಾರಕವಾದ ಬೆಳವಣಿಗೆ ದಿನೇ ದಿನೇ ಹೆಚ್ಚುತ್ತಿರುವುದನ್ನೇ ನಾವು ನೋಡುತ್ತಿದ್ದೇವೆ. ಜಾಗತೀಕರಣ ನೀತಿಗಳು, ಮಾನವ ಸಂಪನ್ಮೂಲವನ್ನು ಹೊರದಬ್ಬುವಂತಹ ಮಟ್ಟದಲ್ಲಿ 'ಉನ್ನತ ತಂತ್ರಜ್ಞಾನ'ದ ಅವಲಂಬನೆ ಮುಂತಾದವು ನಿರುದ್ಯೋಗ ಸಮಸ್ಯೆಯನ್ನು ಭೀಕರಗೊಳಿಸಿವೆ. ಇಂತಹ ಜನವಿರೋಧಿ ನೀತಿಗಳ ವಿರುದ್ಧ ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ವಿಶಾಲ ಐಕ್ಯತೆಯ ಹೋರಾಟ ಬೆಳೆದುಬರಬೇಕಿದೆ. ಅದಾಗಬೇಕಾದರೆ ಜಾತಿ, ಧರ್ಮ, ಭಾಷೆಗಳ ಗಡಿಗಳನ್ನು ಮೀರಿದ ವಿಶಾಲ ಯುವಜನರ, ಜನರ ಐಕ್ಯತೆಯೂ ಅಗತ್ಯ. ಹಾಗಿಲ್ಲವಾದಲ್ಲಿ ಸಮಸ್ಯೆಗೆ ಕಾರಣವಾದ ಮೂಲ ನೀತಿಗಳನ್ನು ಮರೆತು ಯುವಜನರು ಭಾಷೆ ಮುಂತಾದ ಹೆಸರಿನಲ್ಲಿ ಪರಸ್ಪರ ಬಡಿದಾಟಕ್ಕೆ ನಿಲ್ಲುವಂತಹ ಪರಿಸ್ಥಿತಿಯನ್ನು ನಿರ್ಮಿಸಿದಂತಾಗುತ್ತದೆ. ಇದರಿಂದ ಜನವಿರೋಧಿ ನೀತಿಗಳನ್ನು ಇನ್ನಷ್ಟು ಸರಾಗವಾಗಿ ಜಾರಿಗೆ ತರಲು ಆಳುವ ವರ್ಗಗಳಿಗೆ ಸಹಾಯ ಮಾಡಿದಂತಾಗುತ್ತದೆ ಅಷ್ಟೆ.

ಸಿಳ್ಳೇಕ್ಯಾತನ ಮಾವೋವಾದಿ ಗಣಿತ

ಸಿಳ್ಳೇಕ್ಯಾತ ಎದುರಿಗೇ ಸಿಕ್ಕ

"ಏನಪ್ಪಾsss, ಸಮಾಚಾರ.... ಬಾಳ ದಿವ್ಸಾ ಆಯ್ತು ಸಿಗದೆ. ಏನ್ ಮಾಡ್ತಿದಿಯಾ?" ಒಂದೇ ಉಸಿರಲ್ಲಿ ಕೇಳಿದೆ.

"ಇಲ್ಲೇ ಇದೀನಿ ಸಾರ್. ನಾನೊಂದು ಸಂಶೋಧನೆ ಮಾಡಿದೀನಿ" ಅವನೆಂದ

"ಸಂಶೋಧನೆ! ಏನು ಸಂಶೋಧನೆ, ನೀನೇನ್ ವಿಜ್ಞಾನೀನಾ?" ನನ್ನ ಪ್ರಶ್ನೆ.

"ಅಲ್ಲ ಸಾರ್. ನಾನು ಮಾವೋವಾದಿಗಳ ಬಗ್ಗೆ ಸಂಶೋಧನೆ ಮಾಡಿದ್ದು".

"ಏನಪ್ಪ ಅದು, ಅಂತ ಮಹತ್ವದ್ದು? ಹಿಂಸಾಕಾಂಡದ ಹೊಸಹೊಸ ಪ್ರಕಾರಗಳ ಬಗ್ಗೆ ಮಾವೋವಾದಿಗಳು ಸಂಶೋಧನೆ ಮಾಡ್ತಾ ಇದಾರಂತೆ. ನೀನು ಅವರ ಬಗ್ಗನೇ ಸಂಶೋಧನೆ ಮಾಡ್ತೀಯಲ್ಲ. ಭಲೇ... ಅದೇನು ಅಂತ ಹೇಳು" ನಾನೆಂದೆ.

"ಸಾರ್, ಬಹಳ ಸಿಂಪಲ್ಲು. ಮಾವೋವಾದಿಗಳು ಮತ್ತು ಹಿಂದೂ ಕೋಮುವಾದಿಗಳು ಇಬ್ಬರೂ ಒಂದೇ ಸಾರ್...." ಸಿಳ್ಳೇಕ್ಯಾತನ ವಿವರಣೆ.

"ಅದ್ಹ್ಯಾಗೋ ಮಾರಾಯ, ಇವರಿಗೆ ಬಂದೂಕಿನ ಮೇಲೆ ಮೋಹ. ಅವರಿಗೆ ತ್ರಿಶೂಲದ ಮೇಲೆ ಮೋಹ. ಇದೂ ಒಂದು ಸಂಶೋಧನೇನಾ. ನಂಗೇ ಟೈಮ್ ವೇಸ್ಟ್ ಮಾಡ್ತಿದ್ದಿ" ನನ್ನ ಆಕ್ಷೇಪಣೆ.

"ಹಾಗಲ್ಲ ಸಾರ್, ಆಯುಧ ಬೇರೆ ಬೇರೆ ಇರಬೌದು. ನಾನು ಹೇಳಿದ್ದು ಅವರಿಬ್ಬರ ಮನಸ್ಸು ಒಂದೇ ಅಂತ. ಹಿಂದೂ ಕೋಮುವಾದಿಗಳು ಮುಸಲ್ಮಾನರನ್ನು ವಿಪರೀತ ದ್ವೇಷಿಸ್ತಾರೆ. ಮಾವೋವಾದಿಗಳು ಕಮ್ಯೂನಿಸ್ಟರನ್ನು ದ್ವೇಷಿಸ್ತಾರೆ. ದ್ವೇಷ, ಹತ್ಯೆಗಳ ವಿಚಾರದಲ್ಲಿ ಇವರಿಬ್ಬರೂ ಒಂದೇ ಅಂತ ನನ್ನ ಸಂಶೋಧನೆ" ಸಿಳ್ಳೇಕ್ಯಾತ ಮುಗುಳುನಕ್ಕ.

"ಹೌದಲ್ಲ, ನೀನು ಹೇಳೋದು ಸರಿ. ಆದರೆ ಮಾವೋವಾದಿಗಳೂ ಕಮ್ಯುನಿಸ್ಟರು ತಾನೇ. ಅವರಿಗ್ಯಾಕೆ ಕಮ್ಯೂನಿಸ್ಟರ ಮೇಲೆ ದ್ವೇಷ? "ನನಗೆ ಕುತೂಹಲವಾಯಿತು.

"ಹಾಗಂದ್ರೆ, ಮಾವೋವಾದಿಗಳು ಹೇಳೋದು, ಅವರು ಮಾತ್ರ ಸಾಚಾ ಕಮ್ಯೂನಿಸ್ಟರಂತೆ. ಉಳಿದ ಕಮ್ಯೂನಿಸ್ಟರೆಲ್ಲ ಖೋಟಾ ಅಂತೆ" ಅವನೆಂದ.

"ಸಾಚಾ ಆಗಿದ್ರೆ ನಂದಿಗ್ರಾಮದಲ್ಲಿ ಯಾಕವರು ಆರ್.ಎಸ್.ಎಸ್ ಲಾಠಿಗಳ ಜೊತೆ ಸೇರ್ಕಂಡ್ರು? ಜಮೀನುದಾರರು ಎಂಜಲಾದ ತೃಣಮೂಲದ ಜೊತೆ ಯಾಕೆ ಚಕ್ಕಂದ ಆಡಿದ್ರು?" ನನಗೆ ತಡೆಯಲಾಗಲಿಲ್ಲ. ಸಿಳ್ಳೇಕ್ಯಾತನಿಗೆ ಕಂಪ್ಲೀಟ್ ಕನ್‌ಫ್ಯೂಸ್ ಆಯಿತು.

"ಸಾರ್, ನಂಗೀಗ ಏನೂ ಹೊಳಿತಾ ಇಲ್ಲ. ಬೇಕಾದ್ರೆ, ನೀವು ಹೆಚ್ಚಿನ ಮಾಹಿತಿಗೆ 'ನೈಜ ಕಮ್ಯೂನಿಸ್ಟರಾದ ಬಸವನಗುಡಿ ಚಾರ್ವಾಕರನ್ನು ಸಂಪರ್ಕಿಸಬಹುದು. ನಾನು ಬರ್ತೀನಿ. ನಂದಿನ್ನೂ ಸಂಶೋಧನೆ ಮುಗಿದಿಲ್ಲ."

ಸಿಳ್ಳೇಖ್ಯಾತ ಕೈಬೀಸಿ ಕಣ್ಮರೆಯಾದ.

ನನಗೆ ಬಸವನಗುಡಿಯಲ್ಲಿ ಏನೂ ಕೆಲಸ ಇಲ್ಲವಾದ್ದರಿಂದ ಸಿಳ್ಳೇಖ್ಯಾತನ ಸಲಹೆಯನ್ನು ತಳ್ಳಿಹಾಕಿ ಮನೆಯ ಕಡೆ ಹೆಜ್ಜೆ ಹಾಕಿದೆ.

ಬೆಳ್ಳಂಬೆಳಿಗ್ಗೆಯೇ ಕರೆಗಂಟೆ ಸದ್ದಾಯಿತು. ಯಾರಪ್ಪ ಇಷ್ಟೊತ್ತಿಗೇ ಅಂತ ಗೊಣಗುತ್ತ, ಕಣ್ಣುಜ್ಜಿಕೊಳ್ಳುತ್ತ ಬಾಗಿಲು ತೆರೆದೆ. ಸಿಳ್ಳೇಕ್ಯಾತ ಹಲ್ಲುಕಿಸಿದು ನಗುತ್ತ ನಿಂತಿದ್ದ.

"ಏನ್ ಮಾರಾಯ, ಒಳ್ಳೇ ನಿದ್ದೆ ಹಾಳು ಮಾಡಿದೆ. ಮತ್ತೇನು ಬಂದ ಸಮಾಚಾರ"

"ಇನ್ನೊಂದು ಸಂಶೋಧನೆ ಮಾಡಿದೀನಿ ಸಾರ್. ತಡೀಕಾಗಲಿಲ್ಲ, ನಿಮ್ಗೆ ತೋರಿಸ್ಬೇಕು ಅಂತ ಬಂದೆ".

"ಒಳಗೆ ಬಾ, ಕಾಫಿ ಕುಡೀತಾ ಮಾತಾಡೋಣ. ಹೇಳು ಏನು ಸಂಶೋಧನೆ?"

"ಸಾರ್, ನೀವು ನಂದೀಗ್ರಾಮ ಅಂದ ಕೂಡಲೇ ಒಂದು ಹುಳ ತಲೆಗೆ ಸೇರ್ಕಂತು. ರಾತ್ರಿಯೆಲ್ಲ ಆಲೋಚನೆ ಮಾಡಿದೆ. ನೋಡಿ ಈ ಸೂತ್ರ".

ನಂದಿಗ್ರಾಮದಲ್ಲಿ ಹೀಗಾಯ್ತು :

ತೃಣಮೂಲ ಕಾಂಗ್ರೆಸ್ V/s ಸಿಪಿಐ(ಎಂ)
ಮಾವೋವಾದಿಗಳುV/s ಸಿಪಿಐ(ಎಂ)
ಜಮಾತ V/s ಸಿಪಿಐ(ಎಂ)
ಆರ್‌ಎಸ್‌ಎಸ್, ಬಿಜೆಪಿ V/s ಸಿಪಿಐ(ಎಂ)
ಸೂಸಿ V/s ಸಿಪಿಐ(ಎಂ)

ತೃಣಮೂಲ = ಮಾವೋವಾದಿಗಳು = ಜಮಾತ = ಆರ್‌ಎಸ್‌ಎಸ್, ಬಿಜೆಪಿ = ಸೂಸಿ V/s ಸಿ.ಪಿ.ಐ(ಎಂ) ಎಂದಾಯಿತು.

"ಈಗರ್ಥವಾಯ್ತಾ ಸಾರ್, ಒಂದೇ ಅನ್ನೋ ಗುಂಪಿಗೆ ಇನ್ನಷ್ಟು ಪೋಕರಿಗಳ ಗುಂಪು ಸೇರ್ಕಂಡಂಗಾಯ್ತು. ಇನ್ನೂ ಒಂದು ವಿಚಾರ ಸಾರ್, ಇವರೆಲ್ಲ ಸಿಪಿಐಂ(ಎಂ) ವಿರುದ್ಧ ಒಟ್ಟಾದ್ರೆ ಏನೂ ಕಿಸಿಯೋಕೆ ಆಗಲ್ಲ. ಇವರೆಲ್ಲ ಇದ್ದ ಕಡೆ ಹೆಣ ಬೀಳ್ತಾವೆ. ಡಾಂಬರು ರಸ್ತೆಗಳಲ್ಲಿ ಗುಂಡಿಗಳು ಬೀಳ್ತಾವೆ. ಮನೆಗಳಿಗೆ ಬೆಂಕಿ ಬೀಳ್ತದೆ. ಇವರ ಪ್ರಕಾರ ಬಂದೂಕು, ನಾಡಬಾಂಬ್, ಪೈಪ್‌ಗನ್‌ಗಳನ್ನು ಉಪಯೋಗಿಸೋದು ಹ್ಯಾಗೆ ಅನ್ನೋದೆ ಅಭಿವೃದ್ಧಿ ಅಂತೆ" ಸಿಳ್ಳೆಕ್ಯಾತ ಆವೇಶದಲ್ಲಿ ಮಾತನಾಡುತ್ತಿದ್ದ.

"ಹೌದಪ್ಪ, ನೀನ್ಹೇಳೋದು ಸರಿ. ಬಂದೂಕಿನ ಸಂಘರ್ಷಕ್ಕಿಂತ ವಿಚಾರ ಸಂಘರ್ಷ ಹೆಚ್ಚು ಶಕ್ತಿಶಾಲಿ ಅಂತ ಈ ಮಂಕುಗಳಿಗೆ ಇನ್ನೂ ಅರ್ಥವಾಗಿಲ್ಲ" ನಾನೆಂದೆ.

ನೀತಿ : ಐದು ಜೀವವಿರೋಧಿ ವಿಕೃತಿಗಳು ಒಟ್ಟಿಗೆ ಸೇರಿ ಸಿಪಿಐ(ಎಂ) ಎಂಬ ಆಕೃತಿಯನ್ನು ವಿಕಾರಗೊಳಿಸುವುದು ಸಾಧ್ಯವಿಲ್ಲ.

ಕ್ಯಾತೇ ಕುಮಾರ್

ಹೀಗೊಂದು ಕೆಟ್ಟ ಸುದ್ದಿ !

ಇದೊಂದು ಕೆಟ್ಟ ಸುದ್ದಿ, ನಮಗಲ್ಲ, ಪಶ್ಚಿಮ ಬಂಗಾಲದ ನಂದಿಗ್ರಾಮ ಪ್ರಕರಣದ ನಂತರ ಸಿಪಿಐ(ಎಂ) ಪಕ್ಷದ ಜನಪ್ರಿಯತೆ ಕುಸಿತು ಹೋಗಿದೆ. ಸಿಪಿಐ(ಎಂ) ಕೋಟೆ ಬಿರುಕು ಬಿಟ್ಟಿದೆ. ರೈತರು ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇನ್ನು ಕೋಟೆ ಸಂಪೂರ್ಣ ಕುಸಿಯುವುದೊಂದೇ ಬಾಕಿ ಅಂತ ಕಾದು ಕುಂತವರಿಗೆ.

ಸ್ಹುದ್ದಿ ಏನೆಂದರೆ ಪಶ್ಚಿಮ ಬಂಗಾಳದ ಬಾಲಾಗರ್ ಎಂಬ ವಿಧಾನ ಸಭಾ ಕ್ಷೇತ್ರಕ್ಕೆ(ಉಪ) ಚುನಾವಣೆ ನಡೆದು ಫಲಿತಾಂಶ ಬಂದಿದೆ. ಅಲ್ಲಿ ಹಿಂದೆ ಸಿಪಿಐ(ಎಂ) ಪರವಾಗಿ ಶಾಸಕರಾಗಿದ್ದ ದಿವಾಕರ ರೌತ್ ಅವರ ನಿಧನದಿಂದಾಗಿ ಈ ಸ್ಥಾನ ತೆರವಾಗಿತ್ತು.

ಚಲಾವಣೆಯಾದ ಮತಗಳಲ್ಲಿ ಶೇ.46.01 ರಷ್ಟು ಮತಗಳನ್ನು ಪಡೆದ ಸಿಪಿಐ(ಎಂ) ಅಭ್ಯರ್ಥಿ ಭುವನ್ ಪ್ರಮಾಣಿಕ್ ಗೆದ್ದಿದ್ದಾರೆ. ಶೇ39.57 ಮತಗಳನ್ನು ಪಡೆದ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಸೋತಿದ್ದಾರೆ. ಕಾಂಗ್ರೆಸ್ ಬಿಜೆಪಿಗಳು ಗಳಿಸಿದ ಶೇ.ವಾರು ಮತ ಪ್ರಮಾಣ ಎರಡಂಕಿಯನ್ನು ದಾಟಿಲ್ಲ.

ಎಂದಿನಂತೆ ಈ ವಿಷಯ ರಾಷ್ಟ್ರೀಯ ಮಾಧ್ಯಮಗಳಿಗೆ ಸುದ್ದಿಯೇ ಅಲ್ಲ. ಒಂದೊಮ್ಮೆ ಆಕಸ್ಮಿಕವಾಗಿ ಸಿಪಿಐ(ಎಂ) ಸೋತಿದ್ದರೆ ಏನಾಗುತ್ತಿತ್ತು. ನಂದಿಗ್ರಾಮ ಪ್ರಕರಣದಿಂದಾಗಿ ಸಿಪಿಐ(ಎಂ) ನೆಲಕಚ್ಚಿದೆ ಅಂತ ನಮ್ಮ ರಾಷ್ಟ್ರೀಯ ಮಾಧ್ಯಮಗಳು ಬೊಬ್ಬಿಡುತ್ತಿದ್ದವು. ಅಲ್ಲವೇ?

ನಂದಿಗ್ರಾಮ ವಿಚಾರದಲ್ಲಿ ಸಿಪಿಐ(ಎಂ) ವಿರುದ್ಧ ಏನೆಲ್ಲಾ ಅಪಪ್ರಚಾರಗಳು, ಧಾಳಿ, ಘರ್ಷಣೆಗಳು, ಆದ ಮೇಲೆ ನಂದಿಗ್ರಾಮ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ (ಉಪ) ಚುನಾವಣೆ ನಡೆದಿತ್ತು. ಆ ಚುನಾವಣೆಯಲ್ಲಿ ಸಿಪಿಐ(ಎಂ) ತನ್ನ ಕ್ಷೇತ್ರಗಳನ್ನು ಉಳಿಸಿ ಕೊಂಡದ್ದಲ್ಲದೆ, ತೃಣಮೂಲ ಕಾಂಗ್ರೆಸ್‌ನಿಂದ ಒಂದು ಸ್ಥಾನವನ್ನು ಕಸಿದುಕೊಂಡಿತು.

ಆಗಲೂ ಅಷ್ಟೇ. 'ದಿ ಎಕನಾಮಿಕ್ ಟೈಮ್ಸ್' ಪತ್ರಿಕೆಯಲ್ಲಿ ಸಣ್ಣ ಸುದ್ದಿ ಬಿಟ್ಟರೆ ಬೇರೆ ಯಾರಿಗೂ ಇದು ಒಂದು ಸುದ್ದಿ ಅಂತಲೇ ಅನಿಸಿರಲಿಲ್ಲ, ಅಂದರೆ ಆ ಬಗ್ಗೆ ಎಲ್ಲಾ ವರದಿ ಬರಲಿಲ್ಲ. ಆಕಸ್ಮಾತ್ ಸಿಪಿಐ(ಎಂ)ಗೆ ಹಿನ್ನಡೆ ಆಗಿದ್ದರೆ ಈ ಜನ ಸುಮ್ಮನಿರುತ್ತಿದ್ದರೆ?

'ಸದಾಸಿವಂಗೆ ಅದೇ ಗ್ಯಾನ'

"ಏನ್ಲಾ ತಮ್ಮಣ್ಣ ಎಂಗೈತೆ ವಾತಾವರಣ ನಿಮ್ಮೂರ್ನಾಗೆ?"

'ಏ ಬಾಳ ಚಳಿ ಕಣ್ಲಾ ಚಿಕ್ಕಣ್ಣ'?

"ಚಳಿ ಕತೆ ಇರ್ಲಿ, ಎಲೆಕ್ಷನ್ ಬಿಸಿ ಎಂಗೈತ್ಲಾ?'

'ಬಿಸಿ ಗಿಸಿ ಏನಿಲ್ಲ ಬುಡು, ನಮ್ಗೆಲ್ಲ ಬಿಸಿ ಏರಿಸೋದು ಎಲೆಕ್ಷನ್ ಅತ್ರ ಬಂದಾಗ ಮಾತ್ರ ಅಲ್ವೇನ್ಲಾ?'

'ಲೇ ತಮ್ಮಣ್ಣ, ನಿಂಗೆ ಯಾವಾಗ್ಲೂ ಎಣ್ಣೆದೇ ಚಿಂತೆ. ನಾನೇಳಿದ್ದು ಆ ಇಚಾರ ಅಲ್ಲ. ಗುಜರಾತು, ಇಮಾಚಲ ಪ್ರದೇಸದಲ್ಲಿ ಬಿಜೆಪಿನೇ ಗೆದ್ದಿದ್ದು ನೋಡಿ ಕಾಂಗ್ರೆಸ್ಸಿಗೆ ಬಿಸಿ ಮುಟ್ಟಿದೆ ಅಲ್ವಾ?'

'ಆ ಕಾಂಗ್ರೆಸ್‌ನೋರಿಗೆ ಬಿಸಿನೂ ಮುಟ್ಟಿಲ್ಲ ಚಳಿನೂ ತಟ್ಟಿಲ್ಲ ಕಣಲಾ ಚಿಕ್ಕ'

'ಯಾಕ್ಲ ಅಂಗಂತೀ?'

'ಊ ಮತೆ ಅಷ್ಟು ದಪ್ಪ ಚರ್ಮ ಆ ಪಕ್ಷದ್ದು' ಸೊಂತ ಬುದ್ದಿಯಿಲ್ಲ, ಏಳಿದ ಮಾತು ಕೇಳಾಕಿಲ್ಲ' ಅಂತಾರಲ್ಲ ಅಂಗೆ ಆ ಪಕ್ಷ'

'ಇನ್ ಮುಗೀತು ಬುಡು ಅವ್ರ ಕತೆ. ಕರ್ನಾಟಕನೂ ಗುಜರಾತಂಗೆ ಆಯ್ತದೆ ಅಂತ ಏಳ್ತಾವ್ರೆ'

'ಯಾಕ್ಲ ಚಡ್ಡಿ ಚಿಕ್ಕ, ನನ್ಗೆ ಎಣ್ಣೆ ತಮ್ಮಣ್ಣ ಅಂತೀರ, ನೋಡುದ್ರೆ ನೀನೇ ಎಣ್ಣೆ ಆಕಿದಂಗೆ ಮಾತಾಡ್ತಿದೀಯಾ?'

'ಇಲ್ಲ ಕಣಲಾ, ನೋಡ್ತಾಯಿರು, ಎಂಗಾರು ಸರಿ ಕರ್ನಾಟಕ ಗುಜರಾತು ಆಯ್ತದೆ ಅಂತ ಏಳ್ತಾವ್ರೆ'

'ಈಗ ನೋಡು ಯಡೂರಪ್ಪ ಒಂದಕ್ಷರ ಎಸ್ರು ಬದಲಾಯಿಸ್ಕೊಂಡಿದ್ದಕ್ಕೆ ಒಂದು ವಾರ ಮುಕ್ಯಮಂತ್ರಿ ಆಗ್ಲಿಲ್ವಾ?'

'ಊ ಕನ್ಲಾ ಅದುಕ್ಕೇನೀಗ?'

'ಈ ಸರಿ ಫುಲ್ ಚೇಂಜ್ ಮಾಡ್ಕೊಬವುದು ಎಸ್ರುನ'

'ಏನಂತ'?

'ವೀರ ಯಡ್ಯೂರೇಂದ್ರ ಮೋದಿ' ಅಂತ

'ಆಹ ಸಂದಾಕಿದೆ, ಆದ್ರೆ 'ಈರ' ಯಾಕೆ?

'ಈರ ಸೈವರಿಗೆ ಕುಸಿ ಆಗ್ಲಿ ಅಂತ. ಈರಸೈವರ ಮುಕ್ಯಮಂತ್ರಿ ಅಲ್ವೇನ್ಲಾ ಅವ್ರು?'

'ಅಲ್ಲ ಕನ್ಲಾ ಚಿಕ್ಕ, ಜಾತಿ ಜಾತಿಗೂ ಮಠಗಳು ಇದಾವೆ ಸರಿ. ಆದ್ರೆ ಮುಕ್ಯಮಂತ್ರಿ ರಾಜ್ಯಕ್ಕೆ ಅಲ್ಲವೇನ್ಲಾ?' ಅದಿರ್ಲಿ, ಅವರು ಎಸ್ರು ಚೇಂಜ್ ಮಾಡ್ಕಂಡ್ರೆ ಕರ್ನಾಟಕ ಗುಜರಾತು ಎಂಗ್ಲಾ ಆಯ್ತದೆ?'

'ಅವ್ರೊಬ್ರೇ ಅಲ್ಲ, ಅನಂತ ಮೋದಿ, ಈಸ್ವರೇಂದ್ರ ಮೋದಿ, ಸದಾನಂಹ ಮೋದಿ ಅಂತ ಫುಲ್ ಚೇಂಜ್ ಮಾಡ್ಕಂಡು ಎಲ್ಲಾರೂ ಬಿಳಿಗಡ್ಡ ಮೀಸೆ ಬುಟ್ಕೊಂಬುಟ್ರೆ?'

'ಆಹಹ... ಬಾಳ ಸಂದಾಕಿರುತ್ತೆ. ಆಲ್ಲ ಕನ್ಲಾ ಚಿಕ್ಕ, ಎಸ್ರು ಚೇಂಜ್ ಮಾಡ್ಕಂಡು ಬಿಳಿ ಗಡ್ಡ ಮೀಸೆ ಬಿಟ್ಕೊಂಡ್ರೆ ಅವ್ರೆಲ್ಲ ಮೋದಿ ವಂಸದೋರು ಅಂತ ಎಮಗೆ ಆಯ್ತದೆ. ಕರ್ನಾಟಕ ಎಂಗೆ ಗುಜರಾತು ಆಯ್ತದೆ'?

'ಬಾಬಾಬುಡನ್‌ಗಿರಿ ಕಿತಾಕ್‌ಬುಟ್ಟು' 'ದತ್ತಗೋದ್ರಾಪೀಟ ಅಂತ ಮಾಡ್ಬುಟ್ರೆ'?

'ಥತ್ ನಿನ್ನ..... ನಿಂಗೇನೋ ಆಗೈತೆ ಕನ್ಲಾ... ಬಾಬಾಬುಡನ್ ಗಿರಿ ಬೆಟ್ಟನ ಎಂಗ್ಲಾ ಕಿತ್ತಾಕ್ತೀರಾ?'

'ಬೆಟ್ಟ ಕಿತ್ತಾಕಲ್ಲ ಕನ್ಲಾ ತಮ್ಮ, ಎಸ್ರು ಕಿತ್ತಾಕ್ತೀವಿ'

'ಲೇ ಚಿಕ್ಕ ಕರ್ನಾಟಕದ ಜನ ಕಳ್ಳೆಪುರಿ ತಿಂತಾ ಕುಂತಿರ್ತರೇನ್ಲಾ? ಒಬ್ರು ದ್ಯಾವೇಗೌಡ್ರು ಸಾಕು. ಎಂತೆಂತಾ ಪಟ್ಟಾಕುದ್ರು ಬಿಜೆಪಿಗೆ. ಒಂದಾದ್ರೂ ಬುಡಸ್ಕೊಳಕಾಯ್ತು? ಚಿತ್ತಾಗಿ ಮಣ್ ಮುಕ್‌ಲಿಲ್ವಾ?

'ಆದ್ರೆ ತಮ್ಮಣ್ಣ ಈಗ ದ್ಯಾವೇಗೌಡ್ರು ಜತೆ ಕುಮಾರಣ್ಣಗೌಡ, ರೇವಣ್ಣ ಗೌಡ ಬುಟ್ರೆ ಯಾರಿದರೆ?' ಎಲ್ರೂ ಅವ್ರ ಪಕ್ಷ ಬುಟ್ಟು ಓದ್ರಲ್ಲ.

'ಯಾರು ಯಾರು ಬಿಟ್ಟು ಓದ್ರೂ ನಾನು ಎದ್ರಾಕಿಲ್ಲ

'ಧೂಳಿಂದ ಎದ್ದು ಬತ್ತೀನಿ' ಅಂತ ಯಾವಾಗ್ಲೂ ಏಳ್ತಿರ್ತರೆ ದ್ಯಾವೇಗೌಡ್ರು'

'ಯಾಕೆ ಅವ್ರು ಯಾವಾಗ್ಲೂ ಧೂಳಲ್ಲಿ ಮನಿಕ್ಕಂಡಿರ್ತರ?'

'ಅಂಗಲ್ಲ ಕನ್ಲಾ ದಡ್ಡ ಮುಂಡೇದೆ, ನಿಂಗೆ ಅವೆಲ್ಲ ಅರ್ಥ ಆಗಕಿಲ್ಲ ಬುಡು'

'ಓಗ್ಲಿ ಬುಡು, ನಾನೂ ಓಗ್ಬೇಕು ಸಮಾವೇಸಕ್ಕೆ'

'ಅದೇನ್ ಸಮಾವೇಸಗಳೋ ಬುಡ್ಲಾ, ನೋಡಿ ನೋಡಿ ಸಾಕಾಗೋತು. ಬರೀ ಚಿತ್ರಾನ್ನ ತಿಂದೂ ತಿಂದೂ ಬಾಳ 'ಬಾಯಾರ್ಕೆ' ಯಾವಾಗಂತ್ಲಾ ಎಲೆಕ್ಷನ್ನೂ'? 'ಸದಾಸಿವಂಗೆ ಅದೆ ಗ್ಯಾನ ಅಂದಂಗೆ ನಿಂಗೆ ಸದಾ 'ಅದೇ' ಗ್ಯಾನ ನಡಿಲಾ ಸುಮ್ಕೆ'

- ಶ್ರೀ

ಮತ್ತೆ ಕೋಮುಗಲಭೆಗೆ ಟೊಂಕಕಟ್ಟಿ ನಿಂತ ಸಂಘ ಪರಿವಾರ ಮತ್ತು ಮುಸ್ಲಿಂ ಮೂಲಭೂತವಾದಿ ಕೆಎಫ್‌ಡಿ

ಕೃಷ್ಣಪ್ಪ ಕೊಂಚಾಡಿ


ಕಳೆದ ಸೆಪ್ಟೆಂಬರ್, ಅಕ್ಟೋಬರ್‌ಗಳಲ್ಲಿ ಸರಿ ಸುಮಾರು ಅಪರೂಪವಾಗಿದ್ದ ಸಂಘ ಪರಿವಾರ ಮತ್ತು ಕೆಎಫ್‌ಡಿಗಳ ಆಟಾಟೋಪ ಮತ್ತೆ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಪರಾಕಾಷ್ಠೆಗೆ ತಲುಪುತ್ತಿದೆ. ಹೇಗಾದರೂ ಮಾಡಿ ಕೋಮುಗಲಭೆಯನ್ನು ಮಾಡಿ ಆ ಮೂಲಕ ಚುನಾವಣೆಯಲ್ಲಿ ಸ್ಪಷ್ಟ ರಾಜಕೀಯ ಲಾಭ ಪಡೆಯುವುದು ಸಂಘ ಪರಿವಾರದ ಮೂಲ ಉದ್ದೇಶವಾದರೆ ಆ ಮೂಲಕ ಕಟ್ಟಾ ಮತಾಂಧತೆ ಮತ್ತು ಕಾರ್ಯಕರ್ತರ ಬದ್ಧತೆ ಜಾಸ್ತಿಗೊಳಿಸುವುದು, ಬೆಂಬಲಿಗರನ್ನು ಪಡೆಯುವುದು ಕೆ.ಎಫ್.ಡಿ.ಯ ಉದ್ದೇಶ.

ಸುರತ್ಕಲ್, ಮಂಗಳೂರಿನ ಸುತ್ತಮುತ್ತ ಮತ್ತು ಬಿ.ಸಿ. ರೋಡು, ಭಂಟ್ವಾಳಗಳಲ್ಲಿ ಹಲವಾರು ಕಾರಣಗಳಿಗಾಗಿ ಮತ್ತೊಮ್ಮೆ ವಿನಾಕಾರಣ ಭಾರಿ ಘರ್ಷಣೆ, ಹಲ್ಲೆ, ಬೆಂಕಿ ಹಚ್ಚುವ, ಚೂರಿ ಇರಿಯುವ ಘಟನೆಗಳು, ಅಘೋಷಿತ ಬಂದ್, ಪೋಲೀಸ್ ಲಾಠಿ ಚಾರ್ಜ್ ಸೆಕ್ಷನ್ 144 ಮೊದಲಾದವುಗಳ ದಿನಚರಿ ನಡೆಯಿತು. ಜನ ಮಾತ್ರ ಹುಚ್ಚೆದ್ದು ಕುಣಿಯುವುದರಿಂದ ನಿರ್ಲಿಪ್ತರಾಗಿದ್ದು ತಮ್ಮ ಬದುಕಿನ ಜಂಜಾಟದಲ್ಲಿ ಇದ್ದ ಕಾರಣ ಹಾಗೂ ಪೊಲೀಸರು ಕ್ರಿಯಾಶೀಲರಾಗಿದ್ದ ಕಾರಣ ಗಂಭೀರ ಪ್ರಮಾಣದ ಅನಾಹುತ ಸಂಭವಿಸಲಿಲ್ಲ.

ಈ ಅವಧಿಯ ಗಲಭೆಗಳು ಭಂಟ್ವಾಳದಲ್ಲಿ ಅಯ್ಯಪ್ಪ ವ್ರತಧಾರಿಯೊರ್ವರ ಮೇಲಿನ ಹಲ್ಲೆ ಪ್ರಕರಣದೊಂದಿಗೆ ಪ್ರಾರಂಭವಾಯಿತು. ಇದೇ ಅವಧಿಯಲ್ಲಿ ಸುರತ್ಕಲ್ ಪ್ರದೇಶದಲ್ಲಿ ವಾಹನಕ್ಕೆ ಜಾಗ ಬಿಡದ ವಿಷಯಕ್ಕೆ ಸಂಬಂಧಿಸಿ ನಾಲ್ಕೈದು ಕಡೆಗಳಲ್ಲಿ ಪರಸ್ಪರ ಹಲ್ಲೆ, ಚೂರಿ ಇರಿತಗಳು ನಡೆದವು. ಇವಿಷ್ಟು ನವೆಂಬರ್ ತಿಂಗಳಿನಲ್ಲಿ ನಡೆದ ಘಟನೆಗಳಾಗಿವೆ. ಡಿಸೆಂಬರ್ ತಿಂಗಳಿನಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಕಂಕನಾಡಿಯಲ್ಲಿ ಕ್ರಿಶ್ಚಿಯನ್ ಧರ್ಮದ ಪ್ರಾರ್ಥನಾಲಯದ ಮೇಲೆ 'ಮತಾಂತರ ಕೇಂದ್ರ' ಎಂದು ಹೇಳಿಕೊಂಡು ದಾಂಧಲೆ ನಡೆಸಿದರು. ಬೇಂಗ್ರೆಯಲ್ಲಿ ಈದ್ ಮಿಲಾದ್‌ನಂದು ಬಹಿರಂಗವಾಗಿ ದನ ಕಡಿದ ವಿಷಯವು ಸಾಕಷ್ಟು ಉದ್ವಿಗ್ನತೆಗೆ ಕಾರಣವಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿ ಮಧ್ಯಪ್ರವೇಶ ಗೈದ ಪೋಲೀಸರ ಮೇಲೆ ಅಲ್ಪಸಂಖ್ಯಾತರಿಂದ ಹಲ್ಲೆ ನಡೆದು, ಅನಂತರ ಪೊಲೀಸರು ಪ್ರತಿಯಾಗಿ ಮನೆ ಮನೆಗೆ ಧಾಳಿ ನಡೆಸಿ ದೌರ್ಜನ್ಯಕ್ಕೆ ಮುಂದಾದರು. ಈ ಒಟ್ಟಾರೆ ಘಟನೆ ಕುದ್ರೋಳಿ ಮೊದಲಾದ ಕೋಮುಗಲಭೆಯ ಕೇಂದ್ರಗಳಲ್ಲೂ ಪ್ರತಿಧ್ವನಿಸಿತು.

ಭಂಟ್ವಾಳದಲ್ಲಿ ಕಿಡಿಗೇಡಿ ಕೃತ್ಯದ ಸರಮಾಲೆಯೇ ನಡೆಯಿತು. ಬಂಟ್ವಾಳದಲ್ಲಿ ಬಡ್ಡಕಟ್ಟೆಯಲ್ಲಿ ಸಂಘ ಪರಿವಾರದ ಮುಖ್ಯ ಕಾರ್ಯಕರ್ತ ಎಸ್.ಟಿ.ಡಿ. ಬೂತ್‌ನ ಎದುರು ಎರಡು ದನಗಳ ರುಂಡವನ್ನು ತಂದು ಹಾಕಿದ್ದು, 'ನಿಮಗೂ ಇದೇ ಗತಿ ತೋರಿಸುತ್ತೇನೆಂಬ' ಕೈ ಬರಹವನ್ನು ಹಚ್ಚಲಾಗಿದ್ದು ಈ ಘಟನೆ ಆತಂಕ ಸೃಷ್ಟಿಸಿತು. ಆದರೂ ಸಹ ಪೊಲೀಸರು ಕಟ್ಟುನಿಟ್ಟಿನ ಕ್ರಮ ಜರುಗಿಸಿದ ಪರಿಣಾಮ ಪರಿಸ್ಥಿತಿ ಶಾಂತವಾಯಿತು.

ಇದೇ ಸಮಯದಲ್ಲಿ ಅವಹೇಳನಕಾರಿ, ಪ್ರಚೋದನಾತ್ಮಕ ಬರಹಗಳ ಪೋಸ್ಟರ್ ಹಚ್ಚುವ ಕಿಡಿಗೇಡಿ ಕೃತ್ಯವೂ ಕೆಲವು ಕಡೆ ನಡೆಯಿತು. ಇದು ಸಂಘಪರಿವಾರದ ಕೃತ್ಯವೋ ಅಥವಾ ಕೆ.ಎಫ್.ಡಿ. ಕೃತ್ಯವೋ ಎಂಬುದು ಬಹಿರಂಗಗೊಂಡಿಲ್ಲ. ಡಿಸೆಂಬರ್ 29 ಮತ್ತೆ ನೇರ ಹಣಾಹಣಿಗೆ ಎದುರಾದ ಘಟನೆ ನಡೆಯಿತು. ಅಲ್ಪಸಂಖ್ಯಾತ ಸಮುದಾಯದ ಹುಡುಗ ದನದ ಮಾಂಸ ಸಾಗಿಸುತ್ತಿದ್ದಾನೆಂಬ ಕಾರಣಕ್ಕೆ ಅವನನ್ನು ಬೆನ್ನು ಹತ್ತಿ ಬಂದ ಯುವಕರ ತಂಡ ಬಿ.ಸಿ. ರೋಡಿನಲ್ಲಿ ಹಲ್ಲೆ ನಡೆಸಿ ಪರಾರಿಯಾಯಿತು.



ಆಗ ಪ್ರತಿಭಟಿಸಿ ಹಲ್ಲೆಕೋರರನ್ನು ಓಡಿಸಲಾಯಿತು. ಆ ಕ್ಷಣದಲ್ಲಿ ಎರಡೂ ಕಡೆಯಲ್ಲಿ ಸಂಘಟಿತರಾಗಿದ್ದ ಗುಂಪು ತಕ್ಷಣವೇ ದಾಂಧಲೆಗೆ ಇಳಿಯಿತು. ಕಲ್ಲು ತೂರಾಟ, ಬೆಂಕಿಹಚ್ಚುವ ದಾಂಧಲೆಗಳು ನಡೆದವು. ಇದು



ಕ್ಷಣಾರ್ಧದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಇಳಿಯಿತು. ಬಂಟ್ವಾಳ ಬಿ.ಸಿ.ರೋಡಿನಲ್ಲಿ ಅಂಗಡಿ ವ್ಯಾಪಾರ ಮುಚ್ಚಲಾಯಿತು. ಪೊಲೀಸ್ ಇಲಾಖೆ ಸ್ವತಃ ಐ.ಜಿ.ಪಿ. ಎ.ಎಂ.ಪ್ರಸಾದ್, ಎಸ್.ಪಿ. ಸತೀಶ್‌ಕುಮಾರ್‌ರವರ ನೇತೃತ್ವದಲ್ಲಿ ಕಾರ್ಯಾಚರಣೆಗೆ ಇಳಿದು ಲಾಠಿಚಾರ್ಜ್ ನಡೆಸಿ ನಿರ್ದಾಕ್ಷಿಣ್ಯವಾಗಿ ಬಂಧಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಬಂಟ್ವಾಳದಲ್ಲಿ ಸಂಘ ಪರಿವಾರ ಮತ್ತು ನಾಗರಾಜಶೆಟ್ಟಿಯವರಿಗೆ ಆದ ಮುಖಭಂಗದ ಸುಳಿವು ತಿಳಿಯುತ್ತಿದ್ದಂತೆಯೇ ಇತ್ತ ಮಂಗಳೂರಿನಲ್ಲಿ 3 ಕಡೆ ಅಲ್ಪಸಂಖ್ಯಾತರ ಅಂಗಡಿ, ಬಸ್ಸುಗಳಿಗೆ ಕಲ್ಲು ತೂರುವ ಮೂರು ಘಟನೆ ನಡೆಯಿತು. ಆಗಲೂ ಜನ ಪ್ರಚೋದನೆಗೆ ಒಳಗಾಗದೆ ಶಾಂತಿ ಕಾಪಾಡಿದರು.

ನಾಗರಾಜಶೆಟ್ಟಿಗೆ ಲಾಠಿ ತೋರಿಸಿ ಓಡಿಸಿದ ಐ.ಜಿ.ಪಿ.

ಇತ್ತೀಚಿನ ಒಂದು ದಶಕದ ಎಲ್ಲಾ ಕೋಮುಗಲಭೆಗಳ ತೆರೆಯಮರೆಯ ರೂವಾರಿ, ಮೋದಿಯ ಅವತಾರ ವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಮಾಜಿ ಶಾಸಕ ನಾಗರಾಜಶೆಟ್ಟಿ ಈ ಬಾರಿ ಕೂಡಾ ಡಿಸೆಂಬರ್ 29 ರಂದು ಸಂಘ ಪರಿವಾರದ ಗಲಭೆಕೋರರ ಮಧ್ಯೆ ಸ್ವತಃ ನಿಂತು ನಾಯಕತ್ವ, ಪ್ರಚೋದನೆ ನೀಡುತ್ತಿದ್ದರು. ಇದನ್ನು ಗಮನಿಸಿದ ಐ.ಜಿ.ಪಿ. ಯವರು ಲಾಠಿ ಎತ್ತಿ ಹಿಡಿದು ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡು ಜನರ ಮುಂದೆ ಮಾನ ಹರಾಜು ಮಾಡಿದಲ್ಲದೆ ಲಾಠಿ ಎತ್ತಿ ಬಡಿಯಲು ಮುಂದೊತ್ತಿದ್ದರು.ಇಂಗುತಿಂದ ಮಂಗನಂತಾದ ಮಾಜಿ ಸಚಿವ ಲಾಠಿ ರುಚಿ ತಿನ್ನುವುದೊಂದೇ ಬಾಕಿ ಇದ್ದಾಗ ಬೆನ್ನು ಹಾಕಿ ಹಿಂದಕ್ಕೆ ಸರಿದರು. ಈ ಘಟನೆ ಜಿಲ್ಲೆಯಲ್ಲಿ ಪೋಲೀಸರ ಪ್ರಶಂಸೆಗೆ ಅರ್ಹವಾದ ಘಟನೆಯಾದರೆ ಬಿಜೆಪಿಗೆ ತೀವ್ರ ಮುಖಭಂಗದ ಘಟನೆಯಾಗಿದೆ.

ಅಂತು ಇಂತು ದಕ್ಷಿಣ ಕನ್ನಡ ಕೋಮು ಗಲಭೆಯ ಅಗ್ನಿಕುಂಡದಲ್ಲಿ ಇದೆ. ಯಾವಾಗ ಬೇಕಾದರೂ ಮತ್ತೆ ಸ್ಫೋಟಿಸುವ ಆತಂಕ ಇದ್ದೇ ಇದೆ.

ಈಗ ಒರಿಸ್ಸಾದಲ್ಲೂ ಗುಜರಾತ್ ಪ್ರಯೋಗ

ಒರಿಸ್ಸಾದ ಕಂಧಮಲ್ ಜಿಲ್ಲೆಯಲ್ಲಿ 2007ರ ಕ್ರಿಸ್‌ಮಸ್ ದಿನದಂದು ಹಾಗೂ ಅದರ ಮುನ್ನಾದಿನ ಕ್ರೈಸ್ತರ ಮೇಲೆ ಸಂಘಟಿತ ಧಾಳಿಗಳು ನಡೆದ ವರದಿಗಳು ಮತ್ತೆ ದೇಶವನ್ನು ತಲ್ಲಣಗೊಳಿಸಿವೆ. ವಿಹೆಚ್‌ಪಿ ಮತ್ತು ಆರೆಸ್ಸೆಸ್ ಮಂದಿ 15 ಚರ್ಚ್‌ಗಳನ್ನು ಮತ್ತು ಕ್ರೈಸ್ತ ಶೈಕ್ಷಣಿಕ ಸಂಸ್ಥೆಗಳ ಕಟ್ಟಡಗಳನ್ನು ಸುಟ್ಟು ಹಾಕಿದ್ದಾರೆ ಎಂದು ವರದಿಗಳು ತಿಳಿಸುತ್ತವೆ. ಜಿಲ್ಲೆಯಲ್ಲಿ ಕರ್ಫ್ಯೂ ಹಾಕಲಾಗಿದ್ದು, ಹಲವೆಡೆ ಅದು ಜನವರಿ 7 ರವರೆಗೂ ಮುಂದುವರೆಯುವುದು; ಕನಿಷ್ಟ ಮೂರು ಮಂದಿ ಹಿಂಸಾಚಾರಗಳಿಗೆ ಬಲಿಯಾಗಿದ್ದಾರೆ ಎಂದು ವರದಿಯಾಗಿದೆ. ಮತಾಂತರದ ವಿರುದ್ಧ ಜಿಲ್ಲೆಯಲ್ಲಿ ಪ್ರಚಾರ ನಡೆಸುತ್ತಿರುವ ಸ್ವಾಮಿ ಲಕ್ಷಣಾನಂದ ಎಂಬವರ ಮೇಲೆ ನಡೆದ ಧಾಳಿಯನ್ನು ವಿರೋಧಿಸುವ ಹೆಸರಿನಲ್ಲಿ ಕೆಲವರು ಕೋಮುವಾದಿ ಶಕ್ತಿಗಳು ವ್ಯಾಪಕ ಹಿಂಸಾಚಾರಗಳನ್ನು ನಡೆಸಿವೆ. ಬರಖಾಮ ಎಂಬ ಹಳ್ಳಿಯಲ್ಲಿ 214 ಮನೆಗಳು ಮತ್ತು ಬ್ರಾಮಣಿಗಾಂವ್ ಎಂಬ ಹಳ್ಳಿಯಲ್ಲಿ 153 ಮನೆಗಳೂ ಸೇರಿದಂತೆ ಒಟ್ಟು 383 ಮನೆಗಳನ್ನು ಸುಟ್ಟು ಹಾಕಲಾಗಿದೆ ಎಂದು ಅಧಿಕೃತವಾಗಿ ತಿಳಿಸಲಾಗಿದೆ.



ಕೋಮುದ್ವೇಷದ ಜ್ವಾಲೆ

ಕಂಧಮಲ್ ಜಿಲ್ಲೆ ಹಲವು ವರ್ಷಗಳಿಂದ ಕೋಮುವಾದಿ ಚಟುವಟಿಕೆಗಳ ಕೇಂದ್ರವಾಗಿದೆ. ಆದರೂ ಒರಿಸ್ಸಾ ಸರಕಾರ ಮತ್ತು ಜಿಲ್ಲಾ ಆಡಳಿತ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವಲ್ಲಿ ವಿಫಲವಾಗಿದೆ ಎಂಬ ಟೀಕೆಯಿದೆ. ಕೇಂದ್ರ ಗೃಹಮಂತ್ರಿಗಳು ಒರಿಸ್ಸಾಕ್ಕೆ ಭೇಟಿ ನೀಡಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೂ ದೂರು ಹೋಗಿದ್ದು ಅದು ಈ ಬಗ್ಗೆ ತನಿಖೆ ನಡೆಸಲು ಮುಂದಾಗಿದೆ. ರಾಜ್ಯ ಸರಕಾರ ನಿವೃತ್ತ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಗೆ ಆದೇಶ ನೀಡಿದೆ.

ಈ ಗಲಭೆಗಳು ಗುಜರಾತಿನಲ್ಲಿ ಮೋದಿ ನೇತೃತ್ವದಲ್ಲಿ ಬಿಜೆಪಿ ಚುನಾವಣಾ ಗೆಲುವಿನ ಸಂದರ್ಭದಲ್ಲಿಯೇ ಬಂದಿರುವುದು ಕಾಕತಾಳೀಯವಲ್ಲ. ಬಿಜೆಪಿ ಮುಖಂಡರು ಈಗ ಗುಜರಾತ ಮಾದರಿಯನ್ನು ದೇಶದಾದ್ಯಂತ ಪ್ರಯೋಗಿಸುವ ಮಾತಾಡುತ್ತಿದ್ದಾರೆ. ಒಂಭತ್ತು ವರ್ಷಗಳ ಹಿಂದೆ ಇದೇ ಕ್ರಿಸ್ಮಸ್ ಸಮಯದಲ್ಲಿ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಧಾಳಿಗಳೊಂದಿಗೆ ಈ ಪ್ರಯೋಗ ಆರಂಭವಾಯಿತು ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು. ಅಲ್ಲಿಯೂ ಮತಾಂತರವನ್ನು ವಿರೋಧಿಸುವ ಹೆಸರಿನಲ್ಲಿ ಡಾಂಗ್ಸ್ ಜಿಲ್ಲೆಯಲ್ಲಿ 1998ರ ಡಿಸೆಂಬರ್ 25ರಿಂದ 31ರ ನಡುವೆ ಹನ್ನೊಂದು ಚರ್ಚು ಗಳನ್ನು ಸುಟ್ಟು ಹಾಕಲಾಯಿತು.

ಗಲಭೆಯಿಂದ ಹೆದರಿ ಕಾಡು ಸೇರಿರುವ ಕ್ರೈಸ್ತ ಬುಡಕಟ್ಟು ಜನರು



ಆಗ ಬಿಜೆಪಿಯ ಬಗ್ಗೆ ಒಲವು ಹೊಂದಿರುವ 'ಪಯೊನಿರ್' ಪತ್ರಿಕೆ ಕೂಡಾ ಇದು ಭಾರತದ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಮೇಲಿನ ಧಾಳಿ, ಪ್ರಜಾಪ್ರಭುತ್ವವನ್ನು ಬಹುಸಂಖ್ಯಾತವಾದದ ಮಟ್ಟಕ್ಕೆ ಇಳಿಸಲಾಗುತ್ತಿದೆ ಎಂದು ಟೀಕಿಸಿತ್ತು. ಆಗ ನರ್ಮದಾ ಮೊಕದ್ದಮೆಯಲ್ಲಿ ಗುಜರಾತ ಸರಕಾರದ ಪರ ವಕಾಲತ್ತು ನಡೆಸುತ್ತಿದ್ದ ಪ್ರಖ್ಯಾತ ವಕೀಲರಾದ ಫಾಲಿ ನಾರಿಮನ್ ಈ ಘಟನೆಗಳಿಗೆ ಬಿಜೆಪಿ ಸರಕಾರವೇ ಹೊಣೆ ಎಂದು ಟೀಕಿಸಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಅಲ್ಪ ಸಂಖ್ಯಾತರ ರಕ್ಷಣೆ ಪ್ರತಿಯೊಂದು ನಾಗರಿಕ ಪ್ರಭುತ್ವದ ಮುಖ್ಯ ಲಕ್ಷಣ ಎಂದು ಅವರು ನೆನಪಿಸಬೇಕಾಗಿ ಬಂತು.

ಆದ್ದರಿಂದ ಈಗ ಒರಿಸ್ಸಾದಲ್ಲಿ ನಡೆಯುತ್ತಿರುವುದು ಕೇವಲ ಕಾನೂನು-ವ್ಯವಸ್ಥೆಯ ಪ್ರಶ್ನೆಯಲ್ಲ, ಆಧುನಿಕ ಭಾರತದ ಗಣತಂತ್ರ ಸ್ವರೂಪವನ್ನು ಬುಡಮೇಲು ಮಾಡುವ ಪ್ರಯತ್ನ ಎಂದು ಸಿಪಿಐ(ಎಂ) ಎಚ್ಚರಿಸಿದೆ. ಭಾರತದ ಬಹುಪಾಲು ಜನರು ನಮ್ಮ ಆಧುನಿಕ ಗಣತಂತ್ರ ಆಧಾರವನ್ನು ಉಳಿಸಿ ಬೆಳೆಸಬೇಕೆಂದು ಬಯಸುವವರು. ಇವರೆಲ್ಲಾ ಸೇರಿ ಕೋಮುವಾದ ಹಬ್ಬುವುದನ್ನು ತಡೆದು ನಿಲ್ಲಿಸಬೇಕಾಗಿದೆ ಎಂದು ಅದು ಕರೆ ನೀಡಿದೆ.

ಸಿಐಟಿಯುನಲ್ಲಿ ಸಂಘಟಿತರಾಗುವತ್ತ ಹೊಸಕೋಟೆ ಶ್ರಮಿಕ ವರ್ಗ

ಹೊಸಕೋಟೆ ಕೈಗಾರಿಕಾ ಪ್ರದೇಶವು ಕೆಲ ಪಾಳೇಗಾರಿಕೆ ಶಕ್ತಿಗಳ ಅಟ್ಟಹಾಸದ ಕಾರಣಗಳಿಂದಾಗಿ, ಮಾಲೀಕರಿಗೆ ಶ್ರಮಿಕರನ್ನು ಮನಸೋ ಇಚ್ಚೆ ದುಡಿಸಿಕೊಳ್ಳಲು ಹುಲುಸಾದ ಜಾಗವೆನಿಸಿತ್ತು. 2005-06 ನೇ ಸಾಲಿನ ಕಾರ್ಮಿಕರ ಸಂಘಟನೆ ಪ್ರಯತ್ನಗಳಿಗೆ ಮಾಲೀಕ ವರ್ಗ ತಡೆಯೊಡ್ಡಿದರೂ ಕೆಲ ಸಂಘಟನೆಗಳು ಅತ್ಯಂತ ನಿರ್ದಯವಾಗಿ ಬಲಿಷ್ಠತೆ ರೂಢಿಸಿಕೊಂಡು ಬೆಳೆದವು.

ಕಾರ್ಖಾನೆಗಳೊಳಗೆ ಇರುವ ಒಂದೊಂದು ಸಂಘದಿಂದ ಇಂದಿನ ದಿನಗಳಲ್ಲಿ ಹೋರಾಟ ನಡೆಸಿ ಹೆಚ್ಚಿನ ಪ್ರಯೋಜನವಿಲ್ಲವೆಂದೂ ಅದರ ಬದಲಾಗಿ ಎಲ್ಲಾ ವರ್ಗದ ದುಡಿಯುವ ಜನ ಒಂದಾಗಬೇಕಾದದ್ದು ಅನಿವಾರ್ಯತೆ ಎಂದೂ ಮನಗಂಡು ತಾಲ್ಲೂಕಿನ ಬೀಡಿ, ಅಗರಬತ್ತಿ, ಅಂಗನ ವಾಡಿ, ಕಟ್ಟಡ, ಬಿಸಿಯೂಟ, ಗಾರ್ಮೆಂಟ್ಸ್, ಪಂಚಾಯಿತಿ, ಕಾರ್ಖಾನೆಗಳಲ್ಲಿ ದುಡಿಯುವ ಸಿಐಟಿಯು ಸಂಘಟನೆಯಡಿಯ ಎಲ್ಲಾ ಸಂಘಗಳು ಒಟ್ಟಾಗಿ ಪ್ರಥಮ ತಾಲ್ಲೂಕು ಸಮ್ಮೇಳನವನ್ನು ದಿನಾಂಕ: 30.12.2007ರಂದು ಆಯೋಜಿಸಿದ್ದವು.

ಅಂದು ಬೆಳಿಗ್ಗೆ 11.30ಕ್ಕೆ ತಾಲ್ಲೂಕು ಸಿಐಟಿಯು ಕಛೇರಿಯಿಂದ ಹೊರಟ ಮೆರವಣಿಗೆಯಲ್ಲಿ ಸುಮಾರು 1200 ಜನ ಕಾರ್ಮಿಕರು ಭಾಗವಹಿಸಿ ಮೆರವಣಿಗೆ ಬಹಿರಂಗ ಅಧಿವೇಶನಗಳನ್ನು ಯಶಸ್ವಿಗೊಳಿಸಿದರು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕಾಂ:ಹೆಚ್.ಎನ್. ಗೋಪಾಲಗೌಡರು ಕೆಲ ಪಾಳೆಗಾರಿಕೆ ಪ್ರವೃತ್ತಿಯ ಪುಂಡರಿಂದಾಗಿ ತಾಲ್ಲೂಕಿನ ಕಾರ್ಮಿಕ ವರ್ಗ ಪಟ್ಟ ಬವಣೆಗಳ ಕುರಿತು ಮಾತನಾಡಿದರು.

ನಂತರ ಕಾಂ: ಮೀನಾಕ್ಷಿ ಸುಂದರಂ ಅವರು ಮಾತನಾಡಿ ದೇಶದ ಕಾರ್ಮಿಕರ ಕಾನೂನುಗಳ ಜಾರಿಗಳಲ್ಲಿ ಆಗುತ್ತಿರುವ ಅನ್ಯಾಯಗಳ ಕುರಿತು ಮಾತನಾಡಿದರು.



ನಂತರ ಅಂಗನವಾಡಿ ಜಿಲ್ಲಾ ಮುಖಂಡರಾದ ಕಾಂ: ಲೀಲಾವತಿಯವರು ಮಹಿಳಾ ಅಂಗನವಾಡಿ ನೌಕರರುಗಳು ಗೌರವ ಭತ್ಯೆಯಲ್ಲಿ ಉದ್ಯೋಗ ಖಾಯಂ ಆಗಿ ಇಲ್ಲದೆ ಪಡುವ ಕಷ್ಟಗಳ ಕುರಿತು ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ಕಾಂ:ಕೆ.ಎನ್.ಉಮೇಶ್‌ರವರು ವಹಿಸಿದ್ದರು.

ನಂತರ 3.00 ಗಂಟೆಯಿಂದ ಸಂಜೆ:5.30ರವರೆಗೆ ಆಯ್ದ ಕಾರ್ಮಿಕ ಮುಖಂಡರ ಸಮ್ಮೇಳನ ಜರುಗಿ ತಾಲ್ಲೂಕು ಸಿಐಟಿಯು ಸಮಿತಿ ರಚನೆಗೊಂಡಿತು.



ಹೊಸಕೋಟೆ ತಾಲ್ಲೂಕು ಸಿಐಟಿಯು ಸಮಿತಿ ಅಧ್ಯಕ್ಷರಾಗಿ ಕಾಂ. ಹರೀಂದ್ರ, ವಕೀಲರು, ಅಂಗನವಾಡಿ ನೌಕರರ ತಾಲ್ಲೂಕು ಅಧ್ಯಕ್ಷರು ಇವರು ಆಯ್ಕೆಯಾದರು. ಕಾಂ. ಲೋಕೇಶ್ ವೋಲ್ವ ವರ್ಕರ್ಸ್ ಅಸೋಸಿಯೇಷನ್ ಅಧ್ಯಕ್ಷರು, ಇವರು ತಾಲ್ಲೂಕು ಸಮಿತಿ ಪ್ರಧಾನ ಕಾರ್ಯದರ್ಶಿಗಳಾಗಿ, ಬೆಲ್ ಸೆರಾಮಿಕ್ಸ್‌ನ ಪುರುಷೋತ್ತಮ ಸಂಘಟನಾ ಕಾರ್ಯದರ್ಶಿಯಾಗಿ ಹೀಗೆ 30 ಜನರ ತಾಲ್ಲೂಕು ಸಮಿತಿ ರಚನೆಗೊಂಡಿತು.

ವರದಿ: ನರಸಿಂಹಮೂರ್ತಿ

10 ಲಕ್ಷ ಸದಸ್ಯತ್ವದತ್ತ ತಮಿಳುನಾಡು ಸಿಐಟಿಯು ಮುನ್ನಡೆ..

ಒಂದೇ ವರ್ಷದಲ್ಲಿ 3.5 ಲಕ್ಷ ಸದಸ್ಯತ್ವ ಹೆಚ್ಚಳ

ಇತ್ತೀಚಿನ ದಿನಗಳಲ್ಲಿ ದೇಶದ ಎಡ ಚಳುವಳಿಗೆ ಅತ್ಯಂತ ಮಹತ್ವದ ಕಾಣಿಕೆ ನೀಡುತ್ತಿರುವ ಪ್ರಮುಖ ರಾಜ್ಯಗಳಲ್ಲಿ ನೆರೆಯ ತಮಿಳುನಾಡು ಒಂದು. ಇದೀಗ ಒಂದೇ ವರ್ಷದಲ್ಲಿ ಮೂರುವರೆ ಲಕ್ಷ ಹೊಸ ಕಾರ್ಮಿಕರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಅಲ್ಲಿನ ಸಿಐಟಿಯು ನೇತೃತ್ವದ ಕಾರ್ಮಿಕ ಚಳುವಳಿ ಮತ್ತೊಂದು ಮೈಲಿಗಲ್ಲಿನತ್ತ ದಾಪುಗಾಲು ಹಾಕಿದೆ.

2006ರ ಡಿಸೆಂಬರ್‌ನಲ್ಲಿ ಸಿಐಟಿಯು ರಾಜ್ಯ ಸಮ್ಮೇಳನ ನಡೆಸಿದಾಗ ಇದ್ದ ಒಟ್ಟು ಸದಸ್ಯತ್ವ ಮೂರುವರೆ ಲಕ್ಷ. ಆಗ ಮುಂದಿನ ಸಮ್ಮೇಳನದೊಳಗಾಗಿ (ಮೂರುವರ್ಷ) 10 ಲಕ್ಷ ಸದಸ್ಯತ್ವದ ಗುರಿ ಸಾಧಿಸುವ ಯೋಜನೆಯೊಂದನ್ನು ಸಮ್ಮೇಳನದ ಮುಂದೆ ಮಂಡಿಸಲಾಯಿತು. ಆಗ ಸ್ವತ: ಪ್ರತಿನಿಧಿಗಳೇ ಹುಬ್ಬೇರಿಸಿದ್ದರು. ಅಲ್ಲದೆ, ಇದೊಂದು ಕೇವಲ ಪೇಪರ್‌ನಲ್ಲಿ ಮಾತ್ರ ಉಳಿಯಬಹುದಾದ ಯೋಜನೆಯೇನೋ ಎಂಬ ಅನುಮಾನ ಕೂಡ ವ್ಯಕ್ತಪಡಿಸಿದ್ದರು.

ಆದರೆ ಯೋಜನಾಬದ್ಧವಾದ ಕೆಲಸ ಮತ್ತು ಸಂಘಟಿತ ಕಾರ್ಮಿಕವರ್ಗದ ಸಹಕಾರ ಇದ್ದರೆ ಎಂತಹ ಕಠಿಣವಾದ ಯೋಜನೆಯನ್ನು ಜಾರಿ ಮಾಡುವುದು ಕಷ್ಟವೇನಲ್ಲ ಎಂಬುದನ್ನು ತಮಿಳುನಾಡು ಕಾರ್ಮಿಕ ಚಳುವಳಿ 2007ರ ಸದಸ್ಯತ್ವದಲ್ಲಿ ಸಾಬೀತು ಪಡಿಸಿದೆ.

2006ರಲ್ಲಿ 3.5 ಲಕ್ಷ ಇದ್ದ ಸದಸ್ಯತ್ವ, 2007ರ ಒಂದೇ ವರ್ಷದಲ್ಲಿ 7 ಲಕ್ಷಕ್ಕೆ ದಾಪುಗಾಲು ಹಾಕಿದೆ. ಉಳಿದ ಇನ್ನೆರಡು ವರ್ಷಗಳಲ್ಲಿ ಇದೇ ಪ್ರಯತ್ನ ಮುಂದುವರೆದರೆ ಮುಂದಿನ ಸಮ್ಮೇಳನದೊಳಗಾಗಿ (ಇನ್ನೆರಡು ವರ್ಷದಲ್ಲಿ) 10 ಲಕ್ಷ ಸದಸ್ಯತ್ವ ನೊಂದಣಿ ಮಾಡಿಸುವುದು ಏನೇನೂ ಕಷ್ಟವಾಗಲಾರದು ಎಂಬ ಅನುಭವ ಅಲ್ಲಿಯ ಸಂಗಾತಿಗಳದ್ದು.

ಅಂದ ಹಾಗೆ ಈ ಯಶಸ್ವಿ ಸಾಧನೆಯ ಹಿಂದೆ ತಮಿಳುನಾಡಿನ ಸಂಘಟಿತ ಕಾರ್ಮಿಕ ವರ್ಗ ನೀಡಿದ ಸಹಕಾರವೇ ಮುಖ್ಯ ಕಾರಣವಾಗಿದೆ. ಸಿಐಟಿಯು ರಾಜ್ಯ ಸಮಿತಿ ನಿರ್ದಿಷ್ಟವಾಗಿ ಸಿದ್ದಪಡಿಸಿದ ಯೋಜನೆಯ ಜಾರಿಗೆ ಅಗತ್ಯವಾದ ಹಣಕಾಸಿನ ನೆರವನ್ನು ಅಲ್ಲಿನ ಸಂಘಟಿತ ವರ್ಗ ನೀಡಿತು. ಅದರಲ್ಲಿ ಪ್ರಮುಖವಾಗಿ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಷನ್ ರೂ. 6 ಲಕ್ಷ, ವಿದ್ಯುತ್ ವಲಯದ ಕಾರ್ಮಿಕರ ಸಂಘದಿಂದ ರೂ. 2 ಲಕ್ಷ, ಬಿಎಚ್‌ಇಎಲ್ ಕಾರ್ಮಿಕರಿಂದ ರೂ. 40 ಸಾವಿರ, ಎನ್‌ಎಲ್‌ಎಲ್ ಕಾರ್ಮಿಕರಿಂದ ರೂ.20 ಸಾವಿರ ಹೀಗೆ, ಅಸಂಘಟಿತ ಕಾರ್ಮಿಕರ ಸಂಘಟನೆಗಾಗಿ ನೆರವಿನ ಹಸ್ತ ಚಾಚಿದವು.


ಈ ನೆರವನ್ನು ಪಡೆದ ರಾಜ್ಯ ಸಮಿತಿ ಪ್ರತಿ ಜಿಲ್ಲೆಯಲ್ಲಿಯೂ ನಿರ್ದಿಷ್ಟವಾಗಿ ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಂಘಟನೆಗಾಗಿ ಪೂರ್ಣಾವಧಿ ಕಾರ್ಯಕರ್ತರನ್ನು ನಿಯೋಜಿಸಲು ಸೂಚಿಸಿ ರಾಜ್ಯದ ಪ್ರತಿ ಜಿಲ್ಲಾ ಸಮಿತಿಗಳಿಗೆ ತಲಾ ರೂ. 18,000 ದಂತೆ 34 ಜಿಲ್ಲೆಗಳಿಗೆ ಸಹಾಯ ನೀಡಿತು. ಆಯಾ ಜಿಲ್ಲಾ ಸಮಿತಿಗಳು ಸ್ಥಳೀಯವಾಗಿ ಮತ್ತಷ್ಟು ಸಂಪನ್ಮೂಲ ಸೇರಿಸಿ ಪೂರ್ಣಾವಧಿ ಕಾರ್ಯಕರ್ತರನ್ನು ನೇಮಿಸಿ ಕೆಲಸಕ್ಕಿಳಿಸಿದವು. ಇದರಿಂದ 2007ರಲ್ಲಿ ಮಾತ್ರವೇ ಕಾರ್ಮಿಕ ರಂಗಕ್ಕೆ 50 ಹೊಸ ಪೂರ್ಣಾವಧಿ ಕಾರ್ಯಕರ್ತರನ್ನು ನೇಮಿಸಲಾಯಿತು. ಇದರ ಒಟ್ಟಾರೆ ಪರಿಣಾಮವಾಗಿ 2006ರಲ್ಲಿ 3.5 ಲಕ್ಷ ಇದ್ದ ಸದಸ್ಯತ್ವ 2007ರಲ್ಲಿ 7 ಲಕ್ಷಕ್ಕೆ ನೆಗೆತ ಸಾಧಿಸಿತು. ಅಲ್ಲದೆ, ಇನ್ನೆರಡು ವರ್ಷದೊಳಗೆ ಸುಮಾರು 200 ಪೂರ್ಣಾವಧಿ ಕಾರ್ಯಕರ್ತರನ್ನು ಅಸಂಘಟಿತ ಕ್ಷೇತ್ರಕ್ಕಾಗಿಯೇ ನೇಮಿಸಿ 10 ಲಕ್ಷ ಸದಸ್ಯತ್ವ ಗುರಿ ಸಾಧಿಸುವ ಉದ್ದೇಶವನ್ನು ತಮಿಳುನಾಡು ಸಿಐಟಿಯು ರಾಜ್ಯ ಸಮಿತಿ ಹೊಂದಿದೆ.

2007ರಲ್ಲಿ ಸಾಧಿಸಲಾದ ವಿವಿಧ ವಿಭಾಗಗಳ ಸರಿಸುಮಾರು ಸದಸ್ಯತ್ವದ ಪಕ್ಷಿ ನೋಟ ಇಲ್ಲಿದೆ.

ಪ್ಲಾಂಟೇಷನ್	50,000
ರಸ್ತೆ ಸಾರಿಗೆ	1,00,000
ಅಂಗನವಾಡಿ	40,000
ಶರಾಬು ಅಂಗಡಿ ಕಾರ್ಮಿಕರು	20,000
ಗೇರು	50,000
ಕಟ್ಟಡ	1,00,000
ಟೈಲರಿಂಗ್	50,000
ಸಹಕಾರಿ ರಂಗದ ನೌಕರರು	25,000
ಮೀನುಗಾರಿಕೆ	20,000
ಕೈಮಗ್ಗ/ವಿದ್ಯುತ್‌ಮಗ್ಗ	50,000
ಬೀಡಿ	50,000
ಹಮಾಲಿ	10,000
ಟೆಕ್ಸ್‌ಟೈಲ್ಸ್	20,000
ಸಂಘಟಿತ ಕ್ಷೇತ್ರದಲ್ಲಿ	1,00,000
ಸ್ಥಳೀಯ ಸಂಸ್ಥೆಗಳಲ್ಲಿ	20,000
ಇತರೆ ಅಸಂಘಟಿತ ಕ್ಷೇತ್ರ	1,00,000
ಚರ್ಮ ಹದ ಮಾಡುವವರು	20,000

ಸಾಂಪ್ರದಾಯಿಕವಾಗಿ ಸಂಘಟಿತರಾಗಿದ್ದ ಕಾರ್ಮಿಕರ ಜೊತೆ ಜೊತೆಯಲ್ಲೆ ವಿಶೇಷವಾಗಿ ಖಾಸಗಿ ಶಾಲಾ ಶಿಕ್ಷಕರು, ಕೊರಿಯರ್ ಸೇವೆಯಲ್ಲಿರುವ ಕಾರ್ಮಿಕರು, ಖಾಸಗಿ ಆಸ್ಪತ್ರೆಯ ನೌಕರರು, ವಿವಿಧ ಕಾರ್ಖಾನೆ, ಉದ್ದಿಮೆಗಳಲ್ಲಿ ಅರೆ ಮತ್ತು ಗುತ್ತಿಗೆ, ತರಬೇತಿಯಲ್ಲಿರುವ ಕಾರ್ಮಿಕರನ್ನು ನೊಂದಣಿ ಮಾಡಿಸಲು ಆದ್ಯತೆ ನೀಡಿದ್ದರ ಫಲವೇ ಈ ಯಶಸ್ಸಿನ ಹಿಂದಿರುವ ಗುಟ್ಟು ಎನ್ನಲಾಗಿದೆ. ಅಲ್ಲದೆ ತಮಿಳುನಾಡಿನ ಕಾರ್ಮಿಕರ ಮಧ್ಯೆ ಇರುವ ರಾಜಕೀಯ ಪ್ರಜ್ಞೆ ಕೂಡ ಒಂದು ಪ್ರಮುಖ ಕಾರಣ. ನಮ್ಮ ನಿತ್ಯ ಕೆಲಸದ ವಿಧಾನದಲ್ಲಿ ಬದಲವಣೆ ಮಾಡಿಕೊಂಡು ಯೋಜನಾಬದ್ಧವಾಗಿ ಕೆಲಸ ಮಾಡಿದರೆ ನಮ್ಮಲ್ಲೂ ಇದು ಸಾಧ್ಯ ಅಲ್ಲವೇ?

– ಕೆ. ಮಹಾಂತೇಶ್



ಬುದ್ಧದೇವ್ ಮಾತನಾಡುತ್ತಿರುವುದು

ಹನ್ನೊಂದು ತಿಂಗಳ ಯಾತನೆಗಳ ನಂತರ ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಕೊನೆಗೂ ಶಾಂತಿ, ಉಲ್ಲಾಸದ ವಾತಾವರಣ ಮರಳಿದೆ. ಡಿಸೆಂಬರ್ 26 ರಂದು ನಡೆದ ಬೃಹತ್ ರ್‍ಯಾಲಿ ಇದರ ಸಂಕೇತವಾಯಿತು. ಸಿಪಿಐ(ಎಂ) ಸಂಘಟಿಸಿದ್ದ ಈ ರ್‍ಯಾಲಿಯನ್ನು ಉದ್ದೇಶಿಸಿ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಜಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಮನ್ ಬಸು ಹಾಗೂ ಸಿಪಿಐ(ಎಂ) ಸಂಸತ್ ಸದಸ್ಯರಾದ ಮಹಮ್ಮದ್ ಸಲೀಂ ಮತ್ತು ಲಕ್ಷಣ್ ಸೇಠ್ ಮಾತಾಡಿದರು, ಪ್ರಜಾಪ್ರಭುತ್ವವಾದಿಗಳ ನೋವುಗಳಿಗೆ, ಈಗ ಮೂಡುತ್ತಿರುವ ಸಮಾಧಾನಕ್ಕೆ ದನಿ ನೀಡಿದರು.



ನಂದಿಗ್ರಾಮದಲ್ಲಿ ನೆರೆದ ಅಪೂರ್ವ ಜನಸ್ತೋಮ

ನಂದಿಗ್ರಾಮದಲ್ಲಿ ಶಾಂತಿ, ಅಭಿವೃದ್ಧಿ ಮತ್ತು ಬಡವರ ಐಕ್ಯತೆಯ ಮುಗಿಲು ಮುಟ್ಟಿದ ಘೋಷಣೆ

ಡಿಸೆಂಬರ್ 26 ರಂದು ಅಪೂರ್ವ ರ್‍ಯಾಲಿ

ಅಂದು ಬೆಳಿಗ್ಗೆ ಆರು ಘಂಟೆಯಿಂದಲೇ ಸಾವಿರ-ಸಾವಿರ ಸಂಖ್ಯೆಗಳಲ್ಲಿ ಮುತ್ತಮುತ್ತಲಿಂದ ರೈತರು, ಕಾರ್ಮಿಕರು, ಸಣ್ಣ ವ್ಯಾಪಾರಸ್ಥರು, ವಿದ್ಯಾರ್ಥಿಗಳು, ಮಹಿಳೆಯರು ಬರಲಾರಂಭಿಸಿದರು. ರ್‍ಯಾಲಿ ನಡೆಯಬೇಕಾಗಿದ್ದ ಸ್ಥಳ ಒಂದೂವರೆ ಲಕ್ಷ ಜನರು ಸೇರಬಹುದಾದ ವಿಶಾಲ ಮೈದಾನ. ಬಹಿರಂಗ ಸಭೆ ಆರಂಭವಾಗುವ ವೇಳೆಗೆ ಅದು ತುಂಬಿ ತುಳುಕುತ್ತಿತ್ತು. ಎಲ್ಲೆಲ್ಲೂ ಜನ-ಹುಡುಗರು, ಯುವಕರು, ಮುದುಕರು, ಎಲ್ಲರ ಮೊಗಗಳಲ್ಲೂ ಅರಳಿದ್ದ ನಗು, ಸಂತೋಷ ಮತ್ತು ಹೊಸ ಹುರುಪು. ಹನ್ನೊಂದು ತಿಂಗಳ ಕಳವಳ, ಸಂಕಟಗಳನ್ನು ಕೊನೆಗೂ ಮೀರಿ ನಿಂತ ನವೋಲ್ಲಾಸ.

ಮಾಧ್ಯಮಗಳವರೂ ಇದ್ದರು, ಅದರಲ್ಲೂ ಕಾರ್ಪೊರೇಟ್ ಮಾಧ್ಯಮಗಳ ಮಂದಿ-ಗಂಟುಮೋರೆ ಹಾಕಿಕೊಂಡು, ಸತ್ಯವನ್ನು ಎದುರಿಸಲು ಕಷ್ಟಪಡುತ್ತಾ. ಈ ರ್‍ಯಾಲಿಯನ್ನು ಸಣ್ಣದಾಗಿ ತೋರಿಸುವುದು ಹೇಗೆ ಎಂಬುದೇ ಅವರ ಮುಂದಿದ್ದ ದೊಡ್ಡ ಸಮಸ್ಯೆ. ಕೆಂಬಾವುಟಗಳ ನಡುವೆ, ಹರ್ಷ ತುಂಬಿದ ಮುಖಗಳ ನಡುವೆ ಎಲ್ಲಾದರೂ ಖಾಲಿ ಜಾಗ ಕಾಣಿಸುತ್ತದೆಯೋ ಎಂದು ಹುಡುಕಾಡಿಯೇ ಹುಡುಕಾಡಿದರು; ಆದರೆ ಸಿಗಲೇ ಇಲ್ಲ.

ಇತ್ತೀಚೆಗೆ ಬಹಳ ವರ್ಷಗಳಿಂದ ಕೊಲ್ಕತ ಮಹಾನಗರದ ಹೊರಗೆ ನಡೆದ ಅತಿ ದೊಡ್ಡ ರ್‍ಯಾಲಿಯಿದು ಎಂದು ಹೇಳಲಾಗಿದೆ. ಕಳೆದ ಹನ್ನೊಂದು ತಿಂಗಳ ಹಿಂದೆ ಸ್ಥಳೀಯ ಪ್ರತಿಗಾಮಿ ಶಕ್ತಿಗಳು ಗ್ರಾಮೀಣ ಬಡವರ ನಡುವಿನ ಐಕ್ಯತೆಯನ್ನು ಮುರಿಯುವಲ್ಲಿ ಯಶಸ್ವಿಯಾದವು. ಅವರೊಡನೆ ಎಡ ಸಂಕುಚಿತವಾದಿಗಳೂ ಸಂತೋಷದಿಂದ ಕೈಜೋಡಿಸಿ ನಂದಿಗ್ರಾಮದಲ್ಲಿ ದೊಡ್ಡ ದಾಂಧಲೆಯನ್ನೇ ನಡೆಸಿದರು. ಆದರೆ ಈ ಪ್ರಯತ್ನವನ್ನು ನೇರವಾಗಿಯೇ ಎದುರಿಸಲಾಯಿತು. ಜನಗಳ ನಡುವೆ ಹೋಗಿ ಅವರ ಜೊತೆ ಮಾತಾಡಿ ದುಡಿಯುವ ಜನರ ಪರವಾದ ನಿಲುವುಗಳನ್ನು ವಿವರಿಸಲಾಯಿತು. ಕೊನೆಗೂ ದ್ವೇಷ, ಹಿಂಸಾಚಾರದ ಅಲೆಯನ್ನು ಹಿಮ್ಮೆಟ್ಟಿಸಲಾಯಿತು. ಇದನ್ನು ನೆನಪಿಸಿದ ಬಿಮನ್ ಬಸು ಕಳೆದ ಹನ್ನೊಂದು ತಿಂಗಳು ಇಲ್ಲಿ ಧಾಳಿ ನಡೆದದ್ದು ಪ್ರಜಾಪ್ರಭುತ್ವದ ಮೇಲೆ, ಪ್ರಜಾಸತ್ತಾತ್ಮಕ ವಿಧಿ-ವಿಧಾನಗಳ ಮೇಲೆ ಎಂದರು. ತಮ್ಮ ಭಾಷಣ ಆರಂಭಿಸುವ ಮೊದಲು ಅವರು ಈ ಹೋರಾಟದಲ್ಲಿ ಹುತಾತ್ಮರಾದ 29 ಮಂದಿಯ ಕುಟುಂಬಗಳಿಗೆ ತಲಾ ಎರಡು ಲಕ್ಷ ರೂ.ಗಳ ಚೆಕ್ ವಿತರಿಸಿದರು.

ಇಲ್ಲಿ ಶಾಂತಿ ದೃಢ ಆಧಾರದ ಮೇಲೆ ಸ್ಥಾಪನೆಗೊಳ್ಳಬೇಕು, ಬಡವರ ಐಕ್ಯತೆ ಹೆಚ್ಚಬೇಕು ಹಾಗೂ ನಂದಿಗ್ರಾಮದ ಎಲ್ಲರ ಪ್ರಗತಿ ಮತ್ತು ಸಂತಸವನ್ನು ಹೆಚ್ಚಿಸುವ ಏಕೈಕ ಗುರಿಯಿಂದ ಅಭಿವೃದ್ಧಿ ಕೆಲಸಗಳನ್ನು ತೀವ್ರಗೊಳಿಸಬೇಕು ಎಂದು ಬಿಮನ್‌ಬಸು ಹೇಳಿದರು.

'ಪ್ರಾಣ ಕಳಕೊಂಡವರೆಲ್ಲಾ ಬಡ ಗ್ರಾಮಸ್ಥರು'



ಸಂತ್ರಸ್ತರಿಗೆ ಪರಿಹಾರ ವಿತರಣೆ

ಮುಖ್ಯಮಂತ್ರಿ ಬುದ್ಧದೇಬ್ ಭಾಷಣಕ್ಕೆ ಎದ್ದು ನಿಂತಾಗ ಭಾರೀ ಕರತಾಡನ ಇಡೀ ಮೈದಾನವನ್ನು ವ್ಯಾಪಿಸಿತು. ಆದರೂ 'ನಂದಿಗ್ರಾಮದ ಜನಗಳಂತೆ ನಾವೂ ನಮ್ಮ ಹೃನ್ಮನಗಳಲ್ಲಿ ಈ ಹನ್ನೊಂದು ಸಂಕಟಗ್ರಸ್ತ ತಿಂಗಳಲ್ಲಿ ಬಹಳವಾಗಿ ನೊಂದಿದ್ದೇವೆ, ಈ ಗ್ರಾಮಸ್ಥರು ಅನುಭವಿಸಿದ ದೈಹಿಕ ಮತ್ತು ಮಾನಸಿಕ ನೋವು ನಮಗೆ ಯಾತನೆ ನೀಡಿವೆ' ಎಂದೇ ಅವರು ತಮ್ಮ ಭಾಷಣ ಆರಂಭಿಸಿದರು. ಕೊನೆಗೂ ಶಾಂತಿ, ಸಮಾಧಾನ, ಹರ್ಷ ಇಲ್ಲಿಗೆ ಮರಳಿದೆ, ಇದು ಶಾಶ್ವತವಾಗಿರಲಿ, ಅನಂತವಾಗಿರಲಿ ಎಂದು ಹಾರೈಸಿದ ಅವರು 'ನಾವು ಸತ್ತವರಿಗಾಗಿ ಅತ್ತೆವು, ಅವರು ಯಾರ ಕಡೆ ಸತ್ತರು ಎಂಬುದು ಮುಖ್ಯವಾಗಿರಲಿಲ್ಲ, ಅವರೆಲ್ಲಾ ಬಡಗ್ರಾಮಸ್ಥರಾಗಿದ್ದರು ಎಂಬುದೇ ಮುಖ್ಯ' ಎಂದು ಬಹಳ ನೊಂದುಕೊಂಡು ಹೇಳಿದರು. 'ಹೀಗಾಗಬಾರದಿತ್ತು, ನಾವು ಸದಾ ಅಭಿವೃದ್ಧಿಯ ಜೊತೆಗೆ ನೋವು, ಅನಿಶ್ಚತತೆ ಬರದಂತೆ ತಡೆಯಲು ಪ್ರಾಮಾಣಿಕವಾಗಿ ಶ್ರಮಿಸುತ್ತಾ ಬಂದವರು' ಎಂದವರು ಮುಂದುವರೆದು ಹೇಳಿದರು.

ಆದರೆ ಹಿಂಸಾಚಾರ ಮುಂದುವರೆಯಿತು. ಕೊಲೆ, ಲೂಟಿ, ಭಯೋತ್ಪಾದನೆ, ಮಾನಭಂಗ ಮುಂದುವರೆದವು. ಪಕ್ಕದ ಹಲ್ದಿಯಾದಂತೆ ಒಂದೊಮ್ಮೆ ಬಡ ಮೀನುಗಾರಿಕಾ ಹಳ್ಳಿ ಸಮೃದ್ಧಿ ಹೊಂದಬಾರದು ಎನ್ನುವವರು ಇದರಲ್ಲಿ ಭಾಗವಹಿಸಿದರು. ಇದು ರಾಜಕೀಯ ಸಮಯಸಾಧಕತನವಾಗಿತ್ತು, ಹಲ್ದಿ ನದಿಯ ಈಚೆಗಿರುವ ಗ್ರಾಮೀಣ ಜನರಿಗೆ ಅಪಾರ ಪ್ರಯೋಜನ ತರಬಹುದಾಗಿದ್ದ ಅಭಿವೃದ್ಧಿಯನ್ನು ಬಲಿಗೊಟ್ಟ ಸಮಯಸಾಧಕತನ. ನಂದಿಗ್ರಾಮ ಇಷ್ಟೆಲ್ಲ ಆದ ಮೇಲೆ ಒಂದು ಕೈಗಾರಿಕಾ ಪಟ್ಟಣವಾಗಿ ಬೆಳೆಯುವುದು ಸಾಧ್ಯವಿಲ್ಲವೇನೋ ಎಂದು ಬುದ್ಧದೇಬ್ ಖಿನ್ನ ದನಿಯಲ್ಲಿ ಉದ್ಗರಿಸಿದಾಗ ಒಂದು ಸಾಮೂಹಿಕ ನಿಟ್ಟುಸಿರು ಹೊಮ್ಮಿತು. ನಂತರ ಅವರು ಈ ವಲಯದ ಗ್ರಾಮೀಣ ಅಭಿವೃದ್ಧಿಗೆ ಒಂದು ಸಮಗ್ರ ಯೋಜನೆ ತಯಾರಿಸಲಾಗುವುದು ಎಂದರು.

ಕಳೆದ ಫೆಬ್ರುವರಿ ತಿಂಗಳಲ್ಲೇ ಖೆಜುರಿಯಲ್ಲಿ ಒಂದು ರ್‍ಯಾಲಿಯಲ್ಲಿ ಈ ನಂದಿಗ್ರಾಮದಲ್ಲಿ ಕೈಗಾರಿಕಾ ಸ್ಥಾವರ ಬರುವುದಿಲ್ಲ ಎಂದು ಸಾರಿದರೂ ರಾಜಕೀಯ ವಿರೋಧಿಗಳು ಲಕ್ಷಗೊಡಲಿಲ್ಲ, ಬಡ ಜನರ ಯಾತನೆಗಳು ಮುಂದುವರೆದವು. ಎಡರಂಗ ಮತ್ತು ಸಿಪಿಐ(ಎಂ) ಸದಾ ರೈತರ ಪರವಾಗಿ ನಿಲ್ಲುವಂತವು, ಅವರಿಂದ ಭೂಮಿಯನ್ನು ಕಿತ್ತುಕೊಳ್ಳುವ ಬಗ್ಗೆ ಕನಸಿನಲ್ಲೂ ಯೋಚಿಸುವಂತವರಲ್ಲ ಎಂದ ಬುದ್ಧದೇಬ್ ಕೃಷಿಯನ್ನು ದುರ್ಬಲಗೊಳಿಸಿ ಕೈಗಾರಿಕೆಗಳನ್ನು ಕಟ್ಟುವುದು ಕಾರ್ಯಸಾಧ್ಯವಲ್ಲದ ಮಾತು ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ, ಹಲವಾರು ಭೂಹೋರಾಟಗಳನ್ನು ನಡೆಸಿದ ನಮಗೆ ರೈತರಿಗೆ ಭೂಮಿಯೊಂದಿಗೆ ಇರುವ ಸಂಬಂಧ ಏನು ಎಂಬುದು ಗೊತ್ತಿದೆ ಎಂದರು. ಕೃಷಿಯ ನೆಲೆಯನ್ನು ಬಲಗೊಳಿಸಿ, ವಿಶಾಲಗೊಳಿಸಿ ಅದರ ಆಧಾರದ ಮೇಲೆಯೆ ಕೈಗಾರಿಕೆಗಳನ್ನು ಕಟ್ಟಲಾಗುವುದು ಎಂದು ಎಡರಂಗದ ಚುನಾವಣಾ ಪ್ರಣಾಳಿಕೆ ಸ್ಪಷ್ಟವಾಗಿ ಸಾರಿತ್ತು ಎಂದು ಅವರು ನೆನಪಿಸಿದರು.

ಬಂಗಾಳದ ಎಡರಂಗ ಸರಕಾರದ ಮೂವತ್ತು ವರ್ಷಗಳ ಜನಪರ, ಬಡವರ ಪರವಾದ ಸತತ ಪ್ರಯತ್ನದಲ್ಲಿ ನಂದಿಗ್ರಾಮ ಒಂದು ಹೊಸ, ಸ್ವಾಗತಾರ್ಹವಲ್ಲದ ಅನುಭವ ಎಂದ ಮುಖ್ಯಮಂತ್ರಿಗಳು ಬಾಂಬು, ಗನ್ನುಗಳ ಸಂಸ್ಕೃತಿ ರಾಜಕೀಯ ಕ್ರಿಯೆಯಲ್ಲ, ಕೊಲೆಗಡುಕತನ ಮತ್ತು ಭಯೋತ್ಪಾದನೆಯಷ್ಟೇ ಎಂದು ವರ್ಣಿಸಿದರು. ಮುಗ್ಧ, ನಿಶ್ಶಸ್ತ್ರ ಹಳ್ಳಿಗರನ್ನು ಕೊಂದು ಅವರು ಏನು ಸಾಧಿಸಬಯಸುತ್ತಾರೆ, ಬಡವರನ್ನು ವಿಭಜಿಸುತ್ತಾರಷ್ಟೇ ಎಂದರು.

ಈಗ ದುಷ್ಟ,, ಅರಾಜಕ ಶಕ್ತಿಗಳನ್ನು ನಂದಿಗ್ರಾಮದಿಂದ ಬಹಳ ಮಟ್ಟಿಗೆ ಹೊರದಬ್ಬಲಾಗಿದೆ. ಆದ್ದರಿಂದ ಜನಗಳು ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ, ಆಂದೋಲನಗಳಲ್ಲಿ ಕೈಜೋಡಿಸಬೇಕು, ಸಹಜ ಸ್ಥಿತಿಗೆ ಮರಳಿರುವ ನಂದಿಗ್ರಾಮದಲ್ಲಿ ಮುಂಬರುವ ದಿನಗಳಲ್ಲಿ 'ಶಾಂತಿ, ಅಭಿವೃದ್ಧಿ ಮತ್ತು ಬಡವರ ಐಕ್ಯತೆ ಮುಗಿಲು ಮುಟ್ಟುವ ಘೋಷಣೆಗಳಾಗಲಿ' ಎಂದು ಭಾಷಣ ಮುಕ್ತಾಯಗೊಳಿಸಿದಾಗ ಮೈದಾನದಲ್ಲಿ ಭಾರೀ ಕರತಾಡನ ಮಾರ್ದನಿಗೊಂಡಿತು.

ತ್ರಿಪುರಾ: ವಿಧಾನ ಸಭಾ ಚುನಾವನೆಗಳಿಗೆ ಎಡರಂಗದ ಅಭ್ಯರ್ಥಿಗಳ ಪಟ್ಟಿ ಪ್ರಕಟ

ತ್ರಿಪುರಾದಲ್ಲಿ ಫೆಬ್ರುವರಿ ತಿಂಗಳಲ್ಲಿ ವಿಧಾನಸಭೆಗೆ ಚುನಾವಣೆಗಳು ನಡೆಯಲಿವೆ. ಈಗ ಅಧಿಕಾರದಲ್ಲಿರುವ ಎಡರಂಗ ಚುನಾವಣೆಗಳಲ್ಲಿ ಸ್ಪರ್ಧಿಸಲಿರುವ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಡಿಸೆಂಬರ್ 25 ರಂದು ಪ್ರಕಟಿಸಿದೆ. ಈ ಪಟ್ಟಿಯಲ್ಲಿ 15 ಹೊಸಮುಖಗಳಿದ್ದು ಸಿಪಿಐ(ಎಂ)ನಿಂದ 55, ಸಿಪಿಐ ಮತ್ತು ಆರ್‌ಎಸ್‌ಪಿಯಿಂದ ತಲಾ 2 ಹಾಗೂ ಫಾರ್ವರ್ಡ್ ಬ್ಲಾಕ್ ನಿಂದ ಒಬ್ಬರು ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ.ಈ ಪಕ್ಷದ ಇನ್ನೊಬ್ಬ ಅಭ್ಯಥಿಯ ಹೆಸರನ್ನು ನಿರ್ಧರಿಸಬೇಕಾಗಿದೆ. ಒಟ್ಟು ಸ್ಥಾನಗಳ ಸಂಖ್ಯೆ 60. ಒಬ್ಬ ಮಂತ್ರಿಗಳೂ.ಸೇರಿದಂತೆ ನಾಲ್ವರು ಹಾಲಿ ಶಾಸಕರನ್ನು ಕೈಬಿಡಲಾಗಿದೆ. ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಈ ಬಾರಿ ಮೂರರಿಂದ ಐದಕ್ಕೆ ಏರಿದೆ.

2003ರಲ್ಲಿ ವಿಧಾನ ಸಭಾ ಚುನಾವಣೆಗಳಲ್ಲಿ ಗೆದ್ದ ನಂತರ ಎಡರಂಗ ಸತತವಾಗಿ ತನ್ನ ಬಲವನ್ನು ವಿವಿಧ ಚುನಾವಣೆಗಳಲ್ಲಿ ಹೆಚ್ಚಿಸಿಕೊಳ್ಳುತ್ತ ಬಂದಿದೆ. 2004ರಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ, ಪಂಚಾಯತ್ ಚುನಾವಣೆಗಳಲ್ಲಿ, 2005ರಲ್ಲಿ ಅಗರ್ತಲಾ ನಗರಸಭೆ ಚುನಾವಣೆ ಮತ್ತು ನಗರ ಪಂಚಾಯತ್ ಚುನಾವಣೆಗಳಲ್ಲಿ, ಬುಡಕಟ್ಟು ಸ್ವಾಯತ್ತ ಅಭಿವೃದ್ಧಿ ಮಂಡಳಿ(ಎಡಿಸಿ) ಚುನಾವಣೆಗಳಲ್ಲಿ ಹಾಗೂ 2006ರಲ್ಲಿ ಎಡಿಸಿ ಹಳ್ಳಿಗಳ ಗ್ರಾಮ ಸಮಿತಿ ಚುನಾವಣೆಗಳಲ್ಲಿ ಸಂಖ್ಯೆಯ ದೃಷ್ಟಿಯಿಂದಲೂ, ಶೇಕಡಾ ಮತಗಳಲ್ಲೂ ಎಡರಂಗದ ಬಲ ಹೆಚ್ಚಿದೆ. ○

'ಕರ್ನಾಟಕದ ಕಾಶ್ಮೀರ' ಕೊಡಗಿನೊಳಗೊಂದು ಇಣುಕು

ಪ್ರಕೃತಿ ಸಿರಿವಂತಿಕೆಗೆ ಹೆಸರಾದ ಕೊಡಗಿನ ರೈತರು, ಕೃಷಿ ಕಾರ್ಮಿಕರು, ದುಡಿಯುವ ಜನರು ಎದುರಿಸುತ್ತಿರುವ ಸಮಸ್ಯೆಗಳೇನು? ಅಲ್ಲಿ ರಾಜಕೀಯ ಪರಿಸ್ಥಿತಿ, ಬಲಾಬಲಗಳೇನು? ಒಂದು ಚಿತ್ರ.



ಕೊಡಗು ಜಿಲ್ಲೆ ಎಂದರೆ ಹೊರಗಿನ ಜನರಿಗೆ ತಟ್ಟನೆ ಕಣ್ಣಿಗೆ ಕಟ್ಟುವ ಚಿತ್ರವೇ ಬೇರೆ. ಕಣ್ತುಂಬುವ ಹಸಿರು ಪರ್ವತಶ್ರೇಣಿ. ದಟ್ಟ ಕಾಡು, ಧುಮ್ಮುಕ್ಕಿ ಹರಿವ ಜಲಪಾತಗಳು. ಶ್ರೀಮಂತ ಕಾಫಿ ಪ್ಲಾಂಟರುಗಳು, ಕಾರು, ಜೀಪುಗಳು, ಜಿ.ಪಿ. ರಾಜರತ್ನಂ ಅವರು ಹೇಳಿದಂತಹ 'ಮಡಿಕೇರಿ ಮೇಲ್‌ಮಂಜು.... ಕೊಡವರ ಯೋಧ, ಕೊಡವರ ಹುತ್ತರಿ ಹಬ್ಬ, ವಿಶಿಷ್ಟ ಶೈಲಿಯಲ್ಲಿ ಸೀರೆ ತೊಡುವ ಕೊಡವ ಮಹಿಳೆಯರು... ಹೀಗೆ?

ಕೊಡಗು ಜಿಲ್ಲೆಯಲ್ಲಿ ಇವೆಲ್ಲಾ ಇರುವುದು ನಿಜವೇ. ಆದರೆ ಇಷ್ಟು ಮಾತ್ರವೇ ಕೊಡಗಾ? ಇನ್ನೇನಾದರೂ ಇದೆಯಾ?

ಇಲ್ಲೊಂದು ಸಣ್ಣ ಮಾಹಿತಿ ಇದೆ ನೋಡಿ. ಶಾಲೆಗೆ ಹೋಗಲಾರದೆ ಶಾಲೆಯಿಂದ ಹೊರಗುಳಿದ ದಲಿತ ಮಕ್ಕಳ ಶೇಕಡವಾರು ಪ್ರಮಾಣದ ಲೆಕ್ಕಚಾರದಲ್ಲಿ ಕೊಡಗು ಜಿಲ್ಲೆಗೆ ಪ್ರಥಮ ರ್‍ಯಾಂಕ್. ಅಂದರೆ ಶಾಲೆಗೆ ಹೋಗಬೇಕಾದ ವಯಸ್ಸಿನ ಕೊಡಗಿನ ದಲಿತ ಮಕ್ಕಳಲ್ಲಿ ಶೇ.39.00 ರಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಎನ್ನುತ್ತದೆ ಶಿಕ್ಷಣ ಇಲಾಖೆ ಅಂಕಿ ಸಂಖ್ಯೆ(2001).

ಆಶ್ಚರ್ಯವಾಯಿತೇ? ಈ ವಿಚಾರದಲ್ಲಿ ಕೊಡಗು ಜಿಲ್ಲೆಯ ಶೈಕ್ಷಣಿಕವಾಗಿ ತೀರಾ ಹಿಂದುಳಿದ ಗುಲ್ಬರ್ಗಾ, ರಾಯಚೂರಿ ನಂತಹ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳನ್ನೂ ಮೀರಿಸಿ ಬಿಟ್ಟಿದೆ!

ಹೊರಗೆ ಬಿಂಬಸಲಾದ ಕೊಡಗಿಗೂ ವಾಸ್ತವದ ಕೊಡಗಿಗೂ ಬಾರಿ ಅಂತರವಿದೆ ಎಂಬುದಕ್ಕೆ ಇದೊಂದು ಸಣ್ಣ ಉದಾಹರಣೆಯಷ್ಟೆ ಇರಲಿ. ಕೊಡಗು ಪ್ರಾಕೃತಿಕ ಸೌಂದರ್ಯದ 'ಸ್ವರ್ಗ ಸೀಮೆಯಾದರೂ ಜನರ ಬದುಕಿಗೆ ಈ ಮಾತು ಹೇಳುವಂತಿಲ್ಲ. ವಿವಿಧ ಜನ ಸಮುದಾಯಗಳು ಅನುಭವಿಸುತ್ತಿರುವ ಸಮಸ್ಯೆಗಳದ್ದೇ ಒಂದು ಭಿನ್ನ ಕತೆ.

ಕೃಷಿ ಬಿಕ್ಕಟ್ಟು : ಜಿಲ್ಲೆಯ ಪ್ರಮುಖ ಬೆಳೆಗಳಾದ ಕಾಫಿ, ಭತ್ತ, ಏಲಕ್ಕಿ, ಕರಿ ಮೆಣಸು, ಇವುಗಳ ಬೆಲೆ ಕುಸಿತದಿಂದ ಸಣ್ಣ ಹಾಗೂ ಮಧ್ಯಮ ಬೆಳೆಗಾರರು ಕಂಗಾಲಾಗಿದ್ದಾರೆ. ಇವು ನಷ್ಟದ ಬೆಳೆಗಳಾಗಿ ಸಂಭವಿಸಿವೆ. ಕಾಫಿ ಬೆಲೆ ಕುಸಿದಾಗ ಪರ್ಯಾಯವಾಗಿ ವೆನಿಲ್ಲಾ ಬೆಳೆಸಿದವರು. ಆದರೆ ಬೆಲೆ ಕುಸಿತದಿಂದಾಗಿ ಕೈ ಸುಟ್ಟು ಕೊಂಡಿದ್ದಾರೆ. ಜಿಲ್ಲೆಯಲ್ಲಿ ಈ ವರ್ಷ ಬಿದ್ದ ಅಧಿಕ ಮಳೆಯಿಂದಾಗಿ ಅಪಾರ ಪ್ರಮಾಣದ ಹಾನಿಯಾಗಿದ್ದು ಫಸಲು ನಾಶವಾಗಿದೆ. ರೈತರ ಭವಿಷ್ಯ ಆತಂಕಕಾರಿಯಾಗಿದೆ. ಈಗಾಗಲೇ ಸಾಲದಲ್ಲಿ ಮುಳುಗಿರುವ ರೈತರು ಮುಂದಿನ ದಿನಗಳಲ್ಲಿ ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ. ತೋಟ ಕಾರ್ಮಿಕರಿಗೂ ಕೃಷಿ ಕಾರ್ಮಿಕರಿಗೂ ಇದರ ಪರಿಣಾಮದ ಬಿಸಿ ತಟ್ಟಿದೆ. ಕೃಷಿ ಚಟುವಟಿಕೆಗಳಿಂದ ಜನರು ದೂರ ಸರಿಯುತ್ತಿದ್ದಾರೆ. ಹಸಿ ಮೆಣಸು ಬೆಳೆಯೂ ನಷ್ಟದ ಬೆಳೆಯಾಗಿದ್ದು ಸರಿಯಾದ ಬೆಲೆ ಮತ್ತು ಮಾರುಕಟ್ಟೆ ಸಿಗದೆ ರೈತರು ಅದನ್ನು ರಸ್ತೆಗೆ ಬಿಸಾಡಿ ಪ್ರತಿಭಟಿಸಿದ ಉದಾಹರಣೆಗಳಿವೆ. ರೈತರ ಆತ್ಮಹತ್ಯೆ ಮುಂದುವರಿದಿದೆ. ಕೊಡಗು ಜಿಲ್ಲೆಯಲ್ಲಿ ಸುಮಾರು 57 ಜನ ರೈತರು ಆತ್ಮಹತ್ಯೆ ಮಾಡಿಕೊಂಡ ವರದಿಯಾಗಿವೆ. ಆದರೆ ವಾಸ್ತವವಾಗಿ ಈ ಸಂಖ್ಯೆ ಇನ್ನಷ್ಟು ಹೆಚ್ಚಿದೆ. ಮುಂದೆಯೂ ಇದು ಇನ್ನಷ್ಟು ಹೆಚ್ಚಾಗಿ ಮುಂದುವರೆಯುವ ಸಾಧ್ಯತೆಗಳಿವೆ. ಅನೇಕ ಸಣ್ಣ ಹಾಗೂ ಮಾಧ್ಯಮ ವಿಭಾಗದ ರೈತರು ತಮ್ಮ ಭೂಮಿಯನ್ನು ಮಾರಿ ಭೂ ಹೀನರಾಗುತ್ತಿದ್ದಾರೆ. ಪ್ರವಾಸೋದ್ಯಮದ ಹೆಸರಿನಲ್ಲಿ ಹೊರ ಜಿಲ್ಲೆಯ ಮತ್ತು ಹೊರ ರಾಜ್ಯಗಳ ಶ್ರೀಮಂತರು ಕೊಡಗಿನಲ್ಲಿ ಭೂಮಿಯನ್ನು ಖರೀದಿಸುತ್ತಿದ್ದಾರೆ.

ಕೃಷಿ ರಂಗದ ಬಿಕ್ಕಟ್ಟು ವ್ಯಾಪಾರಸ್ಥರು ಹಾಗೂ ಇತರ ವಿಭಾಗಗಳ ಮೇಲೂ ಪರಿಣಾಮ ಬೀರಿದೆ. ಜಿಲ್ಲೆಗೆ ವಲಸೆ ಬರುತ್ತಿದ್ದ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ. ಉದ್ಯೋಗಾಕಾಂಕ್ಷಿಗಳಾಗಿ ಜಿಲ್ಲೆಯಿಂದಲೇ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವ ಸ್ಥಿತಿ ತ್ವರಿತ ಗತಿಯಲ್ಲಿ ಮುಂದುವರಿಯುತ್ತಿದೆ.

ಭತ್ತದ ಬೆಳೆ ಹೆಚ್ಚಾಗಿ ಮಳೆಯನ್ನೇ ಆಶ್ರಯಿಸಿದ್ದು ಸ್ಥಳೀಯ ತಳಿಗಳನ್ನು ರೈತರು ಹೆಚ್ಚಾಗಿ ಬೆಳೆಸುತ್ತಿದ್ದಾರೆ. ಇದಕ್ಕೆ ಇಲಾಖೆಯಿಂದ ಯಾವ ಪ್ರೋತ್ಸಾಹವೂ ಸಿಗದೆ, ಬೆಲೆಯೂ ಸಿಗದೆ ನಷ್ಟಕ್ಕೆ ಕಾರಣವಾಗಿದೆ. ಕೃಷಿ ಇಲಾಖೆಯಿಂದ ವಿತರಣೆಯಾಗುತ್ತಿರುವ ತಳಿಗಳ ಬೀಜ ಇಲ್ಲಿನ ಹವಾಮಾನಕ್ಕೆ ಹೊಂದಾಣಿಕೆಯಾಗುತ್ತಿಲ್ಲ.

ಲಾಭದಾಯಕವೆಂದು ಬದಲಿ ಬೆಳೆಯಾಗಿ ಬೆಳೆಯಲಾಗುತ್ತಿತ್ತು ಮತ್ತು ರೈತರು ಭತ್ತದ ಗದ್ದೆಗಳನ್ನು ಗುತ್ತಿಗೆಗೆ ಕೊಡುತ್ತಿದ್ದರು. ಈಗ ಹವಾಮಾನ ವೈಪರೀತ್ಯ ಹಾಗೂ ಮಾರಕ ಕಾಯಿಲೆಯಿಂದಾಗಿ ಶುಂಠಿ ನಷ್ಟದ ಬೆಳೆಯಾಗಿ ಸಂಭವಿಸಿದೆ.

ಇದರಿಂದಾಗಿ ಅನೇಕ ರೈತರು ನಾಟಿ ಕಾರ್ಯವನ್ನು ಕೈ ಬಿಟ್ಟಿದ್ದು ಭೂಮಿಯನ್ನು ಪಾಳು ಬಿಡುತ್ತಿದ್ದಾರೆ. ಇದರಿಂದಾಗಿ ಕೃಷಿ ಕಾರ್ಮಿಕರ ಉದ್ಯೋಗಾವಕಾಶಗಳೂ ಕಡಿಮೆಯಾಗುತ್ತಿವೆ.

ಕಾಫಿ ತೋಟಗಳ ಮಧ್ಯೆ ಉಪ ವಾಣಿಜ್ಯ ಬೆಳೆಯಾಗಿ ಕರಿ ಮೆಣಸನ್ನು ಬೆಳೆಸಲಾಗುತ್ತಿದೆ. ಒಂದು ಕಾಲದಲ್ಲಿ ಅಧಿಕ ಬೆಲೆಯಿಂದಾಗಿ ಅದೊಂದು ಲಾಭದಾಯಕ ಬೆಳೆಯಾಗಿದ್ದಿತು. ಈಗ ಆಮದಿನ ಮೇಲೆ ನಿರ್ಬಂಧವಿಲ್ಲದಿರುವುದರಿಂದ ಬೆಲೆ ಕುಸಿತ ಉಂಟಾಗಿದ್ದು ಅದರೊಂದಿಗೆ ಈ ಬೆಳೆಗೆ ವಿಪರೀತ ರೋಗ ಬಾಧೆ ಇದ್ದು ನಾಶದ ಅಂಚಿನಲ್ಲಿದೆ. ಶೇ.70ರಷ್ಟು ನಾಶವಾಗಿದೆ. ಇದು ರೈತರ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿದೆ.

ಜಿಲ್ಲೆಯ ಕೆಲವು ಭಾಗಗಳಲ್ಲಿ ಮಾತ್ರ ಏಲಕ್ಕಿ ಬೆಳೆಯನ್ನು ಬೆಳೆಯಲಾಗುತ್ತಿದೆ. ನಿರಂತರ ಬೆಲೆಯ ಏರುಪೇರಿನಿಂದಾಗಿ ಈ ಬೆಳೆಗಾರರು ಕುಸಿದಿದ್ದಾರೆ. ಈ ಪ್ರದೇಶದಲ್ಲಿ ಪರ್ಯಾಯ ಬೆಳೆಯೂ ಸಾಧ್ಯವಿಲ್ಲವಾದದ್ದರಿಂದ ಈ ಬೆಳೆಗಾರರ ಸ್ಥಿತಿ ಅತ್ಯಂತ ಶೋಚನೀಯವಾಗಿದೆ.

ಕೃಷಿ ಸಾಲ ಕೃಷಿಗಾಗಿ ವಾಣಿಜ್ಯ ಬ್ಯಾಂಕ್ ಮತ್ತು ಸಹಕಾರಿ ಬ್ಯಾಂಕ್ ಮೂಲಕ ರೈತರು ಬೆಳೆ ಸಾಲ ಪಡೆಯುತ್ತಿದ್ದಾರೆ. ಬೆಲೆ ಕುಸಿತದಿಂದಾಗಿ ತೋಟಗಳ ನಿರ್ವಹಣೆ ಕಷ್ಟ ಸಾಧ್ಯವಾಗಿದೆ. ವಿಪರೀತ ಮಳೆಯಿಂದಾಗಿ ಫಸಲು ನಷ್ಟವಾಗಿದೆ.

ಸಹಕಾರಿ ಸಂಸ್ಥೆಗಳಿಂದ 138 ಕೋಟಿ, ಮತ್ತು ವಾಣಿಜ್ಯ ಬ್ಯಾಂಕಿನಿಂದ 450 ಕೋಟಿ ಸಾಲ ವಿತರಣೆಯಾಗಿದೆ. ಸಾಲ ಮನ್ನಾವನ್ನು ರೈತರು ಎದುರು ನೋಡುತ್ತಿದ್ದಾರೆ. ಕಳೆದ ಆರ್ಥಿಕ ಸಾಲಿನಲ್ಲಿ ಪ್ರತಿ ರೈತನ 25,000 ರೂ.ಸಾಲ ಮನ್ನಾ ಹಾಗೂ ಬಡ್ಡಿ ಮನ್ನಾ ಸ್ವಲ್ಪಮಟ್ಟಿಗೆ ರೈತರಿಗೆ ನೆರವಾಗಿದೆ. ಆದರೆ ಇದರಿಂದ ಶಾಶ್ವತ ಪರಿಹಾರವೇನೂ ಆಗಿಲ್ಲ. ಜೊತೆಗೆ 'ಬ್ಯಾಂಕುಗಳು ಸಾಲ ಕೊಡುವಲ್ಲಿ ತಾರತಮ್ಯವೆಸಗುತ್ತಿವೆ' ಎಂಬ ಪುಕಾರೂ ಕೇಳಿ ಬಂದಿದೆ. ಖಾಸಗೀ ಲೇವಾದೇವಿಗಾರರಿಂದ ಅತ್ಯಂತದೊಡ್ಡ ಬಡ್ಡಿಯಲ್ಲಿ ಸಾಲ ಪಡೆಯುವ ಒಂದು ವಿಭಾಗವೂ ಇದೆ. ಕಾರ್ಮಿಕರೇ ಇದಕ್ಕೆ ಹೆಚ್ಚು ಬಲಿಯಾಗುತ್ತಿದ್ದು ಇದೊಂದು ದಂಧೆಯಾಗಿ ಪರಿಣಮಿಸಿದೆ.



ಕಾರ್ಮಿಕರ ಸಮಸ್ಯೆಗಳು:

ಕಾಫಿ ಉದ್ದಿಮೆ ಲಾಭದಾಯಕವಲ್ಲವಾದ್ದರಿಂದ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಇಲ್ಲಿರುವ ಕಾರ್ಮಿಕರಿಗೆ ಪೂರ್ಣ ಪ್ರಮಾಣದಲ್ಲಿ ಕೆಲಸ ಸಿಗುತ್ತಿಲ್ಲ. ಸಂಬಳದಲ್ಲಿ ಕಡಿತ, ಬೋನಸ್ ಕಡಿತ ಹಾಗೂ ತಲುಪುತ್ತಿಲ್ಲ. ಬಿಪಿಎಲ್ ಕಾರ್ಡಿನಿಂದಲೂ ಅವರು ವಂಚಿರಾಗಿದ್ದಾರೆ. ಸಿಐಟಿಯುವಿನ ನೇತೃತ್ವದಲ್ಲಿ ನಡೆದ ನಿರಂತರ ಹೋರಾಟಗಳ ಫಲವಾಗಿ ತೋಟ ಕಾರ್ಮಿಕರಿಗೆ ಸ್ವಲ್ಪಮಟ್ಟಿಗೆ ಹೆಚ್ಚು ಬೋನಸ್ ಸಿಕ್ಕಿದೆ.

ಸಿ.ಎನ್.ಸಿ:ಕೊಡಗು ಕರ್ನಾಟಕದಿಂದ ಪ್ರತ್ಯೇಕವಾಗಬೇಕೆಂಬ ಘೋಷಣೆಯೊಂದಿಗೆ ಪ್ರಾರಂಭವಾದ ಸಿ.ಎನ್.ಸಿ.ಇಂದು ಆ ಬೇಡಿಕೆಯನ್ನು ಕೈ ಬಿಟ್ಟಿದ್ದು ಇಂದು ಅದು ಕೊಡವ ಸ್ವಾಯತ್ತ ರಾಜ್ಯ ಎಂಬ ಬೇಡಿಕೆಗೆ ತನ್ನನ್ನು ಸೀಮಿತಗೊಳಿಸಿದೆ.



ತೋಟ ಕಾರ್ಮಿಕರಿಗೆ ಕನಿಷ್ಠ ವೇತನ

ತೋಟ ಕಾರ್ಮಿಕರಿಗೆ ಕನಿಷ್ಟ ವೇತನವಾಗಿ ರೂ.95 ಕೊಡಬೇಕೆಂದು ರಾಜ್ಯದ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಇದುವರೆಗೂ ಸರಕಾರ ಅದನ್ನು ಅನುಷ್ಠಾನಕ್ಕೆ ತಂದಿಲ್ಲ. ಈಗಲೂ ರೂ.79.39 ಕೊಡಲಾಗುತ್ತಿದೆ.

ಅರಣ್ಯ ಕಾನೂನು ಜ್ಯಾರಿ ಪ್ರಶ್ನೆ

ಅರಣ್ಯ ಕಾನೂನಿನಲ್ಲಿ ಬುಡಕಟ್ಟು ಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕೊಡದೆ ಅಧಿಕಾರಿಗಳು ಅವರನ್ನು ವಂಚಿಸುತ್ತಿದ್ದಾರೆ, ಅವರಿಗೆ ಕಿರುಕುಳ ಕೊಡುತ್ತಿದ್ದಾರೆ.

ಸರಕಾರೀ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ

ಕೊಡಗು ಜಿಲ್ಲೆಯಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಿದ್ದು ಅವರು ಸರಕಾರೀ ಆಸ್ಪತ್ರೆಗಳನ್ನೇ ಅವಲಂಬಿಸುವವರಾಗಿದ್ದಾರೆ. ಆದರೆ ಬಹುತೇಕ ಸರಕಾರೀ ಆಸ್ಪತ್ರೆಗಳಲ್ಲಿ ಇಂದು ವೈದ್ಯರುಗಳೇ ಇಲ್ಲ. ಇದರಿಂದಾಗಿ ರೋಗಿಗಳು ತೊಂದರೆ ಪಟ್ಟುಕೊಂಡು ಇತರೆ ಜಿಲ್ಲೆಗಳಿಗೆ ಹೋಗುವಂತಹ ಪರಿಸ್ಥಿತಿ ಇದೆ.

ಮಾಕುಟ್ಟಾ ರಸ್ತೆ ನೇರ್ಪಾಗಲಿ

ಕೊಡಗಿನಿಂದ ಕೇರಳಕ್ಕೆ ಹೋಗುವ ಒಂದು ಮಾರ್ಗ ಮಾಕುಟ್ಟಾದ ಮೂಲಕ ಹೋಗುತ್ತಿದ್ದು ಈ ರಸ್ತೆಯ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಈ ರಸ್ತೆ ಕೊಡಗಿನ ವಾಣಿಜ್ಯದ ದೃಷ್ಟಿಯಿಂದ ಅತ್ಯಂತ ಪ್ರಮುಖ ರಸ್ತೆಯಾಗಿದೆ. ಕೊಡಗಿನ ಉತ್ಪನ್ನಗಳಾದ ಕರಿಮೆಣಸು ಭತ್ತ, ಹುಲ್ಲು ಮೊದಲಾದವುಗಳಿಗೆ ಕೇರಳವೇ ಮುಖ್ಯ ಮಾರುಕಟ್ಟೆಯಾಗಿದ್ದು ಈ ದಾರಿಯಿಂದಲೇ ಹೋಗಬೇಕು. ಕೊಡಗಿಗೆ ಬರುವ ಮೀನು ಅಲ್ಲಿಂದಲೇ ಬರಬೇಕು. ಕೊಡಗಿನಿಂದ ಸಾಕಷ್ಟು ಜನರು ದಿನನಿತ್ಯ ಕೇರಳಕ್ಕೆ ಹೋಗುತ್ತಿರುತ್ತಾರೆ, ಬರುತ್ತಿರುತ್ತಾರೆ. ಆ ದಾರಿಯಾಗಿ ಸಾಕಷ್ಟು ಪ್ರವಾಸಿಗರೂ ಕೊಡಗಿಗೆ ಬರುವವರಿದ್ದಾರೆ. ಕೇರಳದ ಕೆಲವು ದೇವಸ್ಥಾನಗಳೊಂದಿಗೆ ಕೊಡಗಿನ ಹಲವು ಕುಟುಂಬಗಳಿಗೆ ಅವಿನಾ ಸಂಬಂಧವಿದ್ದು ಅವರು ಅಲ್ಲಿಗೆ ಹೋಗುತ್ತಿರುತ್ತಾರೆ. ಶಬರಿಮಲೆಗೆ ಸಹಸ್ರಾರು ಯಾತ್ರಾರ್ಥಿಗಳು ಈ ಮಾರ್ಗವಾಗಿಯೇ ಹೋಗುತ್ತಾರೆ.

ಈ ರಸ್ತೆ ಸರಿಯಾಗಿಲ್ಲದೆ ಕೊಡಗಿನ ಗಡಿ ಪ್ರದೇಶವಾದ ಈ ಭಾಗದ ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದರಿಂದ ಕರ್ನಾಟಕದ ಅಖಂಡತೆಗೆ ಭಂಗ ಬರುವ ಭಾವನೆಗಳು ಆ ಪ್ರದೇಶದ ಜನರಲ್ಲಿ ಬೆಳೆಯಲು ಅವಕಾಶವಾಗುತ್ತಿದೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

ಕೇಂದ್ರ ಸರಕಾರವು ಒಂದು ಕುಟುಂಬದಲ್ಲಿ ಒಬ್ಬರಿಗೆ ವರ್ಷದಲ್ಲಿ ನೂರು ದಿವಸ ಉದ್ಯೋಗ ಕೊಡಬೇಕೆಂಬ ಯೋಜನೆಯೊಂದನ್ನು ಜಾರಿಗೆ ತಂದಿದ್ದು ಕೊಡಗು ಜಿಲ್ಲೆಯನ್ನು ಸಹಾ ಸೇರಿಸಲಾಗಿದೆ.


ಈ ಉದ್ಯೋಗ ಖಾತ್ರಿ ಯೋಜನೆ ಕೊಡಗು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಗ್ರಾಮಾಂತರ ಪ್ರದೇಶಗಳಲ್ಲಿ ಇದರ ಮಾಹಿತಿ ಪ್ರಚಾರ ಸಾಲದು. ಇದರ ಸಮಗ್ರ ಜಾರಿಗಾಗಿ ಜಿಲ್ಲಾ ಆಡಳಿತ ತಕ್ಷಣದಿಂದ ವ್ಯಾಪಕ ಪ್ರಚಾರಪಡಿಸುವುದರೊಂದಿಗೆ ಅರ್ಹ ಫಲಾನುಭವಿಗಳ ಆಯ್ಕೆಗೆ ಕ್ರಮ ಆಗತ್ಯವಾಗಿದೆ.

ಪೈಸಾರಿ ಭೂಮಿಯಲ್ಲಿರುವವರಿಗೆ ಹಕ್ಕು ಪತ್ರ

ಕೊಡಗು ಜಿಲ್ಲೆಯಲ್ಲಿ ಈಗಾಗಲೇ ಪೈಸಾರಿ

ಪುಟ 12 ಕ್ಕೆ

ವೈದ್ಯಕೀಯ ಪದ್ಧತಿಗಳು ಹತ್ತೆಂಟಿವೆ. ಅವುಗಳಿಗೆ ಹಲವು ಮೌಢ್ಯ ಕಂದಾಚಾರ, ಕುರುಡು ನಂಬಿಕೆಗಳು ಅಂಟಿಕೊಂಡಿವೆ. ಜೊತೆಗೆ ವಂಚಕ, ಸುಲಿಗೆಕೋರರು ಈ ರಂಗಕ್ಕೆ 'ಗಂಟು' ಬಿದ್ದಿದ್ದಾರೆ.



ಆರೋಗ್ಯ ರಂಗಕ್ಕಂಟಿದ ಮೌಢ್ಯ

ನರೇಂದ್ರ ನಾಯಕ್ ಅಧ್ಯಕ್ಷರು, ಅಖಿಲ ಭಾರತ ವಿಚಾರವಾದಿಗಳ ವೇದಿಕೆಗಳ ಒಕ್ಕೂಟ

ಆರೋಗ್ಯರಂಗ ಮತ್ತು ಜನಸಾಮಾನ್ಯರ ಬಗ್ಗೆ ನೋಡಿದಾಗ, ಮೂರು ತರಗತಿಯ ವ್ಯವಹಾರಗಳನ್ನು ನೋಡಬಹುದು. ಇವುಗಳೆಂದರೆ ಮೊದಲನೆಯದು ಹಾಗೂ ಮುಖ್ಯವಾಗಿರುವುದು ಸಂಘಟಿತ ವೈಜ್ಞಾನಿಕವಾಗಿ ಪ್ರತ್ಯಕ್ಷ ಪ್ರಮಾಣಿತವಾದ ಸೇವೆಗಳು, ಎರಡನೆಯದು ಸಂಘಟಿತ ವಾಗಿದ್ದರೂ ಪ್ರತ್ಯಕ್ಷಮಾಣಿತವಾಗದೆ ಇರುವ ವೈದ್ಯಕೀಯ ಪದ್ಧತಿಗಳು ಮತ್ತು ಕೊನೆಯದ್ದು ಸಂಘಟಿತವೂ ಅಲ್ಲ ಯಾವುದೇ ರೀತಿಯ ಪ್ರತ್ಯಕ್ಷ ಪ್ರಮಾಣಿತವೂ ಆಗಿಲ್ಲದಿರುವುವು.

ಜನಸಾಮಾನ್ಯರು ಆರೋಗ್ಯದಲ್ಲಿರುವವರೆಗೆ ಈ ರಂಗದೊಂದಿಗೆ ಯಾವುದೇ ಸಂಬಂಧ ಹಾಗೂ ಸಂಪರ್ಕವಿರಿಸಿಕೊಳ್ಳಲು ಇಚ್ಛಿಸುವುದಿಲ್ಲ. ಮೇಲ್ನೋಟಕ್ಕೆ ಆರೋಗ್ಯದಿಂದಿರುವ ವ್ಯಕ್ತಿ ತನಗೆ ಮುಂದಾಗಬಹುದಾದ ರೋಗಗಳ ಬಗ್ಗೆ ಯಾವುದೇ ರೀತಿಯ ಪರೀಕ್ಷೆಗಳನ್ನಾಗಲಿ ಮುಂದೆ ಸಂಭವಿಸಬಹುದಾಗ ತೊಂದರೆಗಳ ಕುರಿತಾಗಲೀ ತಲೆಕೆಡಿಸಿಕೊಳ್ಳಲಾರ. ಇದು ಪ್ರಾಯಶಃ ಆತನ ಇಡೀ ಕುಟುಂಬಕ್ಕೂ ಅನ್ವಯಿಸಬಹುದು. ಮುಂದೆ ಸಂಭವಿಸಬಹುದಾಗ ಆರೋಗ್ಯ ಸಂಬಂಧೀ ತೊಂದರೆಗಳ ಕುರಿತು ತಲೆಕೆಡಿಸಿಕೊಳ್ಳಲು ಸಮಯ ಅಥವಾ ಮುಖ್ಯವಾಗಿ ಖರ್ಚು ಮಾಡಲು ಆರ್ಥಿಕ ಮೂಲಗಳಿಲ್ಲದವರಿಂದ ಇದನ್ನಷ್ಟೇ ಅಪೇಕ್ಷಿಸಬಹುದು. ಮುಂದೆ ಉಂಟಾಗಬಹುದಾದ ರೋಗಗಳನ್ನು ನಿರ್ಬಂಧಿಸುವುದು ಮಕ್ಕಳಿಗೆ ಕೊಡಲಾಗುವ ಲಸಿಕೆಗಳಿಗಷ್ಟೇ ಸೀಮಿತವಾಗಿರುತ್ತದೆ. ಮತ್ತದನ್ನು ಹೆಚ್ಚಿನ ಸಮಯ ಸರ್ಕಾರದಿಂದ ಕಡ್ಡಾಯವಾಗಿ ಮಾಡಿರುವ ಕಾರಣ ಕೊಡಲಾಗುತ್ತದೆ. ಕೆಲವೊಮ್ಮೆ ಸಮಾಜದ ಸ್ಥಾಪಿತ ಹಿತಾಸಕ್ತಿಗಳಿಂದಾಗಿ ಇಂತಹ ಕಾರ್ಯಕ್ರಮಗಳಿಗೂ ಅಡ್ಡಿಯಾಗುತ್ತದೆ.



ಆರೋಗ್ಯರಂಗದ ಅನಾರೋಗ್ಯ

ಅನಾರೋಗ್ಯದಿಂದ ಪೀಡಿತನಾಗಿರುವ ಸಾಮಾನ್ಯರು ಹೋಗುವುದು ತಮ್ಮ ಕುಟುಂಬ ವೈದ್ಯರಲ್ಲಿ ಅಥವಾ ಸರ್ಕಾರಿ ಆಸ್ಪತ್ರೆಗೆ. ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುವುದು ತಮ್ಮ ಕುಟುಂಬ ವೈದ್ಯರನ್ನು ಕಂಡ ಬಳಿಕವೇ. ತತ್ಕಾರಣ, ಇವರ ಆರೋಗ್ಯರಂಗದೊಂದಿಗಿರುವ ಸಂಪರ್ಕ ಈ ಹಂತದಲ್ಲಿರುತ್ತದೆ. ಖಾಸಗಿ ರಂಗದಲ್ಲಿರುವ ಕುಟುಂಬ ವೈದ್ಯರಂತೂ ತಮ್ಮ ಜೀವನ ನಡೆಸಲು ರೋಗಿಗಳಿಂದ ಪಡೆದ ಆರ್ಥಿಕ ಮೂಲಗಳನ್ನು ಅವಲಂಬಿಸಬೇಕಾಗುತ್ತದೆ. ಆದರೆ, ಸರ್ಕಾರಿ ಆಸ್ಪತ್ರೆ (ಖಾಸಗಿಯವರಿಗೆ ಸೇರಿದ ಮೆಡಿಕಲ್ ಕಾಲೇಜುಗಳು ಸೇರಿ) ಯಲ್ಲಿನ ವೈದ್ಯರುಗಳು ಸಂಬಳದ ಮೇಲೆ ಕೆಲಸ ಮಾಡುವವರಾಗಿರುತ್ತಾರೆ. ತತ್ಕಾರಣ, ಇವರಿಂದ ರೋಗಿಯು ಅತ್ಯಂತ ಶಾಸ್ತ್ರೀಯ ಮತ್ತು ವೈಜ್ಞಾನಿಕವಾದ ರೋಗ ವಿಧಾನ ಹಾಗೂ ಚಿಕಿತ್ಸಾ ಪದ್ಧತಿಯನ್ನು ಅಪೇಕ್ಷಿಸುವುದು ಸ್ವಾಭಾವಿಕ. ಆದರೆ ಪರಿಸ್ಥಿತಿ ಹೀಗಿದೆಯೇ? ಸರ್ಕಾರಿ ಆಸ್ಪತ್ರೆಗಳಲ್ಲಿ ಅಸಡ್ಡೆ, ಲಂಚಾವತಾರಗಳನ್ನು ಕಾಣಬಹುದು. ಖಾಸಗಿರಂಗದಲ್ಲಿ ಕೈಗೆ ಸಿಕ್ಕ ರೋಗಿಯನ್ನು ಎಷ್ಟರವಮಟ್ಟಿಗೆ ಸುಲಿಯಬಹುದೆಂದು ಲೆಕ್ಕ ಹಾಕಲಾಗುತ್ತದೆ. ಮುಖ್ಯವಾಗಿ, ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ, ಹೈಟೆಕ್ ಆಸ್ಪತ್ರೆಗಳಲ್ಲಿ ತಮ್ಮಲ್ಲಿ ಹೊಸತಾಗಿ ಬಂದಿರುವ ಉಪಕರಣಗಳ ಹಣವನ್ನು ವಸೂಲಿ ಮಾಡಲು ಅಗತ್ಯವಿಲ್ಲದವರಿಗೂ ತಪಾಸಣೆಗಳನ್ನು ಮಾಡುವ ಬಗ್ಗೆ ದೂರುಗಳಿವೆ. ಕೆಲವೊಮ್ಮೆ ಹಾಸಿಗೆಗಳು ಖಾಲಿ ಇದ್ದಾಗ ಅಗತ್ಯವಿಲ್ಲದಿದ್ದರೂ ರೋಗಿಗಳಲ್ಲಿ ಹೆದರಿಕೆ ಹುಟ್ಟಿಸಿ, ಒಳರೋಗಿಗಳಾಗಿ ದಾಖಲಿಸುವುದೂ ಇದೆ. ಕಲಿಕಾ ಆಸ್ಪತ್ರೆಗಳಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ತಪಾಸಣೆಗೆ ಬರುವಾಗ ಆಸ್ಪತ್ರೆ ತುಂಬಿದೆಯೆಂದು ತೋರಿಸಲು 'ರೋಗಿ'ಗಳನ್ನು ಕೂಲಿ ಹಣ ಕೊಟ್ಟು ಮಲಗಿಸಿದ್ದು ಇದೆ.

ಕಮೀಷನ್ ಕರಾಮತ್ತು

ಇದು ಶೋಷಣೆಯ ಒಂದು ಮುಖವಾದರೆ ಔಷಧಿ ಮಾರಾಟಗಾರರು ಮತ್ತು ವೈದ್ಯರುಗಳ ಮಧ್ಯೆ ಇರುವ ಅನೈತಿಕ ಸಂಬಂಧ ಇನ್ನೊಂದು. ಅಗತ್ಯವಿಲ್ಲದ ಔಷಧಿಗಳನ್ನು ಬರೆಯುವುದು, ಇಂತಹ ಕಂಪನಿಯ ಔಷಧಿಗಳನ್ನೇ ಖರೀದಿಸಬೇಕೆಂದು ಕಡ್ಡಾಯವಾಗಿ ವಿಧಿಸುವುದು ಮತ್ತು ಇದಕ್ಕಾಗಿ ಕಂಪನಿಗಳಿಂದ ಕಮಿಷನ್ ಪಡೆಯುವುದು. ಈ ಕಮಿಷನ್ ವ್ಯವಹಾರವು ಪ್ರಯೋಗಾಲಯಗಳು, ಎಕ್ಸ್‌ರೇ, ಅಲ್ಟ್ರಾಸೌಂಡ್ ಘಟಕಗಳು, ನರ್ಸಿಂಗ್ ಹೋಂಗಳಿಗೂ ಹಬ್ಬಿದೆ. ಇವೆಲ್ಲಗಳಿಗೂ ಹಣ ಕೊಡಬೇಕಾದವ ರೋಗಿಯೇ, ಇದು ಇಷ್ಟಕ್ಕೆ ಮಾತ್ರ ಸೀಮಿತವಾಗಿರದೆ ಪಂಚತಾರಾ ಹೋಟೆಲು ಪಾರ್ಟಿಗಳು, ವಿದೇಶ ಪ್ರಯಾಣಕ್ಕೆ ಟಿಕೇಟುಗಳು 'ಉಚಿತ' ಕೊಡುಗೆಗಳಿಗೂ ವ್ಯಾಪಿಸಿದೆ. ಒಂದಾನೊಂದು ಕಾಲದಲ್ಲಿ ಇದು ಔಷಧಿ ಮಾತ್ರೆಗಳ ಉಚಿತ ಸ್ಯಾಂಪಲ್‌ಗಳಿಗೆ ಸೀಮಿತವಾಗಿತ್ತು ಮತ್ತು ಕೆಲವು ಸಾಮಾಜಿಕ ಕಳ ಕಳಿಯುಳ್ಳ ವೈದ್ಯರು ಇವುಗಳನ್ನು ತಮ್ಮ ಬಡರೋಗಿಗಳಿಗೆ, ಅನಾಥಾಶ್ರಮಗಳಿಗೆ ದಾನವಾಗಿ ಕೊಡುತ್ತಿದ್ದುದು ಇದೆ. ಆದರೆ, ಈಗ ಇಂತಹವು ಕಾಣುತ್ತಿಲ್ಲ. ಹೀಗೆಂದು ಎಲ್ಲಾ ವೈದ್ಯರು ಹೀಗೆಂದು ತಿಳಿಯಬೇಕಾಗಿಲ್ಲ. ಈ ಸಮಯದಲ್ಲೂ ರೋಗಿಗಳ ಬಗ್ಗೆ ಕಾಳಜಿ ಇರುವವರು, ಸಾಮಾಜಿಕ ಕಳಕಳಿ ಇದ್ದವರು ಇದ್ದಾರೆ. ಆದರೆ, ಇವರ ಸಂಖ್ಯೆ ಕಡಿಮೆಯಾಗುತ್ತಾ ಇದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಇಲ್ಲಿ ನಡೆಯುವ ಚಿಕಿತ್ಸಾ ಕ್ರಮಗಳು, ಔಷಧಿಗಳು ವೈಜ್ಞಾನಿಕವಾದ ತಳಹದಿ ಇದ್ದವು ಮತ್ತು ಪ್ರತ್ಯಕ್ಷ ಪ್ರಮಾಣಿತವಾದುವು. ವೈದ್ಯಕೀಯ ಪದ್ಧತಿಯು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಮಾನ್ಯತೆ ಪಡೆದದ್ದು.



ಕೆಲವು ಭಾರತದಲ್ಲಿ ಮಾನ್ಯತೆ ಪಡೆದಿದ್ದರೂ, ವಿದೇಶಗಳಲ್ಲಿ ಮಾನ್ಯತೆ ಇಲ್ಲದ, ಪ್ರತ್ಯಕ್ಷ ಪ್ರಮಾಣೀಕೃತವಲ್ಲದ, ಆದರೂ ಮಾನ್ಯತೆ ಭಾರತದಲ್ಲಿ ಅಥವಾ ಅಂತಹ ಕೆಲವು ದೇಶಗಳಲ್ಲಿ ಮಾತ್ರ ಮಾನ್ಯತೆ ಇರುವ ಔಷಧ, ಚಿಕಿತ್ಸಾ ಕ್ರಮಗಳಿವೆ. ಉದಾಹರಣೆಗೆ "ತಲಾ ತಲಾಂತರದಿಂದ ಅಸ್ತಿತ್ವದಲ್ಲಿದೆ! ನೂರಾರು ವರ್ಷಗಳಿಂದ ಜನ ನಂಬಿದ್ದಾರೆ" ಇತ್ಯಾದಿ ಹೇಳಿಕೆ, 'ಹೆಗ್ಗಳಿಕೆ'ಗೆ ಗುರಿಯಾದ ವೈದ್ಯಕೀಯ ಪದ್ಧತಿಗಳು. ಇಂತಹವುಗಳಲ್ಲಿ ಆಯುರ್ವೇದ, ಸಿದ್ಧ, ಯುನಾನಿ, ಹೋಮಿಯೋಪತಿ ಇತ್ಯಾದಿಗಳಿವೆ. ಆಯುರ್ವೇದ ತಜ್ಞರೇ ಹೇಳುವ ಪ್ರಕಾರ ಅದು ರೋಗದ ಚಿಕಿತ್ಸೆಗಿಂತಲೂ ಜೀವನದ ಪದ್ಧತಿ ಎಂದರೂ, ಯಾವುದೇ ರೋಗಕ್ಕೆ ನಿರ್ದಿಷ್ಟ ಚಿಕಿತ್ಸೆ ಇಲ್ಲವೆಂದರೂ, ತಮ್ಮ ತಯಾರಿಕೆಗಳಿಂದ ಕ್ಯಾನ್ಸರ್, ಏಡ್ಸ್ ನಂತಹ ಘನ ಘೋರ ರೋಗಗಳನ್ನು ಗುಣಪಡಿಸುತ್ತೇವೆನ್ನುವವರರಿಗೆ ಕಡಿಮೆಯಿಲ್ಲ. ಇದೇ ರೀತಿಯಲ್ಲಿ ಹೋಮಿಯೋಪತಿಯಿಂದ ಯಾವುದೇ ರೋಗ ಗುಣವಾಗುವುದೆಂಬುದಕ್ಕೆ ಯಾವುದೇ ಪುರಾವೆ ಇಲ್ಲವಾದರೂ, ದೊಡ್ಡ ದೊಡ್ಡ ಜಾಹೀರಾತುಗಳನ್ನು ಕೊಟ್ಟು, ಉಳಿದ ಎಲ್ಲಿಯೂ ಚಿಕಿತ್ಸೆ ಇಲ್ಲದಕ್ಕೆ ನಾವು ಗುಣ ಮಾಡುತ್ತೇವೆಂದು ಹೇಳಿಕೊಳ್ಳುವವರಿಗೇನು ಕಡಿಮೆಯಿಲ್ಲ. ಇಂತಹವರಲ್ಲಿ ಗುಣವಾಗದಿದ್ದರೆ ಹಣ ವಾಪಸ್ ಎಂದು ಸಾರುವ ಹಾಗೂ 'ಗುಣ' ಪಡೆದ ರೋಗಗಳ ಜಾಹೀರಾತುಗಳು ಇರುತ್ತದೆ.

'ಇಂತಹ ಚಿಕಿತ್ಸಾ ಕ್ರಮಗಳು ಬಡವರಿಗೂ ಲಭ್ಯವಿದೆ, ಖರ್ಚು ಕಡಿಮೆ' ಎಂಬುದನ್ನು ವಾದಿಸುವವರಿದ್ದಾರೆ. ಆದರೆ, ಇತ್ತೀಚೆಗೆ ಇಂತಹ ಔಷಧಗಳ ದುಬಾರಿ ಬೆಲೆಗಳನ್ನು ಗಮನಿಸಿದಾಗ ಈ ವಾದವು ಹುರುಳಿಲ್ಲದ್ದು ಎಂಬುದು ಸ್ಪಷ್ಟ. ಅದೂ ಯಾವುದೇ ವೈಜ್ಞಾನಿಕವಾಗಿ ಪ್ರಮಾಣೀಕೃತವಾಗದಿರುವ ಔಷಧಿಗಳಿಗೆ ಎಷ್ಟು ಬೆಲೆ ಕೊಟ್ಟರೂ ಅದು ದುಬಾರಿ ಎನ್ನಬಹುದು. ಇಲ್ಲಿಯೂ ವಿವಿಧ ರೀತಿಯ ಕಲಸು ಮೇಲೋಗರಗಳನ್ನು ಮಾಡುವವರಿದ್ದಾರೆ. ವೈಜ್ಞಾನಿಕ ಚಿಕಿತ್ಸಾ ಕ್ರಮಗಳಿಗೆ ಸಂಬಂಧಪಟ್ಟ ತಪಾಸಣೆಗಳನ್ನು ಮಾಡಿ, ತಮ್ಮ ಪದ್ಧತಿಯ ಔಷಧ ನೀಡುವವರೂ ಇದ್ದಾರೆ. ಈ ರೀತಿಯ ಕ್ರಮದಲ್ಲಿ ವೈದ್ಯಕೀಯ ಕಲಿತವರಿಗೆ, ಈ ವಿಧಾನಗಳ ಆಯ್ಕೆಯ ಬಗ್ಗೆಯಾಗಲೀ, ಅವುಗಳ ಫಲಿತಾಂಶಗಳನ್ನು ಅರ್ಥೈಸುವುದರಲ್ಲಾಗಲಿ ಯಾವುದೇ ತಿಳುವಳಿಕೆ, ಪರಿಣತಿ ಇಲ್ಲವಾದರೂ, ಕಮೀಷನ್ ಆಸೆಯಿಂದ ಇವುಗಳನ್ನು ಮಾಡಿಸುತ್ತಾರೆ.

ಮತ ಧರ್ಮದ ಬಳಕೆ

ರೋಗಿಗಳನ್ನು ಸುಲಿಯುವುದರಲ್ಲಿ ನಿಸ್ಸೀಮರಾಗಿರುವ ದೊಡ್ಡ ದರೋಡೆಕೋರರ ಗುಂಪೇ ಇದೆ. ಇವುಗಳಲ್ಲಿ ವಿವಿಧ ರೀತಿಯ ತಥಾಕಥಿತ ವೈದ್ಯಕೀಯ ಪದ್ಧತಿಗಳು, ಪವಾಡ ಸದೃಶ ಔಷಧಗಳು, ಯಾವುದೇ ರೀತಿಯ ಪ್ರಾಯೋಗಿಕ ಪ್ರತ್ಯಕ್ಷ ಪ್ರಮಾಣೀಕೃತವಲ್ಲದ ಚಿಕಿತ್ಸಾ ಕ್ರಮಗಳು ಇವೆ. ಇಂತಹವರು ತಮ್ಮ ಬೆಂಬಲಕ್ಕೆ ವಿವಿಧ ಧರ್ಮಗಳನ್ನು ಉಪಯೋಗಿಸಿ ಕೊಳ್ಳುವುದುಂಟು! ಈ ಧರ್ಮಗಳನ್ನು ಉಪಯೋಗಿಸಿ ಕೊಳ್ಳುವವರೂ ಈ ವರ್ಗದಲ್ಲಿ ಅತ್ಯಂತ ಅಪಾಯಕಾರಿ.

ನಮ್ಮ ದೇಶದಲ್ಲಿ ಇಂತಹ ತಥಾಕಥಿತ ವೈದ್ಯಕೀಯ ಪದ್ಧತಿಗಳ ಬಗ್ಗೆ ತಪಾಸಣೆ ನಡೆಸಲು ಸುಪ್ರೀಂಕೋರ್ಟ್ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ಗೆ ಆಜ್ಞಾಪಿಸಿತ್ತು. ಈ ಬಗ್ಗೆ ಸಲ್ಲಿಸಲಾದ ವರದಿಯನ್ನು 2004ರಲ್ಲಿ ಸುಪ್ರೀಂಕೋರ್ಟ್ ಅಂಗೀಕರಿಸಿತ್ತು. ಇದರ ಪ್ರಕಾರ ಸುಮಾರು 14 ರಷ್ಟು ತಥಾಕಥಿತ ವೈದ್ಯಕೀಯ ಪದ್ಧತಿಗಳಿಗೆ ಯಾವುದೇ ವೈಜ್ಞಾನಿಕ ತಳಹದಿಯಿಲ್ಲವೆಂದು ಸೂಚ್ಯವಾಗಿ ಗುರುತಿಸಲಾಗಿತ್ತು. ಇದರಲ್ಲಿ ಇಲೆಕ್ಟ್ರೋ ಹೋಮಿಯೋಪತಿ, ಅರೋಮಾ ಥೆರಪಿ, ಕಲರ್‌ಥೆರಪಿ, ರೇಕಿ, ಪ್ರಾಣಿಕ್ ಹೀಲಿಂಗ್, ಮೂತ್ರ ಚಿಕಿತ್ಸೆ, ಸ್ವಮೂತ್ರ ಚಿಕಿತ್ಸೆ ಮುಂತಾದವುಗಳು ಗಮನಾರ್ಹವಾಗಿವೆ. ಇದರಲ್ಲಿ ಮೂತ್ರ ಚಿಕಿತ್ಸೆಯಂತೂ ಇತ್ತೀಚೆಗೆ ಬಹಳ ಹೆಸರುವಾಸಿಯಾಗಿದೆ.

ಈ ಮಾನ್ಯತೆಯಿಲ್ಲದ, ತಥಾಕಥಿತ ಚಿಕಿತ್ಸಾ ಕ್ರಮಗಳಿಗೂ ಮತಧರ್ಮಗಳಿಗೂ ಥಳಕು ಹಾಕಿ, ಪ್ರಶ್ನಿಸಿದವರನ್ನು ದಮನಿಸಲು ಉಪಯೋಗಿಸುವುದು ನಮ್ಮಲ್ಲಿ ಹಲವರ ಅನುಭವವಾಗಿದೆ. ಬೆನ್ನಿಹಿನ್ ಅಲೆಕ್ಸ್ ಅರ್ಬಿಟೋನಂತಹ ವಂಚಕರು ಕ್ರೈಸ್ತ ಧರ್ಮಕ್ಕೆ ತಮ್ಮನ್ನು ಸೇರಿಸಿಕೊಂಡಿದ್ದರೆ, ಬರಿಗೈಯಿಂದ ಆಪರೇಷನ್ ಮಾಡುತ್ತೇನೆನ್ನುವ ಅಸ್ಲಂ ಎಂಬಾತ ಬಾಗಲಕೋಟೆಯ ವಂಚಕ ತನ್ನನ್ನು ಇಸ್ಲಾಂ ಮತಕ್ಕೆ ತಗಲಿಸಿಕೊಂಡಿದ್ದಾನೆ. ಗೋಮೂತ್ರವು ರೋಗವನ್ನು ಗುಣಪಡಿಸುವ ಬಗ್ಗೆ ಪ್ರಶ್ನಿಸಿದ ನನ್ನ ಮೇಲೆ ಎರಡು ತಿಂಗಳ ಕಾಲ ಪತ್ರಿಕೆಯೊಂದು ಪ್ರಚಾರ ಅಭಿಯಾನವನ್ನೇ ನಡೆಸಿತ್ತು! ಒಟ್ಟಿನಲ್ಲಿ ಈ ಸಂದರ್ಭದಲ್ಲಿ ನನಗೆ ಅನೇಕ ಬೆದರಿಕೆಯ ಪತ್ರಗಳೂ ಬಂದಿದ್ದವು. ಈ ಸಂದರ್ಭವನ್ನು ತಮ್ಮ ವೈಯಕ್ತಿಕ ತೀಟೆಗಳನ್ನು ತೀರಿಸಿಕೊಳ್ಳಲು ಕೆಲವರು ಉಪಯೋಗಿಸಿಕೊಂಡಿದ್ದರು.

ಕೆಲವೊಮ್ಮೆ ಇಂತಹ ಚಿಕಿತ್ಸಾ ಪದ್ಧತಿಗಳಿಂದ ಗುಣವಾಗುವುದಾಗಿ, ಕಡಿಮೆ ಖರ್ಚಿನಲ್ಲಿ ವೈದ್ಯಕೀಯ ಸೇವೆಗಳು ಬರುತ್ತವೆ ಇತ್ಯಾದಿಯಾಗಿ ಹೇಳಲಾಗುತ್ತದೆ. ಇದು ಎಷ್ಟರಮಟ್ಟಿಗೆ ಸರಿ? ಮುಖ್ಯವಾಗಿ ಯಾವುದೇ ಔಷಧ ಅಥವಾ ಚಿಕಿತ್ಸಾ ಕ್ರಮವನ್ನು ಅನುಸರಿಸುವಾಗ, ಅದನ್ನು ಸರಿಯಾಗಿ ಪರಿಶೀಲಿಸಿ, ಅದಕ್ಕೆ ಮಾನ್ಯತೆ ಇದೆಯೇ? ವೈಜ್ಞಾನಿಕವಾಗಿ ಅದು ಪ್ರತ್ಯಕ್ಷ ಪ್ರಮಾಣದ ಪರೀಕ್ಷೆಗೆ ಒಳಗಾಗಿದೆಯೇ? ಅದು ಜಗತ್ತಿನ ಇತರ ದೇಶಗಳಲ್ಲಿ ಉಪಯೋಗಿಸ ಲಾಗುತ್ತದೆಯೇ? ಎಂಬುದನ್ನು ಪರಿಶೀಲಿಸಬೇಕು. ಯಾವುದಾದರೂ ಚಿಕಿತ್ಸಾ ಕ್ರಮ ವೈಜ್ಞಾನಿಕವಾದ ಮಾನ್ಯತೆ ಪಡೆದಿದ್ದರೆ ಅದಕ್ಕೆ ರೋಗಿಗಳ ಜಾಹೀರಾತುಗಳಾಗಲಿ, ಪತ್ರಿಕಾ ಪ್ರಚಾರಗಳಾಗಲಿ ಅಗತ್ಯವಿಲ್ಲ. ಅದನ್ನು ಆ ರೋಗ ಚಿಕಿತ್ಸೆಗೆ ಸಂಬಂಧಪಟ್ಟ ತಜ್ಞರುಗಳು ನಿರ್ಧರಿಸುತ್ತಾರೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ಅಗತ್ಯ.

ಮುಖ್ಯವಾಗಿ, ತಮ್ಮ ವಿಶೇಷವಾದ "ಮಂತ್ರ, ತಂತ್ರ, ಪ್ರಾರ್ಥನೆಯ ಯೋಗದ ಮೂಲಕ ಎಲ್ಲಾ ರೋಗಗಳನ್ನು ಗುಣ ಮಾಡುತ್ತೇವೆ, ಯಾವುದೇ ರೋಗಬರದಂತೆ ಮಾಡುತ್ತೇವೆ" ಇತ್ಯಾದಿಗಳನ್ನು ಪ್ರಚಾರ ಮಾಡುವವರ ಬಗ್ಗೆಯಂತೂ ಎಚ್ಚರ ವಹಿಸುವುದು ಅಗತ್ಯ.

'ಪ್ರಶ್ನಿಸದೆ ಏನನ್ನೂ ಒಪ್ಪಬೇಡಿ' - ಮಹಿಳಾ ಕಾರ್ಯಾಗಾರದಲ್ಲಿ ವಿಚಾರವಾದಿಗಳ ಕರೆ

'ಜ್ಞಾನ - ವಿಜ್ಞಾನದ ಬೆಳಕು ಮೂಡಬೇಕಿದೆ'

ಡಾ. ಶಾಂತಾಮಠ


'ಪ್ರಶ್ನಿಸದೆ ಏನನ್ನು ಒಪ್ಪಬೇಡಿ' ಎಂಬ ಅರ್ಥಪೂರ್ಣ ಹೇಳಿಕೆಯ ಅಡಿಯಲ್ಲಿ ಪ್ರಶ್ನಾರ್ಥಕ(?) ಚಿಹ್ನೆಯಿಂದ ಕೂಡಿದ ಬ್ಯಾನರ್ ಬಿಚ್ಚುವುದರೊಂದಿಗೆ ವಿನೂತನವಾದ ರೀತಿಯ ಉದ್ಘಾಟನಾ ಸಮಾರಂಭ ಕಿವಿಗಡಚಿಕ್ಕುವ ಕರತಾಡನದೊಂದಿಗೆ ಪ್ರಾರಂಭವಾಯಿತು. ಇದಕ್ಕೆ ಇನ್ನೂ ಹೆಚ್ಚಿನ ಕಳೆಗಟ್ಟಿದುದು ಕು.ಪ್ರಭಾ ಅವರ ವಿಜ್ಞಾನದ ಹಾಡು. ಕನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಭಾರತ ಜ್ಞಾನ ವಿಜ್ಞಾನ ಸಮಿತಿ, ವಿಜ್ಞಾನ ವೇದಿಕೆ, ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯ, ಗುಲಬರ್ಗಾ ಹಾಗೂ ಪ್ರಜ್ಞಾ ಕಾನೂನು ಸಲಹಾ ಸಮಿತಿ ಈ ನಾಲ್ಕು ಸಂಘಟನೆಗಳ ಸಹಯೋಗದಲ್ಲಿ 'ಭಾನಾಮತಿ ನಿರ್ಮೂಲನಾ ಜನಾಂದೋಲನ ಅಂಗವಾಗಿ ಮಹಿಳಾ ಕಾರ್ಯಾಗಾರ ಸರಣಿ 2007-08' ಕಾರ್ಯಕ್ರಮ ಗುಲಬರ್ಗಾ ನಗರದ ಶ್ರೀಮತಿ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯದಲ್ಲಿ ಉದ್ಘಾಟಿಸಲಾಯಿತು.

ಸಾಮಾಜಿಕ ಪಿಡುಗು

ಭಾನಾಮತಿ ಎಂಬುದೊಂದು ಸಾಮಾಜಿಕ ಪಿಡುಗು. ವ್ಯಕ್ತಿಗಳ ನಡುವೆ ಸಂಶಯಾತ್ಮಕವಾದ ವಿಷಬೀಜ ಬಿತ್ತಿ ಅವರ ಜೀವಗಳನ್ನೇ ಹಿಸುಕಿಹಾಕುವ ಮಾನವ ವಿರೋಧಿ ಕ್ರಮವಾಗಿದೆ. ಹಿಂದಿನಿಂದಲೂ ಅನೇಕ ಮೂಢನಂಬಿಕೆಗಳು ಉಸಿರಿನಷ್ಟೆ ಸಹಜವಾಗಿ ಪ್ರಚಲಿತದಲ್ಲಿವೆ. ಬಹಳಷ್ಟು ಜನರು ಅನೇಕ ರೋಗಗಳಿಂದ ಬಳಲುತ್ತಿದ್ದರೂ ಅದಕ್ಕೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳದೆ ತಂತ್ರ, ಮಂತ್ರ, ತಾಯಿತ, ಚೀಟಿ-ಚಿಪ್ಪಾಟಿ, ಬೂದಿ ಹಚ್ಚಿಕೊಳ್ಳುವುದು ಮಂತ್ರಿಸಿದ ನಿಂಬೆಹಣ್ಣಿನ ನೀರನ್ನು ಕುಡಿಯುವದು ಎಂಬಿತ್ಯಾದಿ ಅರ್ಥಹೀನ ನಂಬಿಕೆಗಳಿಗೆ ಜೋತುಬಿದ್ದು ಅನೇಕ ರೋಗಗಳಿಗೆ ಆಶ್ರಯ ನೀಡಿ ಬದುಕನ್ನು ಯಾತನಾಮಯವಾಗಿಸಿಕೊಳ್ಳುತ್ತಿದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣ ಜನತೆಯಲ್ಲಿನ ಅಜ್ಞಾನ. ಈ ದಿಸೆಯಲ್ಲಿ ಜನರ ಸಮೀಪಕ್ಕೆ ವಿಜ್ಞಾನವನ್ನು ಕೊಂಡೊಯ್ಯುವ, ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವ ದಿಸೆಯತ್ತ ನಾವು ಶ್ರಮಿಸಬೇಕಾದ ಜರೂರಿಯಿದೆ. ಹಳೆ ನಂಬಿಕೆಗಳೊಂದಿಗೆ ಹೊಸ ಹೊಸ ಅಂಧಶ್ರದ್ಧೆಗಳತ್ತ ವಾಲುತ್ತಿರುವುದು ಇನ್ನೂ ವಿಷಾದನೀಯ ಸಂಗತಿಯಾಗಿದೆ. ಪರಂಪರೆಯ ಮುಖವಾಡ ಹೊತ್ತ ಅನೇಕ ಸಾಧುಗಳು, ಸಂತರು, ಸ್ವಾಮಿಗಳು, ಪಾದ್ರಿಗಳು, ಮುಲ್ಲಾ ಮೌಲ್ವಿಗಳು ಜನತೆಯಲ್ಲಿನ ಅಜ್ಞಾನವನ್ನು ಬಂಡವಾಳವಾಗಿಸಿಕೊಂಡು ಜನತೆಯನ್ನು ಮೇಲೇಳದಂಥ ಕೂಪಕ್ಕೆ ತಳ್ಳುತ್ತಿದ್ದಾರೆ. ವಿದ್ಯಾವಂತರು ಈ ಪಾಶವೀಕೃತ್ಯದ ಕಡೆ ದೃಷ್ಟಿ ಹರಿಸದೆ ವಿಜ್ಞಾನದ ಹೊಸ ಆವಿಷ್ಕಾರಗಳಲ್ಲಿ ತಲ್ಲೀನರಾಗಿದ್ದಾರೆ. ಆದರೆ ಇಂದು ಅವಶ್ಯವಿರುವುದು ಈ ಎರಡರ ನಡುವಿನ ಕಂದಕವನ್ನು ಅಳಿಸಿ ಹಾಕುವುದು.

ಈ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಬಹಳ ವ್ಯಾಪಕವಾದ ರೀತಿಯಲ್ಲಿ ಮಹಿಳಾ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಡಾ:ಬಿ.ಜಿ. ಮೂಲಿಮನಿ ಉಪಕುಲಪತಿಗಳು ಗುಲಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ ಇವರು ಉದ್ಘಾಟನಾ ಭಾಷಣದಲ್ಲಿ 'ವಿಜ್ಞಾನ ಎನ್ನುವುದು ದಿನೇ ದಿನೇ ತಿಳಿದುಕೊಳ್ಳಬೇಕಾದ ಪ್ರಕ್ರಿಯೆ. ಶಿಕ್ಷಣದಿಂದ ಮಾತ್ರ ಇದನ್ನು ಸಾಧಿಸಲು ಸಾಧ್ಯ. ಪಠ್ಯಕ್ರಮದಲ್ಲಿಯೇ ವೈಚಾರಿಕೆಯನ್ನು ಅಳವಡಿಸಿ ಬೆಳೆಸಿಕೊಳ್ಳಲು ಪ್ರೇರೇಪಿಸಬೇಕಿದೆ. ಅಲ್ಲದೆ ಅಕ್ಷರಸ್ಥ ಹಾಗೂ ಅನಕ್ಷರಸ್ಥ ಜನರ ನಡುವೆ ಸೇತುವೆ ನಿರ್ಮಿಸಿ ತಲಸ್ಪರ್ಶಿಯಾಗಿ ಕಾರ್ಯನಿರ್ವಹಿಸಿ ಗ್ರಾಮೀಣ ಜನರಲ್ಲಿ ಭರವಸೆಯ ಬೀಜ ಬಿತ್ತುವುದು ಅಕ್ಷರಸ್ಥ ಸಮಾಜದ ಮೇಲಿದೆ ಈ ನಿಟ್ಟಿನಲ್ಲಿ ಕಾರ್ಯಯೋಜನೆ ಹಾಕಿಕೊಂಡು ಮುನ್ನಡೆಯಬೇಕಿದೆ' ಎಂದು ಹೇಳಿದರು. ಸಮುದಾಯ ಸಂಘಟನೆಯ ರಾಜ್ಯಾಧ್ಯಕ್ಷರಾದ ಪ್ರೊ. ಆರ್.ಕೆ.ಹುಡುಗಿ, ಭಾರತ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಡಾ: ಲಿಂಗಪ್ಪ ಕೆ.ಮುಖ್ಯಸ್ಥರು, ಮೈಕ್ರೋಬಯಾಲಜಿ ವಿಭಾಗ ಗು.ವಿ.ಗು. ಡಾ:ಮೀನಾಕ್ಷಿ ಬಾಳಿ, ಪ್ರಾಧ್ಯಾಪಕರು ಹಾಗೂ ಪ್ರಜ್ಞಾ ಕಾನೂನು ಸಲಹಾ ಸಮಿತಿ ಅಧ್ಯಕ್ಷರು ಗುಲಬರ್ಗಾ, ನೀಲಾ.ಕೆ. ರಾಜ್ಯಾಧ್ಯಕ್ಷರು ಜನವಾದಿ ಮಹಿಳಾ ಸಂಘಟನೆ ಇವರೆಲ್ಲರೂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ



ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯದ ಪ್ರಭಾರಿ ಪ್ರಾಚಾರ್ಯರಾದ ಶ್ರೀಮತಿ ರತ್ನಾ ಪ್ರಿಯದರ್ಶಿನಿ ಇವರು ಮಹಿಳೆಯ ಮುಂದಿರುವ ಸವಾಲುಗಳು, ವಿಶೇಷವಾಗಿ ಮಹಿಳೆಯರೇ ಭಾನಾಮತಿಯಂತಹ ಪಿಡುಗಿಗೆ ಬಲಿಯಾಗುತ್ತಿರುವ ಕಾರಣಗಳು ಇದರ ಪರಿಹಾರಗಳನ್ನು ಕುರಿತು ವಿವರಿಸುತ್ತಾ 'ಇನ್ನು ಮುಂದೆ ಪ್ರಶ್ನಿಸದೇ ಏನನ್ನೂ ಒಪ್ಪಬೇಡಿ. ಆತ್ಮವಿಶ್ವಾಸ ಬೆಳೆಸಿಕೊಂಡು ನಮ್ಮ ಬದುಕನ್ನು ನಾವೇ ರೂಪಿಸಿಕೊಳ್ಳೋಣ. ಮೋಸವನ್ನು ಬಯಲಿಗೆಳೆಯೋಣ' ಎಂಬ ನಿರ್ಧಾರದ ನುಡಿಗಳು ನೆರೆದ ಮಹಿಳಾ ಸಮುದಾಯಕ್ಕೆ ಪ್ರೇರೇಪಣೆ ನೀಡಿದವು. ಸ್ತ್ರೀಶಕ್ತಿ ಸಂಘದ ಸ್ವಸಹಾಯ ಸಂಘ, ಅಂಗನವಾಡಿ, ಬಿಸಿಯೂಟ, ಪ್ರಾಥಮಿಕ ಶಾಲಾ ಶಿಕ್ಷಕರು ಕಾಲೇಜು ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ವಿವಿಧ ಸಂಘಟನೆಗಳ ಸದಸ್ಯರು ಇದರಲ್ಲಿ ಪಾಲ್ಗೊಂಡಿದ್ದರು.

ಗೋಷ್ಠಿ-1ರಲ್ಲಿ ಖ್ಯಾತ ಮನೋರೋಗ ತಜ್ಞರಾದ ಡಾ: ಘನಾತೆ ಎಸ್.ಜಿ. ಇವರು 'ಭಾನಾಮತಿ ಒಂದು ಮನೋರೋಗ ಚಿಕಿತ್ಸೆ' ಕುರಿತು ಅನೇಕ ಮಾಹಿತಿ ನೀಡಿದರು. ಪೌಷ್ಟಿಕ ಆಹಾರದ ಕೊರತೆಯಿಂದ ಮಹಿಳೆಯರು ದುರ್ಬಲವಾಗಿ ಅನೇಕ ಮಾನಸಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಹಿಸ್ಟೇರಿಯಾ, ಸ್ಕಿಜೋಫೆನಿಯಾ, ಗೀಳುರೋಗಗಳಂತಹವುಗಳಿಗೆ ಚಿಕಿತ್ಸೆ ಮೂಲಕ ಗುಣಪಡಿಸಲು ಸಾಧ್ಯ ಎಂದು ಮನವರಿಕೆ ಮಾಡಿಕೊಟ್ಟರು.

ಪ್ರಶ್ನೆಗಳ ಸುರಿಮಳೆ

ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಬಹಳಷ್ಟು ಜನರಿಂದ ಪ್ರಶ್ನೆಗಳ ಸುರಿಮಳೆಯೇ ಸುರಿಯಿತು. ಎಲ್ಲರ ಪ್ರಶ್ನೆಗಳು ದೇವರು, ದೆವ್ವ, ಕ್ಯಾರಬೀಳೋದು, ಕಲ್ಲು ಬೀಳೋದು, ಹೈನು ಬತ್ತುವುದು, ರಾಶಿ ತಿರುಗಿಸೋದು ಇವುಗಳ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ವೈಜ್ಞಾನಿಕವಾಗಿ ಎಷ್ಟೇ ತಿಳುವಳಿಕೆ ಕೊಟ್ಟರು ನಂಬುವ ಸ್ಥಿತಿ ಅವರಲ್ಲಿರಲಿಲ್ಲ. ಆದರೆ ವಿವಿಧ ಸಂಘಟನೆಯವರು ಕಂಡ ಸತ್ಯಗಳು, ಸಮಸ್ಯೆ ಪರಿಹರಿಸಿದ ಒಂದೆರಡು ಉದಾಹರಣೆಗಳಿಂದ ಜನಮನ ಮುಟ್ಟಲು ಸಾಧ್ಯವಾಯಿತು. ಈ ಕಾರ್ಯಾಗಾರಕ್ಕೆ ಮುಂಚೆ 5-6 ದಿನಗಳ ಹಿಂದೆಯಷ್ಟೇ ನೀಲಾ.ಕೆ. ಶಿವಶರಣ ಮೊಳೆಗಾಂವ, ಮೆಹರಾಜ್‌ಪಟೇಲ್, ನಾನು ನಾಲ್ವರೂ ಹೋಗಿ 9ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಯ ಮೈಮೇಲೆ ಬಿದ್ದ ಕ್ಯಾರವಣ್ಣೆಯ ಬರೆಗಳು ಹೇಗೆ ಬಿದ್ದವು. ಅದರ ಹಿಂದಿರುವ ಸತ್ಯ ಅವರಲ್ಲಿಯೇ ದೊರೆತ ಕ್ಯಾರ ಬೀಜಗಳು' ಬರೆ, ಹಾಕಿಕೊಂಡ ಮೊಳೆ, ಅವಳು ಉಟ್ಟ ಬಟ್ಟೆ, ಮಲಗುವ ಹಾಸಿಗೆ ಎಲ್ಲವನ್ನೂ ಪರೀಕ್ಷಿಸಿ ಆ ಮನೆಯ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟೆವು. ಇದು ಭಾನಾಮತಿ ಕ್ರಿಯೆಯಲ್ಲ. ಮನೆಯಲ್ಲಿ ಯಾರಾದರೂ ಹಾಕಬೇಕು, ಇಲ್ಲವೆ ಅವಳು ನಿದ್ರಾವಸ್ಥೆಯಲ್ಲಿ ಹಾಕಿಕೊಂಡಿರಬೇಕು ಎಂದಾಗ ಮನೆಯ ಸದಸ್ಯರ ಹಾಗೂ ಆ ಹುಡುಗಿಯ ಮುಖ ಚಹರೆಗಳು ಬದಲಾದವು. ಇಷ್ಟಕ್ಕೆ ಅರ್ಥಮಾಡಿಕೊಂಡ ನಾವು ಎದ್ದು ಬಂದೆವು. ಈಗ ಕ್ಯಾರ ಬೀಳೋದು ನಿಂತಿದೆ ಎಂಬ ಸುದ್ದಿ ನಮಗೆ ಬಂದಿದೆ. ಈ ರೀತಿಯಾಗಿ ನಮ್ಮ ಕೌಟುಂಬಿಕ ವ್ಯವಸ್ಥೆಯ ಪದರುಗಳನ್ನು ಬಿಚ್ಚುತ್ತಾ ಹೋದರೆ ಸತ್ಯ ತಾನಾಗಿಯೇ ಹೊರಬೀಳುತ್ತದೆ. "ಹಂಗಲ್ರೀ"

ಇಷ್ಟು ಹೇಳುತ್ತಿದ್ದಂತೆ ಮತ್ತೊಬ್ಬಳು 'ಹಂಗಲ್ರೀ ನಮ್ಮ ಮನ್ಯಾಗ ನಾನೊಬ್ಬೆ ಇದ್ನಿ, ದೇವರ ಮನಿ ಕೀಲಿ ಹಾಕ್ಕೊಂಡು ಮಲಗಿದ್ನಿ. ಮುಂಜಾನೆ ಎದ್ದು ಕೀಲಿ ತೆಗೆದರ್‍ಯಾಗ ಭಾಗಾಮಾಯಿ ಮೂರುತಿ ಸುತ್ತ ಗುಂಡಕ್ಕ ರಕ್ತದ ಕಲೆ ಇದ್ದವು ನಾನೇ ಅವನ್ನ ಒರೆಸಿ ಸ್ವಚ್ಛ ಮಾಡೇನಿ. ಎರಡನೇ ವ್ಯಕ್ತಿಯಾರು ಇಲ್ಲ, ಕೀಲಿ ನನಬಲ್ಲೇ ಇದೆ. ಇದಕ್ಕೇನಂತೀರಿ? ಇದು ಭಾನಾಮತಿ ಅಲ್ಲದೆ ಮತ್ತೇನ್ರೀ?' ಎಂದು ಜೋರು ಧ್ವನಿಯಲ್ಲಿ ಪ್ರಶ್ನಿಸಿದಳು.

ಪವಾಡ ಬಯಲು!

ಆ ಸಂದರ್ಭದಲ್ಲಿ ಇಂಥ ಪ್ರಶ್ನೆಗಳಿಗೆಲ್ಲಾ ಉತ್ತರಿಸಿದ್ದು ಶ್ರೀಶೈಲ ಘೂಳಿಯವರ ಪವಾಡ ರಹಸ್ಯ ಬಯಲು ಕಾರ್ಯಕ್ರಮ. ನಿಂಬೆಹಣ್ಣಲ್ಲಿ ರಕ್ತ ಬರಿಸೋದು, ಕೈಯಿಂದ ಬೂದಿ ಉದುರಿಸೋದು, ನೀರಿನಿಂದ ದೀಪ ಹಚ್ಚುವುದು, ಇದ್ದಕ್ಕಿದ್ದಂತೆ ಬೆಂಕಿ ಹತ್ತೋದು ಇತ್ಯಾದಿ ಪವಾಡಗಳು ಮಹಿಳೆಯರ ಕಣ್ಣೆದುರೇ ನಡೆದವು. ಅವು ಹೇಗೆ ಜರುಗುತ್ತದೆ ಎಂಬುದನ್ನು ತೋರಿಸಿದಾಗ 'ಅಯ್ಯಾ ನಾವು ಇಷ್ಟು ದಿನ ಎಷ್ಟು ರೊಕ್ಕಾ ಕಳ್ಕೊಂಡೆವಲ್ಲಾ ತಾಯಿ,' ಆ ಬಾಬಾ ಎಷ್ಟು ಮೋಸ ಮಾಡ್ದ' ಎಂದು ಎಲ್ಲರೂ ಆಶ್ಚರ್ಯದಿಂದ ಬೆರಳು ಕಚ್ಚಿದರು.

ಇದಾದ ನಂತರ ಕ.ರಾ.ವಿ.ಪ.ದವರು ತಯಾರಿಸಿದ ಸಿ.ಡಿ. ಪ್ರದರ್ಶನ, ಎದುರಿಗಿರುವ ದೊಡ್ಡ ಪರದೆಯ ಮೇಲೆ ಸಿ.ಡಿ.ಆಡುವ, ಅಗ್ಗಿಕೊಂಡ ತುಳಿಯುವ, ಶಸ್ತ್ರ ಹಾಕಿಸಿಕೊಳ್ಳುವ, ಬೆನ್ನಿಗೆ ಕೊಂಡಿ ಸಿಕ್ಕಿಸಿ ಕಾರು ಎಳೆಯುವ ಇನ್ನೂ ಮುಂತಾದ ಕ್ರಿಯೆಗಳು ಪರದೆಯ ಮೇಲೆ ನಡೆಯುತ್ತಿದ್ದಂತೆ ದಿಗ್ಭ್ರಾಂತರಾದರು. ಎಲ್ಲರ ಆ ನೋಟದಲ್ಲಿಯೂ ಹೊಸ ಆಸೆಯ ಭರವಸೆಯ ಕಿರಣಗಳು ಹೊರ ಹೊಮ್ಮುತ್ತಿದ್ದುದು ಗೋಚರವಾಯಿತು. ಪ್ರಶ್ನೆ ಕೇಳಿದ ಅನೇಕರು ಇನ್ನು ಮುಂದೆ ಎಂದೂ ನಾವು ಇಂಥ ಮೋಸದ ಜಾಲಕ್ಕೆ ಬೀಳುವುದಿಲ್ಲ. ಜನರನ್ನು ಬೀಳಲು ಬಿಡುವುದಿಲ್ಲ ಎಂದು ಕಾರ್ಯಾಗಾರದ ಕೊನೆಯಲ್ಲಿ ಅಭಿಪ್ರಾಯ ಮಂಡನೆಯಲ್ಲಿ ತಿಳಿಸಿದರು.

ಡಾ: ಮೀನಾಕ್ಷಿ ಬಾಳಿ ಅವರು ಕೆಲವು ಸ್ವಂತ ಅನುಭವಗಳನ್ನು ಹಂಚಿಕೊಳ್ಳುವುದರೊಂದಿಗೆ ಇನ್ನೂ ಹೆಚ್ಚಿನ ಪರಿಣಾಮ ಬೀರಿತು. ಒಟ್ಟಿನಲ್ಲಿ ನಮ್ಮ ಕಾರ್ಯಾಗಾರದ ಉದ್ದೇಶ ಸಫಲತೆಯ ಹಾದಿ ಹಿಡಿಯುವುದಾಗಿತ್ತು.

ಈ ನಿಟ್ಟಿನಲ್ಲಿ ಜನವಾದಿ ಮಹಿಳಾ ಸಂಘಟನೆ ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಅಡಿಯಲ್ಲಿ ಇಂಥ ಪ್ರಗತಿಪರ ಕಾರ್ಯಗಳನ್ನು ಕೈಗೆತ್ತಿಕೊಂಡು ಪ್ರಖರ ವೈಚಾರಿಕ ನೆಲೆಯಲ್ಲಿ ಮಹಿಳಾ ಸಂಘಟನೆಯನ್ನು ಗಟ್ಟಿಗೊಳಿಸುವ, ಮಹಿಳೆಯರಲ್ಲಿ ನೆಲೆಯೂರಿರುವ ಅಂಧ ಶ್ರದ್ಧೆಗಳನ್ನು ಮೆಟ್ಟಿ ನಿಲ್ಲುವ, ಅನ್ಯಾಯದ ವಿರುದ್ಧ ಪ್ರತಿಭಟಿಸುವ ಶಕ್ತಿಯಾಗಿ ಈ ಕಾರ್ಯಾಗಾರ ರೂಪುಗೊಂಡಿದ್ದು ಮುಂದಿನ ದಿನಗಳಲ್ಲಿ ಇನ್ನೂ ವಿಸ್ತೃತವಾಗಿ ಈ ದಿಸೆಯಲ್ಲಿ ಹೆಜ್ಜೆಯಿಡುವ ಪ್ರಯತ್ನಕ್ಕೆ ಒತ್ತಾಸೆಯಾಗಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಜಿಲ್ಲಾಡಳಿತದಿಂದ ಗೂಡಂಗಡಿ ತೆರವು ಕಾರ್ಯಾಚರಣೆ

ಭೂಕಂಪ ಸದೃಶ ಪಟ್ಟಣಗಳು

ಉತ್ತರ ಕನ್ನಡ

ರಸ್ತೆ ವಿಸ್ತರಣೆ ಆಗಬೇಕು, ಸ್ವಚ್ಛವಾಗಿರಬೇಕು ಎಂಬುದೇನೋ ಸರಿಯೆ. ಆದರೆ ಬಡಪಾಯಿ ಅಂಗಡಿದಾರರ ಗೂಡುಗಳನ್ನು ಬದಲಿ ವ್ಯವಸ್ಥೆ ಮಾಡದೇ ಕೆಡವಿ ಹಾಕಬಹುದೇ?




3-4 ತಿಂಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯನ್ನು ನೋಡಿದವರು ಈಗೇನಾದರೂ ತಕ್ಷಣ ಯಾವುದೇ ತಾಲ್ಲೂಕು ಕೇಂದ್ರಗಳನ್ನು ನೋಡಿದರೆ ಭೂಕಂಪ ವಾಗಿರಬೇಕೆಂದು ಸಂತಾಪ ವ್ಯಕ್ತಪಡಿಸಿದರೆ ಆಶ್ಚರ್ಯವಿಲ್ಲ. ಅಂಗಡಿ ಮುಂಗಟ್ಟುಗಳಿರುವ ಪ್ರದೇಶಗಳಲ್ಲೇ ಕಲ್ಲು ಮಣ್ಣುಗಳು ಗುಪ್ಪೆಯಾಗಿವೆ. ಬಸ್ ನಿಲ್ದಾಣದ ಇಕ್ಕೆಲಗಳೆಲ್ಲಾ ಹಾಳು ಸುರಿವ ಊರಾಗಿದೆ. ನಗರದ ಗೂಡಂಗಡಿಗಳೆಲ್ಲಾ ನೆಲಕ್ಕೊರಗಿ ಭೂಕಂಪವಾದ ಮರುದಿನ ಊರನ್ನ ನೋಡಿದಂತೆ ಭಾಸವಾಗುತ್ತದೆ.

ಸುಂದರಗೊಳಿಸುವುದು

ನಗರದ ಮಧ್ಯೆಯ ರಸ್ತೆಗಳನ್ನು ಅಗಲಗೊಳಿಸಿ ಸಂಚಾರಕ್ಕೆ ಸುಲಭಗೊಳಿಸುವ ಮತ್ತು ನಗರವನ್ನು ಸುಂದರಗೊಳಿಸುವ ಮಹತ್ಕಾರ್ಯಕ್ಕೆ (?!) ಮುಂದಾಗಿರುವ ಜಿಲ್ಲಾಧಿಕಾರಿ ಮುನೀಶ್ ಮುದ್ಗಲ ಅವರ ಕಾರ್ಯವೈಖರಿ ಇದು. ಸಿರ್ಸಿ, ಯಲ್ಲಾಪುರ, ಹೊನ್ನಾವರ, ಭಟ್ಕಳ, ಕಾರವಾರ ಹೀಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ನಗರ ಸ್ವಚ್ಛಗೊಳಿಸಲು ರಸ್ತೆಯ ಪಕ್ಕದ ಕಟ್ಟಡಗಳನ್ನು ಮತ್ತು ನಗರದ ಎಲ್ಲಾ ಗೂಡಂಗಡಿಗಳನ್ನು ನೆಲಸಮಗೊಳಿಸುತ್ತಿದ್ದಾರೆ. ವಿರೋಧಿಸಿದವರನ್ನು ಗೂಂಡಾ ಕಾಯ್ದೆಯಡಿಯಲ್ಲಿ ಒಳ ಹಾಕುವುದಾಗಿ ಹೇಳುತ್ತಾ, ಹೀಗೆ ಸ್ವಚ್ಛಗೊಳಿಸು ವಂತೆ ಸುಪ್ರೀಂಕೋರ್ಟ್ ಆದೇಶವಿದೆಯೆಂದು ತೋರಿಸುತ್ತಿದ್ದಾರೆ. ಹಾಗೆಯೇ ಯಾವುದೇ ಸರ್ಕಾರ ಕರ್ನಾಟಕದಲ್ಲಿಲ್ಲದೆ, ರಾಷ್ಟ್ರಪತಿ ಆಳ್ವಿಕೆ ಇರುವುದರಿಂದ ಈ ಕಾರ್ಯ ಇನ್ನಷ್ಟು ಹೆಚ್ಚು ಚುರುಕಿನಿಂದ ನಡೆಯುತ್ತಿದೆ. ನಗರ ಸುಂದರಗೊಳಿಸುವುದೆಂದರೆ ದಿನದ ದುಡಿತವನ್ನು ಅಂದೇ ಮಾಡಿ ಸಂಸಾರ ಸಾಗಿಸುವ ಜನರ ಬದುಕನ್ನು ಧ್ವಂಸಗೊಳಿಸುವುದೆಂದೇ? ಅಥವಾ ದುಡಿದು ಉಣ್ಣುವವರ ಬದುಕನ್ನು ಸುಂದರಗೊಳಿಸುವ

ನಿಸರ್ಗ



ಮೂಲಕ ನಗರವನ್ನು ಸುಂದರಗೊಳಿಸುವುದು ಸಾಧ್ಯವಾಗಲಾರದೆ? ಐ.ಎ.ಎಸ್. ನಂತಹ ಉನ್ನತ ಹುದ್ದೆಯಲ್ಲಿರುವವರಿಗೆ ಯಾರು ಈ ಸತ್ಯ ಹೇಳುವವರು? ಅಥವಾ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಗರ ಸುಂದರಗೊಳಿಸಲು ಇಂತಹ ಕನಸುಗಳೇ ಯಾಕೆ ಬೀಳಬೇಕು? ಎಂದೆಲ್ಲಾ ಜನ ಯೋಜಿಸುತ್ತಿದ್ದಾರೆ. ಉತ್ತರ ಕಂಡುಕೊಳ್ಳುವಷ್ಟು ಶಕ್ತಿ ಇನ್ನೂ ಅವರಿಗೆ ಬಂದಿಲ್ಲ, ಹಲವು ಕಾರಣಗಳಿಂದ.

ಬೀದಿಗೆ ಬದುಕು

ಉತ್ತರ ಕನ್ನಡದಲ್ಲಿ ಸುಮಾರು 5-6 ಸಾವಿರ ಕುಟುಂಬಗಳು ಅಕ್ಷರಶಃ ಬೀದಿಗೆ ಬಿದ್ದಿವೆ. ಕೃಷಿಗೆ ಸ್ವಂತ ಭೂಮಿ, ದುಡಿಯಲು ಕಾರ್ಖಾನೆಗಳು, ನೌಕರರಿಗೆ ಯಾವುದೇ ಅವಕಾಶಗಳಿಲ್ಲದ ಅನಿವಾರ್ಯತೆಯಿಂದ ಹಲವು ಜನ ಗೂಡಂಗಡಿ ಸಣ್ಣ ಅಂಗಡಿಗಳ ಮೂಲಕ ಸಣ್ಣ ವ್ಯಾಪಾರ ನಡೆಸುತ್ತಿದ್ದರು. 10-20 ವರ್ಷಗಳಿಂದ ತನ್ನ ಬದುಕಿಗೆ ಇವನ್ನೇ ಆಧಾರ ಮಾಡಿಕೊಂಡಿದ್ದರು. ಮಕ್ಕಳ ವಿದ್ಯಾಭ್ಯಾಸ, ಮದುವೆ ಇತ್ಯಾದಿಗಳಿಗಾಗಿ ಸಾಲ ಸೋಲ ಮಾಡಿಕೊಂಡಿದ್ದರು. ಎರಡು ಹೊತ್ತು ಅನ್ನವನ್ನೋ, ಗಂಜಿಯನ್ನೋ ಉಣ್ಣುತ್ತಿದ್ದರು.

ಪರ್ಯಾಯ ವ್ಯವಸ್ಥೆ ಇಲ್ಲ

ರಸ್ತೆ ಕಿರಿದಾಗಿತ್ತು, ಓಡಾಲಿಕ್ಕೆ ತೊಂದರೆ ಆಗುತ್ತಿತ್ತು ಎನ್ನುವ ಸಂಗತಿ ಸತ್ಯವಾಗಿದ್ದರೂ ಏಕಾಏಕಿ ಹೀಗೆ ಬುಲ್ಡೋಜರ್ ಓಡಿಸಿದ್ದು ಮಾತ್ರ ಖಂಡನಾರ್ಹವಾದದ್ದು. ಅವರಿಗೆ ಕನಿಷ್ಠ ಮಟ್ಟದ ಪರ್ಯಾಯ ವ್ಯವಸ್ಥೆಯನ್ನಾದರೂ ಮಾಡಿ ಹೀಗೆ ತೆರವುಗೊಳಿಸಿದ್ದರೆ 5-6 ಸಾವಿರ ಕುಟುಂಬಗಳು ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳುವುದನ್ನು ತಪ್ಪಿಸಬಹುದಾಗಿತ್ತು.

ಹೀಗೆ ನಗರಸಭೆಯ ಅಧಿಕಾರಿಗಳು ಗುರುತಿಸಿದ ಪ್ರದೇಶದಿಂದ ಯಾವ ಪ್ರತಿಭಟನೆ ಇಲ್ಲದೆ ತಮ್ಮ ಅಂಗಡಿಯನ್ನು ತೆರವುಗೊಳಿಸಿದರು. ಅವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದಾಗಿಯೂ ಹೇಳಿ ಮೂಗಿಗೆ ತುಪ್ಪ ಸವರಲಾಗಿದೆ. ಆದರೆ ಹೀಗೆ ಅಂಗಡಿ ಕಳೆದುಕೊಂಡವರು ಇನ್ನೂ ತುಪ್ಪದ ವಾಸನೆಗೆ ಮಾತ್ರ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಪರ್ಯಾಯ ವ್ಯವಸ್ಥೆ ಇನ್ನೂ ಆಗಿಲ್ಲ.

'ಅಂದ ಕಾಲ'ದ ನಕಾಶೆ

ಬ್ರಿಟಿಷರ ಕಾಲದ ನಕಾಶೆ ಇಟ್ಟುಕೊಂಡು ಈಗ ರಸ್ತೆ ಅಗಲ ಮಾಡುವ ಜಿಲ್ಲಾಧಿಕಾರಿಗಳು ಬಡವ, ಶ್ರೀಮಂತ ಗೂಡಂಗಡಿ ಮಹಾ ಕಟ್ಟಡ ಎನ್ನುವ 'ಭೇದ ಭಾವ ವಿಲ್ಲದೆ' ತೆರವುಗೊಳಿಸಿದ್ದಾರೆಂದು ಜನ ಅವರ ಪಕ್ಷಪಾತರಹಿತ ಮನೋಸ್ಥಿತಿಯನ್ನು ಹೊಗಳಿದರೂ ದೊಡ್ಡ ಅಂಗಡಿಯವರು ಲಾಭದಲ್ಲಿ ಒಂದು ಅಂಶ ಹೋಯಿತು ಎಂದು ಕೊರಗುತ್ತಾ ಹಿಂದಿರುವ ತಮ್ಮ ಸ್ಥಳದಲ್ಲಿ ಅಂಗಡಿ ವಿಸ್ತರಣೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ನಿಜವಾಗಿ ಬೀದಿಗೆ ಬಿದ್ದವರು ಬಡವರು ತಾನೇ!



ಆರ್.ವಿ.ದೇಶಪಾಂಡೆ
ಕೈಕಟ್ಟಿ ಕುಳಿತ ಜನಪ್ರತಿನಿಧಿಗಳಲ್ಲಿ ಒಬ್ಬರು

ಹಿಂದೆ ಸೀಬರ್ಡ್, ಅಣುಸ್ಥಾವರ, ಕೊಂಕಣ ರೈಲ್ವೆ, ಜಲವಿದ್ಯುತ್ ಇತ್ಯಾದಿ ಯೋಜನೆಗಳಿಂದ ನಿರಾಶ್ರಿತರಾದವರಿಗೆ ಇನ್ನೂ ಪುನರ್ ವಸತಿ ಆಗಿಲ್ಲ. ಈಗ ಗೂಡಂಗಡಿಕಾರರು ನಿರಾಶ್ರಿತರ ತಂಡಕ್ಕೆ ಹೊಸ ಸೇರ್ಪಡೆ;

ಪ್ರತಿಭಟನೆ ನಡೆದಿಲ್ಲವೇ?

ಜನ ಪ್ರತಿನಿಧಿಗಳು ಏನು ಮಾಡಿದರು?

ಗೂಡಂಗಡಿಕಾರರನ್ನು ಎಬ್ಬಿಸುವ ಬಗ್ಗೆ ಊಹಾಪೋಹಗಳಿದ್ದರೂ ಜನರಿಗೆ ಹೀಗೆ ಆಗಲಿಕ್ಕಿಲ್ಲ ಎಂಬ ಸಣ್ಣ ಆಶೆ ಇತ್ತು. ಯಾಕೆಂದರೆ ಎಂತಹ ಅಧಿಕಾರಿ ಬಂದರೂ ರಾಜಕಾರಣಿಗಳ ಮಾತು ಕೇಳುತ್ತಾರೆ ಎನ್ನುವ ನಂಬಿಕೆ. ಆದರೆ ಈ ಬಾರಿ ಹೀಗಾಗಲಿಲ್ಲ. ಹಾಗೆ ಅನ್ನುವುದಕ್ಕಿಂತ ಜನಪ್ರತಿನಿಧಿಗಳೂ ಚಕಾರವೆತ್ತಿಲ್ಲ ಎನ್ನುವುದು ಅವರ ವರ್ಗ ಹಿತಾಸಕ್ತಿಯನ್ನು ಸ್ಪಷ್ಟಪಡಿಸುತ್ತದೆ. 2-3 ತಿಂಗಳ ಹಿಂದೆ ನಡೆದ ನಗರಸಭೆ, ಪಟ್ಟಣ ಪಂಚಾಯತ್ ಚುನಾವಣೆಯಲ್ಲಿ ಎಲ್ಲಾ ಗೂಡಂಗಡಿಕಾರರಿಗೆ ಪಟ್ಟ ಕೊಡಿಸುವ ಮಾತು ಹೇಳಿ ಮತ ತೆಗೆದುಕೊಂಡು ಗೆದ್ದ ಜನಪ್ರತಿನಿಧಿಗಳು ಸುಮ್ಮನಾದರು. ಎಂ.ಎಲ್.ಎ. ಮತ್ತು ಎಂ.ಪಿ. ಚುನಾವಣೆಗೆ ನಿಲ್ಲುವ ಕನಸು ಕಾಣುತ್ತಿದ್ದವರು ಪ್ರತಿಭಟನೆಗಿಳಿದವರ ಮೇಲೆ ಗೂಂಡಾ ಕಾಯ್ದೆಯಡಿ ಕೇಸ್ ಬುಕ್ ಆದರೆ ಚುನಾವಣೆಗೆ ನಿಲ್ಲಲು ಸಾಧ್ಯ ಆಗದಿದ್ದರೆ ಏನು ಗತಿ ಎಂದು ಮನೆ ಸೇರಿದರು.

ಹೇಗಿದೆ ನೋಡಿದಿರ ಅವರ ಪೌರುಷ!

ಇವರೆಲ್ಲರೂ ಸೇರಿ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಪುನರ್ ವ್ಯವಸ್ಥೆಯ ಬಗ್ಗೆ ಪರ್ಯಾಯ ಸೂಚಿಸಿ, ಒತ್ತಾಯ ಮಾಡಬಹುದಾಗಿತ್ತು ಹಾಗೂ ಮಾಡಲಿಲ್ಲ.

ಎಲ್ಲಾ ತಾಲ್ಲೂಕಿನಲ್ಲಿಯೂ ಗೂಡಂಗಡಿ ನೆಲಸಮ ಆದಮೇಲೆ ಮಾಜಿ ಸಚಿವ ದೇಶಪಾಂಡೆಯವರು ಡಿ.ಸಿ.ಯ ಮೇಲೆ ಗುಡುಗಿದರು. ರಾಜ್ಯಪಾಲರಿಗೆ ವರದಿ ಮಾಡಿರುವುದಾಗಿ ಹೇಳಿದರು. ಈ ಡಿ.ಸಿ.ಗೆ ಫೋನ್ ಮಾಡಿದರೆ ಫೋನ್ ಸ್ವಿಚ್ ಆಫ್ ಮಾಡಿದ್ದಾಗಿ ಹೇಳಿಕೆ ಕೊಟ್ಟರು. ಹಾಗಿದ್ದರೆ ದೇಶಪಾಂಡೆಯವರೇ ನಿಜವಾದ ಕಳಕಳಿ ಇದ್ದರೆ ಯಾಕೆ ಮೊದಲೇ ಪ್ರತಿಭಟನೆಗೆ ಇಳಿಯಬಾರದಿತ್ತು? ಧರಣ ಮಾಡಬಾರದಿತ್ತು. ಬೇಡದಿರುವುದಕ್ಕೆ, ವಂದಿಮಾಗದಿತನಕ್ಕೆ ಸಾವಿರಾರು ಜನರನ್ನು ಕರೆಸಿಕೊಳ್ಳುವ ಇವರಿಗೆ ಈಗ ಯಾಕೆ ಜನರನ್ನು ಸೇರಿಸಲು ಸಾಧ್ಯ ಆಗಲಿಲ್ಲ? ಮೊಸಳೆ ಕಣ್ಣೀರು ಹಾಕುವುದು ಬಿಡಬೇಕು.

ಇನ್ನೂ ಬಿಜೆಪಿ ಯವರಿಗೆ 'ಅಧಿಕಾರ ಹೋಯಿತು' ಎನ್ನುವುದು-ಗುಜರಾತ್, ಬಾಬಾಬುಡನ್ ಗಿರಿ ಮುಖ್ಯ ಆಯಿತು. ಭಟ್ಕಳದಲ್ಲಿ ಸಾಬರ ಅಂಗಡಿ ಹೋಯಿತು ಎನ್ನುವ ಖುಷಿಯಲ್ಲಿಯೇ ಇದ್ದರು. ಜಿಲ್ಲೆಯ ಬಿಜೆಪಿಯ ಎಂ.ಪಿ. ಅನಂತಕುಮಾರ್ ತನ್ನ ಕದಂಬ ಸಂಸ್ಥೆಗೆ ಹಣ ಸೇರಿಸುವಲ್ಲಿ, ಹೊಡೆದಾಟ ಮಾಡುವುದರಲ್ಲಿ ಮುಳುಗಿದರು.

ಜೆಡಿ(ಎಸ್) ಕತೆ ಕೇಳಬೇಡಿ

ಅವರಿಗೆ ತಾವು ಏನು ಮಾಡುತ್ತಿದ್ದೇವೆ ಎನ್ನುವುದೇ ತಿಳಿದಿಲ್ಲ; ಮಂಗನಿಗೆ ಹೆಂಡ ಕುಡಿಸಿದಂತಾಗಿತ್ತು. ಸಿಐಟಿಯು, ಸಿಪಿಐ(ಎಂ) ಕಾರ್ಯಕರ್ತರು ಪ್ರಯತ್ನಮಾಡಿದರು. ಆದರೆ ರಸ್ತೆ ಬದಿಯಲ್ಲಿ ಗೂಡಂಗಡಿ ಕಟ್ಟಿ ಬೇರೆಯವರಿಗೆ ಬಾಡಿಗೆ ಕೊಟ್ಟಿದ್ದ ಕೆಲವು ಜನ ರಾಜಕೀಯ ಪಕ್ಷದ ಮುಂದಾಳುಗಳು ತಮ್ಮ ಪಕ್ಷದ ಲಾಬಿ ಮಾಡಿ ಇವರೊಂದಿಗೆ ಜನ ಬರದಂತೆ ಮಾಡಿದರು. ಮತ್ತು ಗೂಡಂಗಡಿ ಕಳೆದುಕೊಳ್ಳುತ್ತಿರುವವರು ಅಧಿಕಾರದಲ್ಲಿದ್ದ ರಾಜಕೀಯ ಪಕ್ಷದವರು ತಮ್ಮ ರಕ್ಷಣೆ ಮಾಡುತ್ತಾರೆಂದು ಮೋಸ ಹೋದರು. ಅಂತೂ ಉತ್ತರ ಕನ್ನಡದಲ್ಲಿ ಭೂಕಂಪ.

ಜಿಲ್ಲಾಧಿಕಾರಿಗಳಿಗೆ ಹೀಗೊಂದು ಮನವಿ

ಏನೇ ಇರಲಿ. ಜಾಗತೀಕರಣದ ಭಾಗವಾಗಿ ನಗರದ ಸ್ವಚ್ಛತೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡ ತಾವು ಇನ್ನೂ ಕೆಲವು ಸಮಸ್ಯೆಗಳ ಬಗ್ಗೆ ಗಮನಹರಿಸಬೇಕು.

ಜಿಲ್ಲೆಯ ಎಲ್ಲಾ ರಸ್ತೆ ಹದಗೆಟ್ಟಿವೆ ಮ್ಯಾಂಗನೀಸ್ ಲಾರಿಗಳ ಹಾವಳಿ ಹೆಚ್ಚಿದೆ, ಕಳ್ಳಬಟ್ಟಿ ಹೆಚ್ಚಾಗುತ್ತಿದೆ, ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಿದೆ, ಮಟ್ಕಾ ಮಿತಿ ಮೀರಿದೆ, ಲಂಚತನ, ಭ್ರಷ್ಟಾಚಾರ ಜಿಲ್ಲೆಯನ್ನು ನಲುಗಿಸಿದೆ, ನಿರಾಶ್ರಿತರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ, ಅವರ ಕುಟುಂಬಕ್ಕೆ ಉದ್ಯೋಗ ಸಿಕ್ಕಿಲ್ಲ.... ಹೀಗೆ ಹಲವಿವೆ. ಇಲ್ಲೆಲ್ಲಾ ತಾವು ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಜನ ಎದುರು ನೋಡುತ್ತಿದ್ದಾರೆ.

'ಕರ್ನಾಟಕದ ಕಾಶ್ಮೀರ'......

ಪುಟ 8 ರಿಂದ


ಜಾಗದಲ್ಲಿ ವಾಸ ಮಾಡುತ್ತಿರುವ ಬಡ ಜನರಿಗೆ ಹಕ್ಕುಪತ್ರ ಕೊಡಬೇಕು. ಈಗಾಗಲೇ ಹಲವಾರು ವರ್ಷಗಳಿಂದ ಒತ್ತುವರಿ ಮಾಡಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಸಣ್ಣ ಹಾಗೂ ಅತೀ ಸಣ್ಣ ರೈತರ ವಶದಲ್ಲಿರುವ ಜಾಗಕ್ಕೆ ಇನ್ನೂ ಪಟ್ಟಾ ವಿತರಣೆಯಾಗಿರುವುದಿಲ್ಲ. ಇದರಿಂದಾಗಿ ಅವರು ಸರಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಐದು ಎಕ್ರೆ ಒಳಗಿನ ಪೈಸಾರಿ ಜಾಗಕ್ಕೆ ಪಟ್ಟಾ ಕೊಡಲು ತಾಲೂಕು ತಹಶೀಲ್ದಾರರಿಗೆ ಅಧಿಕಾರ ಕೊಡುವುದು ಅಗತ್ಯವಾಗಿದೆ.

ರಾಜಕೀಯ ಬಲಾಬಲ

ಕರ್ನಾಟಕದ ಕಾಶ್ಮೀರವೆಂದು ವಿವರಿಸಲ್ಪಡುವ ಕೊಡಗು ರಾಜ್ಯದ ಬೊಕ್ಕಸಕ್ಕೆ ಹೆಚ್ಚಿಗೆ ಆದಾಯವನ್ನು ಕೊಡುವ ಜಿಲ್ಲೆಯಾಗಿದೆ. ಕಾವೇರಿ ನದಿಯಿಂದಲೇ ರಾಜ್ಯದ ಜಲಾನಯನ ಪ್ರದೇಶಗಳಿಗೆ ನೀರು ಸಿಗುವುದಾಗಿದೆ. ಇಲ್ಲಿನ ಪ್ರಕೃತಿ ಸೌಂದರ್ಯ ಹೆಚ್ಚಿನ ಜನರನ್ನು ಆಕರ್ಷಿಸುತ್ತಿದ್ದು, ಪ್ರವಾಸೋದ್ಯಮದಲ್ಲೂ ಹೆಸರು ಗಳಿಸುತ್ತಿದೆ. ಆದರೆ ದೇಶದ ಆರ್ಥಿಕ ನೀತಿ ಪರಿಣಾಮವಾಗಿ ಕೊಡಗಿನ ಕೃಷಿ ಬೆಳೆಗಳಿಗೆ ಬೆಲೆ ಕುಸಿತ ಉಂಟಾಗಿದ್ದು, ರೈತರನ್ನು ಸಂಕಷ್ಟಕ್ಕೆ ದೂಡಿದೆ. ಅಭಿವೃದ್ಧಿಯ ದೃಷ್ಟಿಯಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ರಸ್ತೆ, ನೀರು, ಪಡಿತರ ವ್ಯವಸ್ಥೆ, ವಿದ್ಯಾಭ್ಯಾಸ ಮತ್ತಿತರ ಸೌಕರ್ಯಗಳಿಂದಲೂ ಕೊಡಗು ವಂಚಿತವಾಗುತ್ತಿದೆ. ಕೊಡಗಿನ ಬಾಣೆ ಹಕ್ಕಿನ ಬಗ್ಗೆ ರಾಜ್ಯ ಸರ್ಕಾರದ ಕಂದಾಯ ಖಾತೆ 31.10.2006ರಂದು ಹೊರಡಿಸಿದ ಸುತ್ತೋಲೆ ಜಿಲ್ಲೆ ಜನರ ನಿದ್ದೆ ಕೆಡಿಸಿದೆ. ಇದರ ವಿರುದ್ಧ ಎರಡು ಬಾರಿ ಜಿಲ್ಲಾ ಮಟ್ಟದಲ್ಲಿ ಬಂದ್ ನಡೆದಿದೆ. ಪರಿಸರ ರಕ್ಷಣೆಯ ನೆಪದಲ್ಲಿ ಗ್ರೇಟರ್ ತಲಕಾವೇರಿ ಯೋಜನೆಯನ್ನು ಜಾರಿಗೊಳಿಸುವ ಕುತಂತ್ರ ನಡೆದಿದ್ದು ಈ ಪ್ರದೇಶದಲ್ಲಿ ಜೀವಿಸುವ ಜನರನ್ನು ಒಕ್ಕಲೆಬ್ಬಿಸುವ ಕುತಂತ್ರ ಇದಾಗಿದೆ. ಈ ಹಿನ್ನೆಲೆಯಲ್ಲಿ ಕೊಡಗಿನ ರಾಜಕೀಯ ಬೆಳವಣಿಗೆಯನ್ನು ಗಮನಿಸಬೇಕಾಗಿದೆ.

ಮೂರು ವರ್ಷಗಳ ಹಿಂದೆ ಇಬ್ಬರು ಬಿಜೆಪಿ ಶಾಸಕರು ಹಾಗೂ ಒಬ್ಬರು ಕಾಂಗ್ರೆಸ್ ಶಾಸಕರು ಜಯ ಗಳಿಸಿದ್ದರೆ ಲೋಕಸಭಾ ಚುನಾವಣೆಯಲ್ಲಿ ಭಾ.ಜ.ಪ. ಅಭ್ಯರ್ಥಿ ಜಯವನ್ನು ಗಳಿಸಿದ್ದರು. ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಒಳ ಜಗಳದಿಂದ ಕಾಂಗ್ರೆಸ್ ಬಂಡಾಯ ಪಕ್ಷೇತರ ಅಭ್ಯರ್ಥಿ ಜಯಗಳಿಸಿದ್ದರು. ಈಗ ವಿಧಾನಸಭೆ ವಿಸರ್ಜನೆಗೊಂಡು ಚುನಾವಣೆ ನಡೆಯಬೇಕಾದ ಪರಿಸ್ಥಿತಿಯಲ್ಲಿದೆ.

ಜಿಲ್ಲಾ ಪಂಚಾಯತಿಯಲ್ಲೂ ಕಾಂಗ್ರೆಸ್ ಅಧಿಕ ಸ್ಥಾನ ಗಳಿಸಿದ್ದರೂ ಅಧಿಕಾರಕ್ಕೇರಲು ಸಾಕಷ್ಟು ಸಂಖ್ಯಾಬಲವಿರಲಿಲ್ಲ. ಜೆಡಿ(ಎಸ್) ಬಿಜೆಪಿ ಮೈತ್ರಿಯಿಂದಾಗಿ ಪಕ್ಷೇತರ ಅಭ್ಯರ್ಥಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಮೊದಲ ಅವಧಿಯನ್ನು ಪೂರ್ಣಗೊಳಿಸಿದರು. ಎರಡನೇ ಅವಧಿಯ ಪ್ರಾರಂಭದಲ್ಲಿ ಈ ಪಕ್ಷೇತರ ಅಭ್ಯರ್ಥಿ ಕಾಂಗ್ರೆಸ್ ಕಡೆವಾಲಿದ್ದರಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಮಡಿಕೇರಿ ತಾಲ್ಲೂಕು ಪಂಚಾಯತ್ ಭಾ.ಜ.ಪ.ದ ಕೈಯಲ್ಲಿದೆ. ವಿರಾಜಪೇಟೆ ತಾಲ್ಲೂಕಿನಲ್ಲಿ ಪಂಚಾಯತಿನಲ್ಲಿ ಮೀಸಲಾತಿಯಿಂದಾಗಿ ಕಳೆದ ಬಾರಿ ಭಾ.ಜ.ಪ. ಅಧಿಕಾರ ನಡೆಸಿದ್ದರೆ ಈ ಬಾರಿ ಭಾ.ಜ.ಪ. ಜೆಡಿ(ಎಸ್) ಮೈತ್ರಿ ಮುರಿದ ಕಾರಣದಿಂದ ಕಾಂಗ್ರೆಸ್ ಪಾಲಾಗಿದೆ. ಸೋಮವಾರಪಪಟೆ ತಾಲ್ಲೂಕು ಪಂಚಾಯತ್ ಕಾಂಗ್ರೆಸ್ಸಿನ ಕೈಯಲ್ಲಿದೆ. ಇತ್ತೀಚೆಗೆ ನಡೆದ ಪಟ್ಟಣ ಪಂಚಾಯತ್ ಚುನಾವಣೆಯಲ್ಲಿ ಭಾ.ಜ.ಪ. ಮೇಲುಗೈ ಸಾಧಿಸಿದೆ. ಮಡಿಕೇರಿ ಮತ್ತು ಸೋಮವಾರಪೇಟೆಯಲ್ಲಿ ಅದು ಏಕಾಂಗಿಯಾಗಿ ಅಧಿಕಾರಕ್ಕೆ ಬಂದಿದೆ. ಕುಶಾಲನಗರ ಕಾಂಗ್ರೆಸ್ಸಿನ ಪಾಲಾಗಿದೆ. ವಿರಾಜಪೇಟೆಯಲ್ಲಿ ಯಾರಿಗೂ ಸ್ಪಷ್ಟ ಬಹುಮತ ಸಿಕ್ಕಿಲ್ಲ. ಸಿಪಿಐ(ಎಂ) ಪಕ್ಷದ ಸದಸ್ಯರು ಜನಶಕ್ತಿ ವೇದಿಕೆಯ ಮುಖಾಂತರ ಚುನಾವಣೆಯಲ್ಲಿ ಸ್ಪರ್ಧಿಸಿ ಮೂರು ಸ್ಥಾನಗಳಲ್ಲಿ ಗಣನೀಯ ಮತ ಗಳಿಸಿದ್ದಾರಾದರೂ ಗೆಲ್ಲಲಾಗಲಿಲ್ಲ.



ಕಾಂ. ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು

ಕಳೆದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳು ಎರಡು ಸ್ಥಾನಗಳಲ್ಲಿ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಸಿದ್ದಾಪುರ ಮತ್ತು ವಾಲ್ನೂರು ಪ್ರದೇಶಗಳಲ್ಲಿ ಗರಿಷ್ಠ ಮತ ಗಳಿಸಿದ್ದಾರೆ. ಕಳೆದ ಚುನಾವಣೆ ನಡೆಯುವ ಸಂದರ್ಭ ಕಾಂಗ್ರೇಸಿನ ಮೂರು ಶಾಸಕರುಗಳು ಮಂತ್ರಿಗಳಾಗಿ ಜಿಲ್ಲೆಯನ್ನು ನಿರ್ಲಕ್ಷಿಸಿದ್ದರ ಪರಿಣಾಮ ಮತ್ತು ಬೋಗಸ್ ಪ್ಯಾಕೇಜುಗಳನ್ನು ಘೋಷಿಸಿದ್ದರ ಪರಿಣಾಮ ಕಾಂಗ್ರೆಸ್ಸಿನ ಬಗ್ಗೆ ಜನರಿಗೆ ವಿರೋಧವಿದ್ದಿತು. ಬಿಜೆಪಿಯ ಮತಾಂಧರು ಜಿಲ್ಲೆಯಲ್ಲಿ ಮತಾಂಧತೆಯನ್ನು ಹರಿಯಬಿಟ್ಟು ಅಲ್ಪಸಂಖ್ಯಾತರ ಮೇಲೆ ನಿರಂತರ ಧಾಳಿಯನ್ನು ಸಂಘಟಿಸಿ ಪಾಲೂರು ಹಾಗೂ ಜಿಲ್ಲೆಯ 21 ಪ್ರಾರ್ಥನಾ ಮಂದಿರಗಳ ಮೇಲೆ ಧಾಳಿ ಮಾಡಿ ಅಪಾರ ಪ್ರಮಾಣದ ಆಸ್ತಿಪಾಸ್ತಿಗಳಿಗೆ ಹಾನಿಯನ್ನುಂಟುಮಾಡಿದ್ದರು. ಭಜರಂಗದಳ ಮತ್ತು ಆರ್‌ಎಸ್‌ಎಸ್ ಅಲ್ಪ ಸಂಖ್ಯಾತರನ್ನು ಗುರಿಯನ್ನಾಗಿಟ್ಟುಕೊಂಡು ಜಿಲ್ಲೆಯಲ್ಲಿ ಅಶಾಂತಿ ಸೃಷ್ಟಿಸಲು ಕಾರಣರಾದರು. ಇದರ ಪ್ರಯೋಜನ ಪಡೆದ ಭಾ.ಜ.ಪ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಡಿಕೇರಿ ಹಾಗೂ ವಿರಾಜಪೇಟೆಯಲ್ಲಿ ಜಯ ಗಳಿಸಿತು. ಸೋಮವಾರಪೇಟೆಯಲ್ಲಿ ಸ್ವಲ್ಪ ಅಂತರದಲ್ಲಿ ಸೋಲನ್ನನುಭವಿಸಿತು. ಲೋಕಸಭಾ ಕ್ಷೇತ್ರವನ್ನು ಭಾ.ಜ.ಪ. ವೇ ಗೆದ್ದುಕೊಂಡಿತು.

ಭಾ.ಜ.ಪ. ಈಗ ಎರಡು ಶಾಸಕರನ್ನು ಹಾಗೂ ಒಬ್ಬ ಸಂಸದರನ್ನು ಹೊಂದಿದೆ. ನಂತರ ನಡೆದ ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಮಡಿಕೇರಿ ಕ್ಷೇತ್ರವನ್ನು ಉಳಿಸಿಕೊಂಡಿದೆ. ವಿರಾಜಪೇಟೆ ತಾಲ್ಲೂಕಿನಲ್ಲಿ ಶಾಸಕರು ಮತ್ತು ಪಕ್ಷದ ನಡುವೆ ಭಿನ್ನಾಭಿಪ್ರಾಯಗಳು ಮುಂದುವರಿದಿದ್ದು ಆರ್.ಎಸ್.ಎಸ್. ಕಾರ್ಯಕರ್ತರು ಶಾಸಕರ ಮೇಲೆ ಹಲ್ಲೆ ನಡೆಸಿದ್ದಾರೆ ಮಾತ್ರವಲ್ಲದೆ ವಿರಾಜಪೇಟೆ ತಾಲ್ಲೂಕು ಬಂದ್ ಮಾಡಿ ಪ್ರತಿಭಟಿಸಿದ್ದಾರೆ. ಇದು ಶಾಸಕರು ಮತ್ತು ಕೆಲವು ಮುಖಂಡರ ನಡುವಣ ಗುದ್ದಾಟವಾಗಿದ್ದು ಶಾಸಕರು ಪಕ್ಷದ ಸ್ಥಳೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿಲ್ಲ. ಮಡಿಕೇರಿ ಶಾಸಕರು ಮತ್ತು ಉಸ್ತುವಾರಿ ಸಚಿವರುಗಳ ನಡುವೆ ವೈಮನಸ್ಸು ಹೆಚ್ಚಾಗಿ ರಸ್ತೆಯಲ್ಲೇ ಸ್ಫೋಟಗೊಂಡಿದೆ. ಆದರೆ ಶಾಸಕ ಬೋಪಯ್ಯ, ಆರ್.ಎಸ್.ಎಸ್. ನವರಾದದ್ದರಿಂದ ಭಿನ್ನಾಭಿಪ್ರಾಯವನ್ನು ಪರಿಹರಿಸಿಕೊಳ್ಳಲಾಗಿದೆ.

ಕಾಂಗ್ರೆಸ್ ಪಕ್ಷಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಬೆಂಬಲವಿದೆ. ಆದರೆ ಪಕ್ಷ ಗುಂಪುಗಾರಿಕೆಯಿಂದ ಹೊರಬಂದಿಲ್ಲ. ಸೋಮವಾರಪೇಟೆಯಲ್ಲಿ ಪಕ್ಷಕ್ಕೆ ಸ್ವಲ್ಪ ಹಿಡಿತವಿದೆ. ಅಲ್ಲಿಯೂ ಗುಂಪುಗಾರಿಕೆ ಇದೆ. ಸ್ಥಳೀಯ ನಾಯಕರಲ್ಲಿ ಹೊಂದಾಣಿಕೆ ಇಲ್ಲ. ಇದು ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ರಚನೆಯಲ್ಲಿ ಸ್ಫೋಟಗೊಂಡಿದೆ. ಸಂಘಟನಾ ಚಟುವಟಿಕೆಗಳು ನಡೆಯುತ್ತಿಲ್ಲ.

ಜೆಡಿ(ಎಸ್)ಜಿಲ್ಲೆಯಲ್ಲಿ ದೊಡ್ಡ ಶಕ್ತಿಯಾಗಿ ಉಳಿದಿಲ್ಲ. ಅರುಣ್ ಮಾಚಯ್ಯ ಹಾಗೂ ವಿ.ಪಿ. ಶಶಿಧರರ ಪ್ರಭಾವ ಬಿಟ್ಟರೆ ಜಿಲ್ಲೆಯಲ್ಲಿ ಅದು ಸಂಘಟಿತವಾಗಿಲ್ಲ. ಕಳೆದ ಚುನಾವಣೆಗಳಲ್ಲಿ ನಿರೀಕ್ಷಿತ ಫಲಿತಾಂಶ ಬರಲಿಲ್ಲ. ಕೆಲವು ವ್ಯಕ್ತಿಗಳು ಗೆಲುವು ಸಂಪಾದಿಸಿದ್ದರೂ ದೊಡ್ಡ ಶಕ್ತಿಯಾಗಿ ಹೊರಬರಲು ಸಾಧ್ಯವಾಗಿಲ್ಲ.

ಸಿಪಿಐ(ಎಂ) ಜಿಲ್ಲೆಯಲ್ಲಿ ದೊಡ್ಡ ಪಕ್ಷವಾಗಿರದಿದ್ದರೂ ತನ್ನ ಶಕ್ತಿಯನ್ನು ಉಳಿಸಿಕೊಂಡಿದೆ. ಜಿಲ್ಲೆಯಲ್ಲಿ ಸಮಸ್ಯೆಗಳು ಉದ್ಭವವಾದಾಗ ಪ್ರಮುಖ ಸಮಸ್ಯೆಗಳಿಗೆಲ್ಲಾ ಪಕ್ಷ ತನ್ನ ನಿಲುವನ್ನು ವ್ಯಕ್ತಪಡಿಸುತ್ತಾ ಮಧ್ಯಪ್ರವೇಶ ಮಾಡುತ್ತಾ ಬಂದಿದೆ. ಕಾಫಿ ಸಮಸ್ಯೆ, ಕಾರ್ಮಿಕರ ಸಮಸ್ಯೆಗಳು, ಮತಾಂಧ ಶಕ್ತಿಗಳ ವಿರುದ್ಧ ನಿರಂತರ ಧ್ವನಿ ಎತ್ತುತ್ತಾ ಬಂದಿವೆ. ಬಾಣೆ ಹಕ್ಕಿನ ಸಮಸ್ಯೆ, ಗ್ರೇಟರ್ ತಲಕಾವೇರಿ ಯೋಜನೆಯಂತಹ ಮಾರಕ ಯೋಜನೆಗಳು ಹೊರ ಬಂದಾಗ ಪಕ್ಷ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ವಿಶಾಲ ವೇದಿಕೆ ಸಂಘಟಿಸಿ ಹೋರಾಡಲೂ ಸಾಧ್ಯವಾಗಿದೆ. ಕೆಲವು ಪ್ರದೇಶಗಳಲ್ಲಿ ತನ್ನ ಪ್ರಭಾವ ಉಳಿಸಿಕೊಂಡಿದೆ.

ಖಾಸಗೀಕರಣ, ಜಾಗರೀಕರಣ, ಉದಾರೀಕರಣ, ಪ್ರಕ್ರಿಯೆಯ ವಿರುದ್ಧ, ದುಡಿಯುವ ವರ್ಗ ಮತ್ತು ಸಮಾಜವಾದದ ಮೇಲೆ ನಡೆಯುತ್ತಿರುವ ಧಾಳಿಯ ವಿರುದ್ಧ ಹೋರಾಟ ಸಂಘಟಿಸಿದೆ. ಸಾಮೂಹಿಕ ಸಂಘಟನೆಗಳು ಸಹ ಚಳುವಳಿಗಳನ್ನು ಸಂಘಟಿಸಿವೆ.

ಆರ್.ಎಸ್.ಎಸ್., ವಿಶ್ವ ಹಿಂದೂ ಪರಿಷತ್, ಭಜರಂಗ ಸಂಘಟನೆಗಳು ಚಟುವಟಿಕೆಗಳಿಂದ ಕೂಡಿ ಸಕ್ರಿಯವಾಗಿದೆ. ರಾಮಸೇತು ರಥಯಾತ್ರೆ, ನಡೆದಿದೆ. ಆರ್.ಎಸ್. ಎಸ್.ನ ಶಿಕ್ಷಣ ವರ್ಗ ನಡೆಯುತ್ತಿದೆ. ಗೋ ಪೂಜೆಯಂತಹ ವಿಷಯಗಳನ್ನೆತ್ತಿಕೊಂಡು ಈ ಸಂಘಟನೆಗಳು ಜನರ ಮಧ್ಯೆ ಕೋಮುದ್ವೇಷದ ವಿಷ ಹರಡುತ್ತಾ ಹೋಗುತ್ತಿವೆ.

ಇಂತಹ ಪರಿಸ್ಥಿತಿಯ ಕುರಿತು ಹಾಗೂ ಈ ಮೇಲಿನ ವಿವಿಧ ವಿಷಯ ಸಮಸ್ಯೆಗಳ ಕುರಿತು ಡಿಸೆಂಬರ್ 2 ಮತ್ತು 3ರಂದು ವಿರಾಜಪೇಟೆಯಲ್ಲಿ ನಡೆದ ಸಿಪಿಐ(ಎಂ)ನ ಕೊಡಗು ಜಿಲ್ಲಾ ಸಮ್ಮೇಳನ ವಿವರವಾಗಿ ಚರ್ಚಿಸಿದೆ. ಈ ಆಧಾರದಲ್ಲಿ ಸಮಸ್ಯೆಗಳನ್ನು ಅದರ ಮೂಲ ಕಾರಣಗಳನ್ನು ಗುರುತಿಸಿ ಮುಂದಿನ ದಿನಗಳಲ್ಲಿ ಈ ಸಂಬಂಧದ ಚಳುವಳಿ ಹೋರಾಟಗಳನ್ನು ಬಲಪಡಿಸಲು ತೀರ್ಮಾನಿಸಿದೆ ಹಾಗೂ ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷವನ್ನು ಬಲಪ್ಪಗೊಳಿಸಲು ನಿರ್ಣಯಿಸಿದೆ. 'ಕಾಂ.ವೀರಸ್ವಾಮಿ' ವೇದಿಕೆಯಲ್ಲಿ ನಡೆದ ಈ ಸಮ್ಮೇಳನದ ಪೂರ್ವಭಾವಿಯಾಗಿ ವಿರಾಜಪೇಟೆಯ ಮಾರಿಗುಡಿಯ ಸಮೀಪದಿಂದ ಮೆರವಣಿಗೆ ನಡೆಯಿತು. ಸಮ್ಮೇಳನದಲ್ಲಿ ಹಾರಿಸಲಾದ ಬಾವುಟವನ್ನು ಬೆಟ್ಟಳ್ಳಿಯಲ್ಲಿರುವ ವೀರಾಸ್ವಾಮಿಯ ಮನೆಯಿಂದ ನೆಲಹುದಿಕೇರಿ ಸಿದ್ದಾಪುರ, ಅಮ್ಮತ್ತಿ ಮಾರ್ಗವಾಗಿ ಬೆಟ್ಟಳ್ಳಿ ಶಾಖೆಯ ನೇತೃತ್ವದಲ್ಲಿ ವಿರಾಜಪೇಟೆಗೆ ತರಲಾಯಿತು. ನಂತರ ಕಾಂ.ಪೀಟರ್ ಲೋಬೋರವರ ಅಧ್ಯಕ್ಷತೆಯಲ್ಲಿ ಡಾ.ಅಶ್ರಣ್ಣನಗರದಲ್ಲಿ (ಪಂಚಾಯತ್ ಹಾಲ್) ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಸದಸ್ಯರೂ, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ. ಗುರುಶಾಂತ್, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣಶೆಟ್ಟಿ, ಡಾ.ದುರ್ಗಾಪ್ರಸಾದ್ ಮಾತನಾಡಿದರು. ಕಾಂ.ವಸಂತ್‌ಕುಮಾರ್ ಸ್ವಾಗತಿಸಿದರು. ಕಾಂ.ಭರತ್ ವಂದನಾರ್ಪಣೆ ಸಲ್ಲಿಸಿದರು. ಪ್ರತಿನಿಧಿ ಸಮ್ಮೇಳನ ನಂತರ ಎನ್‌ಜಿಒ ಹಾಲ್‌ನಲ್ಲಿ ನಡೆಯಿತು.

ಸಮ್ಮೇಳನದ ಕೊನೆಯಲ್ಲಿ ದುರ್ಗಾಪ್ರಸಾದ್, ಪೀಟರ್ ಲೋಬೋ, ಇಬ್ರಾಹಿಂ, ವಸಂತ್‌ಕುಮಾರ್ ಹೊಸಮನೆ, ಭರತ್, ಜೋಸ್, ರಮಾನಾಥ್, ಮಹದೇವ್ ಈ ಎಂಟು ಜನರ ಜಿಲ್ಲಾ ಸಂಘಟನಾ ಸಮಿತಿಯನ್ನು ಸಮ್ಮೇಳನ ಆಯ್ಕೆಮಾಡಿತು. ಈ ಸಮಿತಿಗೆ ಕಾರ್ಯದರ್ಶಿಯಾಗಿ ಡಾ.ದುರ್ಗಾಪ್ರಸಾದ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ರಮೇಶ್‌ರವರು ಜಿಲ್ಲಾ ಸಂಘಟನಾ ಸಮಿತಿಗೆ ಆಹ್ವಾನಿತರಾಗಿ ಆಯ್ಕೆಯಾಗಿದ್ದಾರೆ.

ಯಡಿಯೂರಪ್ಪನವರ ವಂಚನಾಪರ ಭರವಸೆ

ಭಾ.ಜ.ಪ ಮುಖಂಡ ಯಡಿಯೂರಪ್ಪನವರು ಇತ್ತೀಚೆಗೆ ಮಡಿಕೇರಿಗೆ ಬಂದಾಗ "ಬಿ.ಜೆ.ಪಿ. ಸರಕಾರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದರೆ ಭಾಣೆ ಹಕ್ಕಿನ ಸಮಸ್ಯೆಯನ್ನು ಇಪ್ಪತ್ನಾಲ್ಕು ಗಂಟೆಗಳಲ್ಲಿ ಬಗೆಹರಿಸುತ್ತೀವೆ" ಎಂದು ಹೇಳಿದ್ದು ಕೇವಲ ವಂಚನೆಯಾಗಿದೆ.

ಅವರ ಸಹಭಾಗಿತ್ವದ ಸರಕಾರದಲ್ಲಿ ಅವರದೇ ಮಂತ್ರಿಯ ಕೈಯಲ್ಲಿದ್ದ ಖಾತೆಯಿಂದ ಬಂದ ಸುತ್ತೋಲೆಯೇ ಬಾಣೆ ಹಕ್ಕಿನ ಸಮಸ್ಯೆಗೆ ಕಾರಣವಾಗಿದೆ.

ಕೊಡಗಿನಲ್ಲಿ ಭಾ.ಜ.ಪದ ಘಟಕ ಒಗ್ಗೊರಲಿನಿಂದ ಈ ಸುತ್ತೋಲೆಯನ್ನು ಹಿಂತೆಗೆಯಲು ಆಗ್ರಹಿಸಿದರೂ ಅವರದೇ ಮಂತ್ರಿ ಅದನ್ನು ಹಿಂತೆಗೆಯಲಿಲ್ಲ.

[illegible]


ಹಿನ್ನೆಲೆಯಲ್ಲಿ ಮತ್ತು ವಿರೋಧ ಪಕ್ಷಗಳು ವಿಧಾನಸಭೆಯಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಜುಲೈ 28ರಂದು ಸುತ್ತೋಲೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಘೋಷಿಸಿದ್ದರೂ ಕೊಡಗಿನಲ್ಲಿ ಬಾಣೆ ಹಿಡುವಳಿದಾರರು "ಅಕ್ರಮವಾಗಿ ಸರಕಾರೀ ಭೂಮಿಯನ್ನು ಕೈವಶ ಮಾಡಿಕೊಂಡಿರುವವರು" ಎಂಬ ತಪ್ಪಾದ ತಿಳುವಳಿಕೆಯ ಆಧಾರದಲ್ಲಿ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರು "ದ.ಕ.ಜಿಲ್ಲೆ, ಕೊಡಗಿನವರನ್ನು ಸೇರಿಸಿ ಒಂದು ಸಮಿತಿ ರಚನೆ ಮಾಡುವುದಾಗಿ" ಘೋಷಿಸಿದ್ದರು. ಈ ಘೋಷಣೆ ಯಡಿಯೂರಪ್ಪನವರು ಮತ್ತು ಕೊಡಗಿನ ಭಾ.ಜ.ಪ. ಮುಖಂಡರನ್ನೊಳಗೊಂಡು ಭಾ.ಜ.ಪ ಶಾಸಕರ ಸಮಕ್ಷದಲ್ಲೇ ಮಾಡಿದ್ದಾಗಿತ್ತು. ಆಗ ಅಲ್ಲಿಯೇ ಇದ್ದ ಯಡಿಯೂರಪ್ಪನವರಾಗಲಿ, ಕೊಡಗಿನ ಭಾ.ಜ.ಪ ಶಾಸಕ ಕೆ.ಜಿ.ಬೋಪಯ್ಯನವರಾಗಲಿ, ಬಸವರಾಜ್‌ರವರಾಗಲಿ ಈ ಘೋಷಣೆಯನ್ನು ವಿರೋಧಿಸಿರಲಿಲ್ಲ.

ಸ್ವತ: ಯಡಿಯೂರಪ್ಪನವರೇ ಕೊಡಗಿನ ಬಾಣೆ ಹಿಡುವಳಿದಾರರನ್ನು ಎರಡು ಹೊತ್ತಿನ ಗಂಜಿಗಾಗಿ ಹಿಂದೆ ಅನ್ ಆಥೊರೈಸ್ಡ್ ಕಲ್ಟಿವೇಟ್ ಮಾಡಿಕೊಂಡವರು" ಎಂದೇ ವಿವರಿಸಿದ್ದರು ಎನ್ನುವುದು ಗಮನಾರ್ಹವಾಗಿದೆ.

ಆದ್ದರಿಂದ ಈ ವ್ಯಾಖ್ಯಾನದ ಆಧಾರದಲ್ಲಿ ಸಮಿತಿ ರಚನೆಯ ಘೋಷಣೆ ಮಾಡಿರುವುದೇ ಇಂದಿನ ಸಮಸ್ಯೆಗೆ ಕಾರಣವಾಗಿದೆ. ತಮ್ಮ ಮಂತ್ರಿಮಂಡಲದಲ್ಲಿ ತಮ್ಮ ಮಂತ್ರಿಯ ಖಾತೆಯಿಂದಲೇ ಹೊರಬಂದ ಸುತ್ತೋಲೆಯನ್ನು ಹಿಂತೆಗೆಸಲು ಸಾಧ್ಯವಾಗದವರು ಮತ್ತು ಸಮಸ್ಯೆಯನ್ನು ತಪ್ಪಾಗಿ ವ್ಯಾಖ್ಯಾನಿಸಿದವರು ಮತ್ತೆ ತಾವು ಅಧಿಕಾರಕ್ಕೆ ಬಂದರೆ ಬಗೆಹರಿಸುತ್ತೇವೆನ್ನುವುದು ವಂಚನೆಯಾಗಿದೆ.

ಅವಿಭಜಿತ ಧಾರವಾಡ ಜಿಲ್ಲೆ ಜನರ ಬದುಕಿನ ಪ್ರಶ್ನೆಗಳು

ಧಾರವಾಡ, ಗದಗ, ಹಾವೇರಿ ಜಿಲ್ಲಾ ಪ್ರದೇಶ ಒಳಗೊಂಡ ಧಾರವಾಡ ಜಿಲ್ಲಾ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನ ಧಾರವಾಡದ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಭವನದ ಕಾಂ.ಅಬ್ದುಲ್ ರಜಾಕ್ ಐ. ಮುಲ್ಲಾ ಸಭಾಂಗಣ ಕಾಂ.ಎಸ್.ಎಫ್.ಕ್ಯಾದಗಿ ವೇದಿಕೆಯಲ್ಲಿ ಡಿಸೆಂಬರ್ 25 ಹಾಗೂ 26 ರಂದು ಯಶಸ್ವಿಯಾಗಿ ನಡೆಯಿತು. ಈ ಮೂರು ಜಿಲ್ಲೆಗಳ ಆರ್ಥಿಕ ಸಾಮಾಜಿಕ, ರಾಜಕೀಯ ಪರಿಸ್ಥಿತಿ ಜನರ ಸಮಸ್ಯೆಗಳ ಕುರಿತು ಅಲ್ಲಿ ಗುರುತಿಸಿದ್ದೇನು?



ಕಳಸಾಬಂಡೂರಿ ನಾಲಾ ಜೋಡಣೆಯ ನೀರಾವರಿ ಯೋಜನೆ ನೆನೆಗುದಿಗೆ ಬಿದ್ದಿದೆ. ಹೋರಾಟಕ್ಕೆ ರಾಜಕೀಯ ಬಣ್ಣ ಬಂದಿದೆ. ಬಿಜೆಪಿ ಇದರ ಲಾಭ ಪಡೆಯಲು ಯತ್ನಿಸಿದೆ. ನೀರಾವರಿ ಸಚಿವರಾಗಿದ್ದ ಈಶ್ವರಪ್ಪ ಅಕ್ಟೋಬರ್- 2006ರಲ್ಲಿ ಖಾನಾಪುರದಲ್ಲಿ ಜನಪ್ರತಿನಿಧಿಗಳ ಸಭೆ ಸೇರಿಸಿ ಯೋಜನೆ ಕಾರ್ಯ ಆರಂಭಿಸುವ ಆಶ್ವಾಸನೆ ನೀಡಿ ಬಂದಿದ್ದಾರೆ. ಗೋವಾ ಸರ್ಕಾರದ ತಕರಾರು ಇರುವ ಕಾರಣ ಯೋಜನೆ ಜಾರಿಗೆ ಕೇಂದ್ರದ ಮಧ್ಯ ಪ್ರವೇಶ ಅಗತ್ಯವಾಗಿದೆ. ಆಂಧ್ರ, ಮಹಾರಾಷ್ಟ್ರ ಸರ್ಕಾರಗಳು ಯಾರ ಅನುಮತಿ ಪಡೆಯದೇ ಕೆಲ ಯೋಜನೆ ಆರಂಭಿಸಿವೆ. ಬಿ.ಜೆ.ಪಿ. ನಾವೇಕೆ ಹಿಂದೆ ಬೀಳಬೇಕೆಂದು ಜನರ ಮುಂದೆ ಹೇಳಿಕೊಳ್ಳುತ್ತಾ ತಿರುಗುತ್ತಿದೆ. ಕೆಲಸ ಪ್ರಾರಂಭಿಸಿದ ನಾಟಕ ಮಾಡಿದ ಬಿಜೆಪಿ ಸಚಿವರು ಗೋವಾ ಸರ್ಕಾರದ ವಿರೋಧದ ಕಾರಣಕ್ಕೆ ಕೆಲಸ ನಿಂತರೂ ಬಿಜೆಪಿಗೆ ಕಳೆದುಕೊಳ್ಳುವುದೇನು ಇಲ್ಲ ಎಂಬುದು ಅದರ ಲೆಕ್ಕಾಚಾರವಾಗಿದೆ.

ರಾಜಕೀಯ ಆಡುಂಬೋಲ

ಏಪ್ರಿಲ್ 07 ರಲ್ಲಿ ನಡೆದ ಗೋವಾ ವಿಧಾನಸಭಾ ಚುನಾವಣಾ ಪ್ರಚಾರ ಸಮಯದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮಹಾದಾಯಿ ತಿರುವು(ಕಳಸಾ ಬಂಡೂರಿ ನಾಲಾ) ಯೋಜನೆ ಜಾರಿಯಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು ಎನ್ನುವ ಸುದ್ದಿಗಳು ಪತ್ರಿಕೆಗಳಲ್ಲಿ ವರದಿಯಾದಾಗ ಅದು ಸಹಜವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರತಿಭಟನೆಗೆ ಕಾರಣವಾಯಿತು. ಈ ಅವಕಾಶವನ್ನು ಬಿಜೆಪಿ ರಾಜಕೀಯವಾಗಿ ಚೆನ್ನಾಗಿಯೇ ಬಳಸಿಕೊಂಡಿತು. ಕರ್ನಾಟಕ ರಕ್ಷಣಾ ವೇದಿಕೆ, ಶ್ರೀರಾಮಸೇನೆಗಳು ಪ್ರತಿಭಟನೆ ನಡೆಸಿದವು. ಈ ಘಟನೆ ಕಾಂಗ್ರೆಸ್‌ಗೆ ಇರಸು -ಮುರುಸು ಉಂಟು ಮಾಡಿತು. ಕಾಂಗ್ರೆಸ್ ನಾಯಕರು ಸಮರ್ಥನಾ ಹೇಳಿಕೆಗಳನ್ನು ನೀಡುವಂತಾಯಿತು. ಕಾಂಗ್ರೆಸ್ ನಿಯೋಗ ದೆಹಲಿಗೆ ತೆರಳಿ ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿತು.


ಪ್ರವಾಹದ ಭೀಕರತೆ

ಒಟ್ಟಾರೆ ಕಳಸಾ ಬಂಡೂರಿ ನಾಲಾ ಯೋಜನೆ ಒಂದು ರಾಜಕೀಯ ಆಡಂಬೋಲವಾದಂತೆ ಕಂಡು ಬರುತ್ತಿದೆ.

'ಜಾತಿ'ಕಾರಣ

ನವೆಂಬರ್ 2006ರಲ್ಲಿ ಗದಗ ಜಿಲ್ಲೆಯ ನರಗುಂದದಲ್ಲಿ ರಾಣಿ ಕಿತ್ತೂರು ಚೆನ್ನಮ್ಮ ಉತ್ಸವದ ಹೆಸರಿನಲ್ಲಿ ವೀರಶೈವ ಪಂಚಮಸಾಲಿ ಪಂಗಡದವರ ಬೃಹತ್ ಸಮಾವೇಶ ಜರುಗಿತು. ಮಂತ್ರಿಗಳು, ಸಂಸದ-ಶಾಸಕರು ಭಾಗವಹಿಸಿದ್ದರು. ವಿವಿಧ ಪಂಗಡದ ವೀರಶೈವರು ಒಂದಾಗಬೇಕು ಎಂಬ ಕೂಗು ಒಂದೆಡೆ ಇದ್ದರೂ, ಪಂಚ ಮಸಾಲಿ ಲಿಂಗಾಯತರು ಮಾತ್ರ ಸಂಘಟಿತರಾಗುತ್ತಿರುವುದು ಕಂಡು ಬರುತ್ತಿದೆ. ಪಂಚಮಸಾಲಿಗಳ ಪ್ರತ್ಯೇಕ ಧರ್ಮಪೀಠ ಮಾಡುವ ಪ್ರಯತ್ನವೂ ನಡೆಯುತ್ತಿದೆ. ರಾಜಕೀಯವಾಗಿ ಈ ಪಂಗಡವನ್ನು ಕಡೆಗಣಿಸಲಾಗಿದೆ ಎಂಬ ಭಾವನೆ ಬಿತ್ತಲಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಈ ಪಂಗಡದವರಿಗೆ ಯಾವುದೇ ಸ್ಥಾನವಿಲ್ಲ ಎಂಬ ಆರೋಪವಿದ್ದು, ಬಿಜೆಪಿ ಅವರನ್ನು ತನ್ನತ್ತ ಸೆಳೆದುಕೊಳ್ಳುವ ಪ್ರಯತ್ನ ಮಾಡುತ್ತಿದೆ.

ಪರಿಹಾರಕ್ಕೆ ಒತ್ತಾಯ

ಸಿಂಗಟಾಲೂರ ನೀರಾವರಿ ಯೋಜನೆಗಾಗಿ ಹಮ್ಮಿಗಿ ಹತ್ತಿರ ಅಣೆಕಟ್ಟು ನಿರ್ಮಿಸಲಾಗುತ್ತಿದ್ದು ಭೂಮಿ ಕಳೆದುಕೊಳ್ಳುವ ರೈತರು ಹಾಗೂ ಮುಳುಗಡೆಗೆ ಒಳಗಾಗುವ ಗ್ರಾಮಗಳ ಜನರು ಹೆಚ್ಚಿನ ಪರಿಹಾರಕ್ಕೆ ಒತ್ತಾಯಿಸಿ ನದಿಯ ಆ ಕಡೆ ಮತ್ತು ಈ ಕಡೆ ನಡೆಸುತ್ತಿದ್ದ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಬೆಂಬಲ ಸೂಚಿಸಿತು. ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ನೇತೃತ್ವದಲ್ಲಿ ಒಂದು ನಿಯೋಗ ಅಲ್ಲಿ ಭೇಟಿ ನೀಡಿತು. ನಿಯೋಗದಲ್ಲಿ ನಿತ್ಯಾನಂದಸ್ವಾಮಿ, ಬಿ.ಎಸ್. ಸೊಪ್ಪಿನ, ರವೀಂದ್ರ ಹೊನವಾಡ, ಬಸವರಾಜ ಮಂತೂರ, ಎಂ.ಎಸ್.ಹಡಪದ ಮತ್ತಿತರರಿದ್ದರು. ಹೋರಾಟ ನಿರತರಿಗೆ ಕೆಲವು ಸಲಹೆ ನೀಡಿ, ಅವರ ಮುಖಂಡರೊಂದಿಗೆ ಗದಗದಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಸಲಾಯಿತು. ಹೋರಾಟ ತೀವ್ರವಾಗಬಹುದೆಂದರಿತ ಸರ್ಕಾರದಲ್ಲಿದ್ದ ಸಚಿವ ಎಂ.ಪಿ.ಪ್ರಕಾಶ್ ಹೋರಾಟದ ಸ್ಥಳಕ್ಕೆ ಭೇಟಿ ನೀಡಿ ಪರಿಹಾರದ ಭರವಸೆ ನೀಡಿದ್ದರಿಂದ ಹೋರಾಟ ಸ್ಥಗಿತಗೊಂಡಿತು.

2005ರ ಕೊನೆಯಲ್ಲಿ ಪಂಚಾಯತ್ ಸಂಸ್ಥೆಗಳಿಗೆ ಚುನಾವಣೆ ನಡೆದವು.ಹಾವೇರಿ ಗದಗ ಜಿಲ್ಲೆಯಲ್ಲಿ ಕಾಂಗ್ರೆಸ್ ತನ್ನ ಪ್ರಭಾವ ಉಳಿಸಿಕೊಂಡಿತು. ಆದರೆ ಧಾರವಾಡ ಜಿಲ್ಲೆಯಲ್ಲಿ ಕಾಂಗ್ರೆಸ್ ಶಕ್ತಿ ಕುಂದಿದೆ. ಬಿಜೆಪಿ. ಶಾಸಕರಿದ್ದ ಪ್ರದೇಶಗಳಲ್ಲಿ ಅವರ ಪ್ರಭಾವ ಎದ್ದು ಕಂಡಿಲ್ಲ. ಬಿಜೆಪಿಗೆ ಅಷ್ಟೊಂದು ಪ್ರಯೋಜನವಾಗಿಲ್ಲ. ಸಮಾಜವಾದಿ, ಅಹಿಂದಗಳು ಸ್ಪರ್ಧೆಗಿಳಿದಿದ್ದರೂ ಮತದಾರರ ವಿಶ್ವಾಸಗಳಿಸುವಲ್ಲಿ ವಿಫಲವಾಗಿವೆ.

2007ರ ಸೆಪ್ಟೆಂಬರ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಗದಗ, ನರಗುಂದ, ಹಾವೇರಿ, ಗಜೇಂದ್ರಗಢ, ರಾಣೆಬೆನ್ನೂರ, ಹಾನಗಲ್‌ಗಳಲ್ಲಿ ಬಿಜೆಪಿಯು ಗೆದ್ದಿತು. ಸವಣೂರ, ಬಂಕಾಪುರ, ಬ್ಯಾಡಗಿ, ರೋಣ, ಮುಂಡರಗಿ, ಮುಳಗುಂದ, ಲಕ್ಷ್ಮೇಶ್ವರ, ಅಳ್ನಾವರಗಳಲ್ಲಿ ಕಾಂಗ್ರೆಸ್ ಗೆದ್ದರೆ, ಕುಂದಗೋಳ, ನವಲಗುಂದ, ಅಣ್ಣೇಗೇರಿ, ಕಲಘಟಗಿ, ಶಿಗ್ಗಾಂವ, ನರೇಗಲ್‌ಗಳಲ್ಲಿ ಅತಂತ್ರ ಸ್ಥಿತಿ ಶಿರಹಟ್ಟಿ, ಹಿರೇಕೆರೂರಗಳಲ್ಲಿ ಜೆಡಿ(ಎಸ್) ಪಕ್ಷಗಳಿಗೆ ಜಯ ಒದಗಿದೆ. ಒಟ್ಟಾರೆ ಬಿಜೆಪಿಗೆ ಮುನ್ನಡೆ, ಕಾಂಗ್ರೆಸ್‌ಗೆ ಹಿನ್ನಡೆ ಉಂಟಾಗಿದೆ. ಉಳಿದ ಪಕ್ಷಗಳ ಪ್ರಭಾವ ಗೌಣವೆನ್ನುವಂತಾಗಿದೆ.

ಗದಗ ಜಿಲ್ಲೆ ಗಜೇಂದ್ರಗಢದಲ್ಲಿ ಸಿಪಿಐ(ಎಂ) ಪಕ್ಷದಿಂದ ಎರಡು ವಾರ್ಡ್‌ಗಳಲ್ಲಿ ಜಿಲ್ಲಾ ಸಮಿತಿ ಸದಸ್ಯ ಎಂ.ಎಸ್. ಹಡಪದ ಹಾಗೂ ಗಜೇಂದ್ರಗಡ ಶಾಖಾ ಕಾರ್ಯದರ್ಶಿ ಶರಣಬಸವ ಮರದ ಸ್ಪರ್ಧಿಸಿದ್ದರು. ಬಿಜೆಪಿ, ಕಾಂಗ್ರೆಸ್‌ಗಳಿಗೆ ಪ್ರಬಲ ಸ್ಪರ್ಧೆ ಒಡ್ಡಲಾಯಿತು. ಕೊನೆಗಳಿಗೆಯಲ್ಲಿ ಬಿಜೆಪಿ ಎಲ್ಲಾ ತೆರನಾದ ಅಕ್ರಮಗಳನ್ನು ಎಸಗಿ ಜಯಗಳಿಸಿತು. ಸಿಪಿಐ(ಎಂ) ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಕಾಂಗ್ರೆಸ್ 3ನೇ ಸ್ಥಾನಕ್ಕಿಳಿಯಿತು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜೆಡಿ(ಎಸ್) ತೊರೆದು ಕಾಂಗ್ರೆಸ್ ಸೇರಿದ ಕಾರಣ ಜೆಡಿ(ಎಸ್) ದುರ್ಬಲವಾಗಿದೆ. ಕುರುಬ ಸಮುದಾಯದವರು ಜಾತಿ ಲೆಕ್ಕಾಚಾರ ಮಾಡುವ ನೀಡುವ ಸಾಧ್ಯತೆಗಳು ಕಂಡು ಬರುತ್ತಿವೆ.

ಈ ಸಮಯದಲ್ಲಿ ಜೆಡಿ(ಎಸ್) ನಲ್ಲಿನ ಆಂತರಿಕ ಕಚ್ಚಾಟ ಬೀದಿಗೆ ಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಸಚಿವ ಹೊರಟ್ಟಿಯವರ ವಿರುದ್ಧ ಯುವ ಜನತಾದಳ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಡಾ: ಬಂಜಗೆರೆ ಜಯಪ್ರಕಾಶ್‌ರ 'ಆನುದೇವ ಹೊರಗಣವನು' ಕೃತಿ ಬಸವಣ್ಣನವರ ಅವಹೇಳನ ಮಾಡಿದೆ, ಅದನ್ನು ಮುಟ್ಟುಗೋಲು ಹಾಕಬೇಕು, ಲೇಖಕರನ್ನು ಶಿಕ್ಷಿಸಬೇಕೆಂಬ ಆಕ್ರೋಶ ಲಿಂಗಾಯುತ ಸಮಾಜದವರಿಂದ ರಾಜ್ಯದೆಲ್ಲೆಡೆ ವ್ಯಕ್ತವಾಯಿತು. ಈ ಪ್ರದೇಶದಲ್ಲಿ ಆಕೃತಿ ಸುಡುವ ಮೂಲಕ ಪ್ರತಿಭಟನೆ ವ್ಯಕ್ತವಾದವು. ಪಾಟೀಲ ಪುಟ್ಟಪ್ಪನಂತಹ ಹಿರಿಯರೂ ಈ ಪ್ರತಿಭಟನೆಯಲ್ಲಿ ಮುಂದಿದ್ದರು. 'ಕೃತಿ ರದ್ದತಿ ಇಲ್ಲ' ಎಂಬ ಗೃಹ ಸಚಿವ ಎಂ.ಪಿ.ಪ್ರಕಾಶ್‌ರ ಹೇಳಿಕೆಗೆ ತೀವ್ರ ಟೀಕೆ ವ್ಯಕ್ತವಾಯಿತು. ಒತ್ತಡಕ್ಕೆ ಸರ್ಕಾರ ಮಣಿಯಿತು.ಲೇಖಕರು ಕೃತಿ ಹಿಂತೆಗೆದುಕೊಂಡಿದ್ದೂ ಆಯಿತು.

ಧಾರವಾಡ ಮತ್ತಿತರ ಕಡೆ ಪ್ರಗತಿಪರ ಸಂಘಟನೆಗಳು ಅಭಿವ್ಯಕ್ತಿ ಸ್ವಾತಂತ್ರ್ಯ ಬೆಂಬಲಿಸಿ ಸಭೆ ನಡೆಸಿದವು, ಹೇಳಿಕೆಗಳನ್ನು ನೀಡಿದವು.

ಕಾವೇರಿ ನದಿ ನೀರಿನ ನ್ಯಾಯಾಧೀಕರಣದ ತೀರ್ಪಿನ ವಿರುದ್ಧ ರಾಜ್ಯದಲ್ಲಿ ತೀವ್ರ ಪ್ರತಿಭಟನೆ. ಮುಖ್ಯವಾಗಿ ಆ ನದಿ ಪ್ರದೇಶದಲ್ಲಿ ವ್ಯಕ್ತವಾಯಿತು. ಹಳೆ ಮೈಸೂರ ಪ್ರಾಂತ್ಯದಲ್ಲಿ ಕಂಡಂತೆ ಉತ್ತರ ಕರ್ನಾಟಕದ ಭಾಗದಲ್ಲಿ ಪ್ರತಿಭಟನೆ ವ್ಯಾಪಕವಾಗಿ ಕಂಡು ಬರಲಿಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿ, ಕೃಷ್ಣಾ ನದಿ ಕೊಳ್ಳ ಯೋಜನೆಗಳ ಕುರಿತು ದಕ್ಷಿಣ ಕರ್ನಾಟಕದವರ ಅನಾಸಕ್ತಿ ಇಲ್ಲಿ ಪ್ರಭಾವ ಬೀರಿದಂತೆ ಕಂಡು ಬರುತ್ತದೆ.

ಈ ಮೇಲಿನ ಮುಖ್ಯ ಅಂಶಗಳ ಮೇಲೆ ಸಮ್ಮೇಳನ ಚರ್ಚಿಸಿತು. ಮುಂದಿನ ದಿನಗಳಲ್ಲಿ ಹೋರಾಟ, ಸಂಘಟನೆ ವಿಸ್ತರಿಸಲು ಕರೆ ನೀಡಿತು.

ನಿರ್ಣಯಗಳು

2007ರ ಸೆಪ್ಟೆಂಬರ್ ತಿಂಗಳಲ್ಲಿ ಬಿದ್ದ ಬಾರಿ ಮಳೆಯಿಂದ ಮಲಪ್ರಭಾ ನದಿ ಹಾಗೂ ಬೆಣ್ಣೆ ಹಳ್ಳಕ್ಕೆ ನೆರೆ ಹಾವಳಿ ಉಂಟಾಗಿ ಗದಗ ಜಿಲ್ಲೆಯ ರೋಣ, ನರಗುಂದ ಹಾಗೂ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕುಗಳ ಅನೇಕ ಗ್ರಾಮಗಳು ಸಂಪೂರ್ಣ ಜಲಾವೃತಗೊಂಡವು. ಜೀವ ಹಾನಿ, ಬೆಳೆ ಹಾಗೂ ಆಸ್ತಿ-ಪಾಸ್ತಿ ಹಾನಿ ಸಂಭವಿಸಿದೆ. ಮನೆ ಕಳೆದುಕೊಂಡವರಿಗೆ ಹೆಚ್ಚಿನ ಪರಿಹಾರ ಹಾಗೂ ಬೆಳೆ ಹಾನಿಗೆ ಸಮೀಕ್ಷೆ ನಡೆಸಿ ಸೂಕ್ತ ಪರಿಹಾರ ನೀಡಬೇಕು.

ಹಾವೇರಿ ಜಿಲ್ಲೆಯ ಸಂಗೂರು ಸಕ್ಕರೆ ಕಾರ್ಖಾನೆಯಲ್ಲಿ ಹಾಗೂ ಉತ್ಪಾದನೆಯನ್ನು ಸ್ಥಗಿತಗೊಳಿಸಿದ್ದು ಇದರಿಂದ ಕಬ್ಬು ಬೆಳೆಗಾರರು ಹಾಗೂ ಕಾರ್ಖಾನೆಯ ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರ್ಕಾರ ಕೂಡಲೇ ಮಧ್ಯ ಪ್ರವೇಶ ಮಾಡಿ ಕಬ್ಬು ಬೆಳೆಗಾರರಿಗೆ ಬಾಕಿ ಹಣ ಪಾವತಿಸುವುದು ಹಾಗೂ ಕಾರ್ಮಿಕರಿಗೆ ಬಾಕಿ ವೇತನವನ್ನು ನೀಡಿ ಅವರಿಗೆ ಕೆಲಸ ಮಾಡಲು ವಾತಾವರಣ ಪುನರ್ ನಿರ್ಮಾಣ ಮಾಡಬೇಕು.

ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ವಲಯದ ಕೇಂದ್ರ ಕಾರ್ಯಾಲಯ ಇದ್ದಾಗ್ಯೂ ಹುಬ್ಬಳ್ಳಿಯಿಂದ ಮುಂಬೈಗೆ ಒಂದೂ ರೈಲು ಇಲ್ಲದಿರುವುದು ವಿಷಾದನೀಯ. ಆದ್ದರಿಂದ ಹುಬ್ಬಳ್ಳಿಯಿಂದ ಮುಂಬೈಗೆ ಕನಿಷ್ಟ ದಿನಕ್ಕೆ ಒಂದು ರೈಲನ್ನಾರೂ ಆರಂಭಿಸಬೇಕು.

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣವಾಗಬೇಕು.

ಗದಗ-ಬಿಜಾಪುರ ಬ್ರಾಡ್‌ಗೇಜ್ ರೈಲು ಮಾರ್ಗ ಪರಿವರ್ತನೆ ಕಾರ್ಯ ಬೇಗ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಬೇಕು.

ಹುಬ್ಬಳ್ಳಿ-ಬೆಂಗಳೂರು ಪ್ಯಾಸೆಂಜರ್ ರೈಲ್‌ಗೆ ಇನ್ನೂ ಹೆಚ್ಚಿನ ಸಾಮಾನ್ಯ ಭೋಗಿಗಳನ್ನು ಜೋಡಿಸಬೇಕು.


ಕುಸಿದ ಮನೆ - ಬದುಕು

ಹುಬ್ಬಳ್ಳಿ ಬೆಂಗಳೂರು ಮಧ್ಯೆ ಡಬಲ್ ಲೈನ್ ನಿರ್ಮಾಣ ಮಾಡಬೇಕು.

ಉದ್ಘಾಟನೆ: ಸಮ್ಮೇಳನದ ಮೊದಲು ಹಿರಿಯ ಸಂಗಾತಿ ಬಿ.ಎಸ್. ಸೊಪ್ಪಿನ ಧ್ವಜಾರೋಹಣ ಗೈದರು. ಉದ್ಘಾಟನೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಗೈದರು. ಇನ್ನೊರ್ವ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಶಂಕರ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಕಾರ್ಯದರ್ಶಿ ಆರ್.ಎಚ್.ಆಯಿ ಅಧ್ಯಕ್ಷತೆ ವಹಿಸಿದ್ದರು.

ನೂತನ ಸಮಿತಿ: ಸಮ್ಮೇಳನ ಮುಂದಿನ 3 ವರ್ಷಗಳ ಅವಧಿಗೆ ಹೊಸ ಜಿಲ್ಲಾ ಸಂಘಟನಾ ಸಮಿತಿಯನ್ನು ಒಮ್ಮತದಿಂದ ಆಯ್ಕೆ ಮಾಡಿತು. ಬಿ.ಎಸ್.ಸೊಪ್ಪಿನ(ಹುಬ್ಬಳ್ಳಿ) ಕಾರ್ಯದರ್ಶಿ ಆರ್.ಹೆಚ್. ಆಯಿ (ಧಾರವಾಡ), ಬಿ.ಐ. ಈಳಿಗೇರ(ಧಾರವಾಡ), ರವೀಂದ್ರ ಹೊನವಾಡ (ಗದಗ) ಎಂ.ಎಸ್.ಹಡಪದ(ಗದಗ),ಬಸವರಾಜ ಮಂತೂರ(ಗದಗ) ಸದಸ್ಯರಾಗಿದ್ದಾರೆ. 2 ಸ್ಥಾನಗಳನ್ನೂ ಖಾಲಿ ಇಡಲಾಗಿದೆ.

ವರದಿ: ರವೀಂದ್ರ ಹೊನವಾಡ

ಶರತ್‌ಚಂದ್ರ

ಪಾಕಿಸ್ತಾನದ ಚುನಾವಣೆಗಳು ಮುಂದಕ್ಕೆ - ಮುಂದೇನು?

ಬೆನಜಿರ್ ಹತ್ಯೆಯ ನಂತರದ ಬದಲಾದ ಪರಿಸ್ಥಿತಿಯಲ್ಲಿ ನಿರೀಕ್ಷಿಸಿದಂತೆ ಅಧ್ಯಕ್ಷ ಮುಶರಫ್ ಜನವರಿಯಲ್ಲಿ ನಡೆಯಬೇಕಾಗಿದ್ದ ಪಾರ್ಲಿಮೆಂಟು ಚುನಾವಣೆಗಳನ್ನು ಫೆಬ್ರುವರಿಗೆ ಮುಂದಕ್ಕೆ ಹಾಕಿದ್ದಾರೆ. ಹತ್ಯೆಯ ಪಿತೂರಿ ಹಿಂದೆ ಇದ್ದವರ ಉದ್ದೇಶವೂ ಇದೇ ಆಗಿರಬಹುದು. ಪ್ರಮುಖ ರಾಜಕೀಯ ಪಕ್ಷಗಳಾದ ಪಾಕಿಸ್ತಾನ ಪೀಪಲ್ಸ್



ಬೆನಜಿರ್ ಅಂತಿಮ ಪಯಣ

ಪಾರ್ಟಿ (ಪಿ.ಪಿ.ಪಿ.) ಮತ್ತು ಪಾಕಿಸ್ತಾನ ಮುಸ್ಲಿಂ ಲೀಗ್ (ನವಾಜ್) ಎರಡೂ ಚುನಾವಣೆಯಲ್ಲಿ ಭಾಗವಹಿಸುವುದಾಗಿ ಹೇಳಿವೆ. ಮುಸ್ಲಿಂ ಲೀಗ್ ಮುಶರಫ್ ಬೆನಜಿರ್ ಹತ್ಯೆಗೆ ಜವಾಬ್ದಾರಿ ತೆಗೆದುಕೊಂಡು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸುತ್ತಿದೆ. ಪಿ.ಪಿ.ಪಿ. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಅಂತರ್‍ರಾಷ್ಟ್ರೀಯ ಕಮಿಶನ್ ಬೆನಜಿರ್ ಹತ್ಯೆಯ ಹಿಂದಿನ ರಾಜಕೀಯ ಪಿತೂರಿ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ.

ಹತ್ಯೆ ಹಿಂದೆ ಯಾರು?

ಈ ನಡುವೆ ಬೆನಜಿರ್ ಹತ್ಯೆಯ ಹಿಂದಿರುವವರು ಯಾರು ಎಂಬ ಪ್ರಶ್ನೆ ಇನ್ನಷ್ಟು ಜಟಿಲವಾಗುತ್ತ ನಡೆದಿದೆ. ಮುಶರಫ್ ಸರ್ಕಾರ ಗುಂಡಿನಿಂದ ಬೆನಜಿರ್ ಸತ್ತಿದ್ದು ಅಲ್ಲ ಎಂದು ಹೇಳಿಕೆ ನೀಡಿ, ಆ ಮೇಲೆ ಅದು ನಿಜವಲ್ಲ ಎಂದು ಹೇಳಿ, ಮತ್ತೆ ಮೂಲ ಹೇಳಿಕೆ ಸರಿ ಎಂದಿದೆ. ಆ ಮೂಲಕ ತನ್ನ ಇದ್ದ-ಬದ್ದ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ತನ್ನ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಪ್ರಯತ್ನದ ಭಾಗವಾಗಿ, ಸ್ಕಾಟ್ ಲೆಂಡ್ ಯಾರ್ಡ(ಪ್ರಸಿದ್ಧ ಬ್ರಿಟಿಷ್ ಪತ್ತೇದಾರಿ ತಂಡ) ಸ್ವತಂತ್ರ ತನಿಖೆಯನ್ನು ಮಾಡುವುದಾಗಿ ಘೋಷಿಸಿದ್ದಾರೆ. ಆದರೆ ಆಳುವ ಮುಸ್ಲಿಂ ಲೀಗ್ ಬಣದ ನಾಲ್ಕು ನಾಯಕರು ಹತ್ಯೆ ಪಿತೂರಿ ಹಿಂದೆ ಇದ್ದಾರೆ ಎಂಬ ಪಿ.ಪಿ.ಪಿ. ಆಪಾದನೆಯ ತನಿಖೆ ಅದರಲ್ಲಿ ಸೇರಿರುವುದಿಲ್ಲ ಎಂದಿದೆ ಸರ್ಕಾರ. ತನಿಖೆಗೆ ಅಗತ್ಯವಾಗಿರುವ ಎಲ್ಲಾ ಸುಳಿವುಗಳು ಅಳಿಸಿ ಹೋಗಿವೆ. ಹತ್ಯೆ ನಡೆದ ಸ್ಥಳವನ್ನು ತಕ್ಷಣ ತೊಳೆಯಲಾಯಿತು. ಬೆನಜಿರ್ ಪತಿಯ ಕೋರಿಕೆ ಮೇರೆಗೆ ಪೋಸ್ಟ್-ಮಾರ್ಟಂ ಸಹ ಮಾಡಲಾಗಿಲ್ಲ. ತನಿಖೆಗೆ ಉಳಿದಿರುವ ಒಂದೇ ಮಾರ್ಗ ಎಂದರೆ ಬೆನಜಿರ್ ಶವವನ್ನು ಪರೀಕ್ಷಿಸುವುದು ಎಂದಿದೆ. ಅದಕ್ಕೂ ಬೆನಜಿರ್ ಪತಿ ಅನುಮತಿ ನೀಡುವ ಸಂಭವ ಕಡಿಮೆ. ಹತ್ಯೆಯ ಕೆಲವು ದಿನಗಳ ಮೊದಲು, ಬೆನಜಿರ್ ಮುಶರಫ್ ಗೆದ್ದ ಅಧ್ಯಕ್ಷೀಯ ಚುನಾವಣೆಯಲ್ಲಿ ಅಕ್ರಮ ನಡೆಸಿದ ಐ.ಎಸ್.ಐ. (ಪಾಕಿಸ್ತಾನದ ಕುಖ್ಯಾತ ಬೇಹುಗಾರಿಕೆ ಪಡೆ) ಅಧಿಕಾರಿಗಳ ಹೆಸರನ್ನು ಅಮೆರಿಕದ ಹಲವರಿಗೆ ಕಳಿಸಿದ್ದರು ಎನ್ನಲಾಗಿದೆ. ತಮ್ಮ ಭದ್ರತೆಗೆ ಅಂತರ್‍ರಾಷ್ಟ್ರೀಯ ನೆರವು ಪಡೆಯುವ ಬೆನಜಿರ್ ಪ್ರಸ್ತಾವವನ್ನೂ ಮುಶರಫ್ ಸರ್ಕಾರ ತಳ್ಳಿ ಹಾಕಲಾಗಿತ್ತು.

ಪಿ.ಪಿ.ಪಿ ಬೆನಜಿರ್ ಮಗ ಬಿಲಾವಲ್ ನನ್ನು ಪಕ್ಷದ ನಾಯಕನೆಂದು ಘೋಷಿಸಿದೆ. ಬೆನಜಿರ್ ಪತಿ ಝರ್ದಾರಿ ಸಹ-ಅಧ್ಯಕ್ಷರಾಗಿರುತ್ತಾರೆ. ಪಿ.ಪಿ.ಪಿ ನಾಯಕ ಸ್ಥಾನಕ್ಕೆ ಬೆನಜಿರ್ ಸಹೋದರನ ಮಗಳಿಂದ ಸವಾಲು ಸಹ ಬಂದಿದೆ. ಬೆನಜಿರ್ ಪಾಕಿಸ್ತಾನಕ್ಕೆ ವಾಪಸಾದಾಗಲೇ ಆಕೆಯ ಸವಾಲು ಬಂದಿತ್ತು. ಬೆನಜಿರ್ ಹತ್ಯೆ ನೆಪ ಮಾಡಿಕೊಂಡು ಚುನಾವಣೆಯನ್ನು ಅನಿರ್ದಿಷ್ಟವಾಗಿ ಮುಂದೂಡುವ ಅವಕಾಶ ಮುಶರಫ್ ಗೆ ಕೊಡಲು ಪಾಕಿಸ್ತಾನದ ರಾಜಕೀಯ ಪಕ್ಷಗಳು ತಯಾರಿಲ್ಲ. ಆದ್ದರಿಂದ ಚುನಾವಣೆಗೆ ಭರದ ಸಿದ್ಧತೆ ನಡೆಸಿವೆ. ಪ್ರಜಾಪ್ರಭುತ್ವವನ್ನು ಮತ್ತೆ ಸ್ಥಾಪಿಸುವ ಛಲ ತೊಟ್ಟಿವೆ. ಆದರೆ ಮುಶರಫ್ ರ ನಾಯಕತ್ವದ ಮಿಲಿಟರಿ-ಅಧಿಕಾರಶಾಹಿ ಸರ್ವಾಧಿಕಾರಿ ಕೂಟದ ವಿರುದ್ಧ ಎಲ್ಲಾ ರಾಜಕೀಯ ಪಕ್ಷಗಳ ಜಂಟಿ ಹೋರಾಟ ನಡೆಸುವ ಮತ್ತು ಅದಕ್ಕೆ ಜನತೆಯನ್ನು ವ್ಯಾಪಕವಾಗಿ ಅಣಿ ನೆರೆಸುವ ಪ್ರಯತ್ನದ ಅಭಾವ ಕಂಡು ಬಂದಿದೆ. ಮುಶರಫ್ ಗೆ ತಗ್ಗಿ ಬಗ್ಗಿ ನಡೆಯಲು ನಿರಾಕರಿಸಿದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ವಜಾ ವಿರುದ್ಧ ನಡೆದ ವ್ಯಾಪಕ ಜನತೆಯ ಹೋರಾಟದಲ್ಲೂ ರಾಜಕೀಯ ಪಕ್ಷಗಳು ದೊಡ್ಡ ರೀತಿಯಲ್ಲಿ ಭಾಗವಹಿಸಲಿಲ್ಲ. ಈ ಹೋರಾಟದಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸಿ ಜಯಗಳಿಸಿದ ವಕೀಲರು ಮತ್ತು ವಿದ್ಯಾರ್ಥಿಗಳ ಹೋರಾಟದ ಫಲವನ್ನು ಪುನಃ ತುರ್ತು ಪರಿಸ್ಥಿತಿಯ ಹೆಸರಲ್ಲಿ ವಿಫಲಗೊಳಿಸಲಾಯಿತು. ಪುನಃ ನ್ಯಾಯಾಧೀಶರುಗಳನ್ನು ವಜಾ ಮಾಡಲಾಯಿತು. ತುರ್ತು ಪರಿಸ್ಥಿತಿ ಮತ್ತು ನ್ಯಾಯಾಧೀಶರುಗಳ ವಜಾದ ವಿರುದ್ಧ ವ್ಯಾಪಕ ಹೋರಾಟದ ಅವಕಾಶವನ್ನು ರಾಜಕೀಯ ಪಕ್ಷಗಳು ಬಳಸಿಕೊಳ್ಳಲಿಲ್ಲ. ರಾಜಕೀಯ ಪಕ್ಷಗಳನ್ನು ಒಡೆದು ಆಳುವ ಮುಶರಫ್ ತಂತ್ರದ ವಿರುದ್ಧ ತಂತ್ರಗಾರಿಕೆ ರೂಪಿಸದೆ ಚುನಾವಣೆಗಳ ನಂತರ ನಿಜವಾದ ಅಧಿಕಾರ ಚುನಾಯಿತ ಸರ್ಕಾರಕ್ಕೆ ಸಿಗುತ್ತದೆ ಎಂಬ ಗ್ಯಾರಂಟಿ ಇಲ್ಲ.

ಎರಡು ಹೋರಾಟ

ಪಾಕಿಸ್ತಾನದಲ್ಲಿ ಎರಡು ಹೋರಾಟಗಳು ನಡೆಯುತ್ತಿವೆ. ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವ ಒಂದು. ಮೂಲಭೂತವಾದ ಮತ್ತು ಉದಾರವಾದದ ನಡುವೆ ಇನ್ನೊಂದು. ಮೊದಲ ಹೋರಾಟದಲ್ಲಿ ಅಮೆರಿಕನ್ ಸರ್ಕಾರದ ಜತೆ, ಎರಡನೆ ಹೋರಾಟದಲ್ಲಿ ಮಿಲಿಟರಿ ಸರ್ವಾಧಿಕಾರದ ಜತೆಕೈ ಮಿಲಾಯಿಸುವುದು ಆಕೆಯ ತಂತ್ರವಾಗಿತ್ತು. ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರ, ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಇಸ್ಲಾಮಿಕ್ ಮೂಲಭೂತವಾದಿಗಳು - ಎಲ್ಲಾ ದೇಶದ ಜನತೆಯ ಪ್ರಜಾಪ್ರಭುತ್ವದ ಶತ್ರುಗಳು. ಒಂದಕ್ಕೊಂದು ಪೂರಕವಾದವು. ಈ ಮೂರೂ ಶಕ್ತಿಗಳ ವಿರುದ್ಧ ಜನತೆಯನ್ನು ಅಣಿನೆರೆಸದೆ ಪ್ರಜಾಪ್ರಭುತ್ವದ ಹೋರಾಟಕ್ಕೆ ಯಾವುದೇ ಇತರ ಶಾರ್ಟ-ಕಟ್ ಇಲ್ಲ ಎಂದು ಇತ್ತೀಚಿನ ಪಾಕಿಸ್ತಾನದ ಬೆಳವಣಿಗೆಗಳ ಪಾಠ. ಅದೇ ರೀತಿ ಮುಶರಫ್ ಮತ್ತು ಬೆನಜಿರ್ ಬಲವಂತದ ಮೈತ್ರಿ ಮಾಡಿಸಿ ಪಾಕಿಸ್ತಾನದ ರಾಜಕೀಯದ 'ರಿಮೋಟ್-ಕಂಟ್ರೋಲ್' ಮಾಡಬಹುದು. ತಮ್ಮ ಬೇಳೆ ಬೇಯಿಸಿಕೊಳ್ಳಬಹುದು ಎಂಬ ಅಮೆರಿಕನ್ ಸಾಮ್ರಾಜ್ಯಶಾಹಿಯ ತಂತ್ರದ ಹಿಂಸಾತ್ಮಕ ಕೊನೆ ಸಹ



ಭಾರತದಲ್ಲೂ ಆಳುವ ಪಕ್ಷಗಳಿಗೆ ಪಾಠವಾಗಬೇಕು. ಭಾರತದ ರಾಜಕೀಯ ಪ್ರಕ್ರಿಯೆಯಲ್ಲಿ ತಮ್ಮ ತಕ್ಷಣದ ಸ್ವಾರ್ಥಕ್ಕೆ ಅಮೆರಿಕದ ಮೂಗು ತೂರಿಸುವಿಕೆ ಸಹಿಸುವವರಿಗೆ, ಕುಮ್ಮಕ್ಕು ಕೊಡುವವರಿಗೆ ಇದು ಎಚ್ಚರಿಕೆ ಗಂಟೆ.

ಕ್ಷಾಮ ಕೊನೆಗೊಳಿಸಬೇಕೆ ? ವಿಶ್ವಬ್ಯಾಂಕ್ ಪರಿಣತರ ಸಲಹೆ ತಿರಸ್ಕರಿಸಿ !

ಹೀಗೆನ್ನುತ್ತಾರೆ ಆಫ್ರಿಕಾದ ಮಾಲವಿ ದೇಶದ ಅಧ್ಯಕ್ಷ ಬಿಂಗು ವಾ ಮುತಾರಿಕಾ. ಮಾಲವಿ ಸಹಾರಾ ಮರುಭೂಮಿಯ ಅಂಚಿನ ದೇಶಗಳಲ್ಲಿ ಒಂದು. ಸದಾ ಕ್ಷಾಮದ ನೆರಳಿನಲ್ಲಿ ಬದುಕಿರುವುದು. ತೀವ್ರ ಆಹಾರದ ಕೊರತೆ, ವ್ಯಾಪಕ ಹಸಿವಿನ ಸಾವು, ಪೌಷ್ಟಿಕಾಂಶಗಳ ಕೊರತೆ ಈ ದೇಶಗಳ ಜನರ 'ಹಣೆಬರಹ'. ಈ ದೇಶಗಳ ಬೆಳವಣಿಗೆಯ ಹಿಂದುಳಿದಿರುವಿಕೆ, ಆಳುವವರ ಭ್ರಷ್ಟಾಚಾರ, ಪ್ರಾಕೃತಿಕ ಸನ್ನಿವೇಶದ ಫಲ. ಇದಕ್ಕೆ ಉತ್ತರ ಆಹಾರದ ಆಮದು, ವಿಶ್ವಬ್ಯಾಂಕ್ ನೇರ ನಿಯಂತ್ರಣದ ನೀತಿಗಳು, ಹಣದ ಬೆಳೆ ಬೆಳೆಯುವುದು ಮತ್ತು ಅಲ್ಲಿನ ಪ್ರಾಕೃತಿಕ ಸಂಪನ್ಮೂಲಗಳ ರಫ್ತು ಉತ್ತರ. ಕೃಷಿಗೆ ಸಬ್ಸಿಡಿ ಕೆಲಸ ಮಾಡಲ್ಲ. ಅದನ್ನು ನಿಲ್ಲಿಸಬೇಕು. ಎಂಬುದು ವಿಶ್ವ ಬ್ಯಾಂಕ್ ಸಿದ್ಧ ಫಾರ್ಮೂಲಾ. ಇದನ್ನೇ ಸಾಮ್ರಾಜ್ಯಶಾಹಿ ಮಾಧ್ಯಮಗಳು ತುತ್ತೂರಿ ಊದುತ್ತಾ ಬಂದಿರುವುದು. ನಮ್ಮ ಮಾಧ್ಯಮಗಳು ಅವರದ್ದೇ ಗಿಣಿಪಾಠ ಹೇಳುವುದು. ಸಹಾರಾ ಅಂಚಿನ ದೇಶಗಳಲ್ಲಿ ತೀವ್ರ ಕ್ಷಾಮ, ಹಸಿವಿನ ಸಮಸ್ಯೆ ಹಿಂದಿನಿಂದಲೂ ಇದ್ದರೂ, ಇತ್ತೀಚಿನ ವರ್ಷಗಳಲ್ಲಿ ವಿಶ್ವಬ್ಯಾಂಕಿನ 'ನೆರವು' ತೆಗೆದುಕೊಂಡ ನಂತರ ಉಲ್ಬಣಗೊಂಡಿದೆ. ಇದಕ್ಕೆ ನೆರವಿಗೆ ಶರತ್ತಾಗಿ ವಿಶ್ವಬ್ಯಾಂಕು ಹೊರಿಸಿದ ನೀತಿಗಳೇ ಕಾರಣ ಎಂದು ಮಾಧ್ಯಮಗಳು ಕಾಪಾಡಿಕೊಂಡು ಬಂದ ಗುಟ್ಟು.

ಮಾಲವಿಯ 1.3 ಕೋಟಿ ಜನತೆಯ ಶೇ. 40 ಜನ 2005 ರಲ್ಲಿ ಆಹಾರದ ಕೊರತೆಯಿಂದ ಬಳಲುತ್ತಿದ್ದರು. ಒಂದೆರಡು ದಶಕಗಳಿಂದ ವಿಶ್ವಬ್ಯಾಂಕ್ ನೀತಿಗಳನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದ್ದರೂ. ಆದರೆ 2005 ರಲ್ಲಿ ಜೋಳದ ಉತ್ಪಾದನೆ 120 ಕೋಟಿ ಟನ್ ಗಳಿಂದ, 2006 ರಲ್ಲಿ 270 ಕೋಟಿ ಟನ್ ಗಳಿಗೆ, 2007 ರಲ್ಲಿ 340 ಕೋಟಿ ಟನ್ ಗಳಿಗೆ ಜಿಗಿಯಿತು. ರಾಸಾಯನಿಕ ಗೊಬ್ಬರ ಮತ್ತು ಉತ್ತಮ ಬೀಜಗಳ ಪೂರೈಕೆಯನ್ನು ಸುಲಭ (ಸಬ್ಸಿಡಿ ಕೊಟ್ಟು) ಬೆಲೆಗಳಲ್ಲಿ ಸರ್ಕಾರ ಮುತುವರ್ಜಿಯಿಂದ ನೋಡಿಕೊಂಡದ್ದೇ ಇದಕ್ಕೆ ಕಾರಣ ಎನ್ನುತ್ತಾರೆ ಹೊಸದಾಗಿ ಚುನಾಯಿತ ಅಧ್ಯಕ್ಷ ಬಿಂಗು. ಆಹಾರಕ್ಕಾಗಿ ನಾನು ವಿಶ್ವದ ರಾಜಧಾನಿಗಳಿಗೆ ಭಿಕ್ಷಾಟನೆಗೆ ಹೋಗಲು ತಯಾರಿಲ್ಲ. ಉತ್ತಮ ಆಹಾರ ಉತ್ಪಾದನೆ ಮಾಡುವ ದೇಶಗಳು ಏನನ್ನು ಮಾಡುತ್ತಿವೆ. ವಿಶ್ವಬ್ಯಾಂಕು ಪರಿಣತರೇ ತಮ್ಮ ದೇಶಗಳಲ್ಲಿ ಯಾವ ನೀತಿಗಳನ್ನು ಅನುಸರಿಸುತ್ತಾರೆ ಎಂದು ನೋಡಿದೆ. ಅವರು ಹೇಳಿದ್ದು ಮಾಡುವುದಕ್ಕಿಂತ, ಅವರು ಏನೂ ಮಾಡುತ್ತಿದ್ದಾರೆ, ಅದರಿಂದ ಕಲಿಯುವುದು ಚೆನ್ನ ಎಂದುಕೊಂಡೆ. ಪರಿಣತರ ಸಲಹೆಗೆ ವಿರುದ್ಧವಾಗಿ ಕೃಷಿಯಲ್ಲಿ ಸಬ್ಸಿಡಿ ಮುಂತಾದ ಅಗತ್ಯ ಸರ್ಕಾರಿ ಮಧ್ಯಪ್ರವೇಶ ಮಾಡಲು ನಿರ್ಧರಿಸಿದೆ ಎನ್ನುತ್ತಾರೆ ಬಿಂಗು.

ಮಾಲವಿಯ ಈ ಪ್ರಯೋಗ ಅಂತರ್‍ರಾಷ್ಟ್ರೀಯ ಪರಿಣತರ ಕಣ್ಣು ತೆರೆಸುತ್ತಿದೆ. ಮಾಲವಿ ಸರ್ಕಾರ ಸಬ್ಸಿಡಿಗೆ ಸುಮಾರು 7.4 ಕೋಟಿ ಡಾಲರು ಖರ್ಚು ಮಾಡಿತು. ಸುಮಾರು 14 ಕೋಟಿ ಡಾಲರು ಮೌಲ್ಯದ ಜೋಳ ಉತ್ಪಾದನೆ ಆಯಿತು. ಇದು ಉತ್ತಮ ಆರ್ಥಿಕ ನೀತಿ. ಎನ್ನುತ್ತಾರೆ ಮಾಲವಿ ಪ್ರಯೋಗದ ಅಧ್ಯಯನ ಮಾಡಿದ ಬ್ರಿಟಿಷ್ ಪರಿಣತರೊಬ್ಬರು. ಆಹಾರ ದಾನ ಮಾಡುವುದಕ್ಕಿಂತ ಶ್ರೀಮಂತ ದೇಶಗಳು ಸಬ್ಸಿಡಿಗೆ ನೆರವು ಕೊಡುವುದು ಒಳ್ಳೆಯದು ಎನ್ನುತ್ತದೆ ಇನ್ನೊಂದು ಅಧ್ಯಯನ. ಅಮೆರಿಕ 2002 ರಿಂದ 14.7 ಕೋಟಿ ಡಾಲರು ಮೊತ್ತದ ಆಹಾರ ದಾನ ಮಾಡಿದೆ. ಆದರೆ ಕೃಷಿ ಅಗತ್ಯ ಗೊಬ್ಬರ ಇತ್ಯಾದಿಗೆ ಕೇವಲ 5.4 ಕೋಟಿ ಡಾಲರು ಖರ್ಚು ಮಾಡಿದೆ. ಅದನ್ನೂ ಖಾಸಗಿ ಕಂಪನಿಗಳ ಮೂಲಕ ಸಬ್ಸಿಡಿ ಇಲ್ಲದೆ ವಿತರಿಸಬೇಕು ಎಂದು ಶರತ್ತು ಹಾಕಿತ್ತು. ಇದರಿಂದ ಗೊಬ್ಬರ ಬೆಲೆ ಏರಿ ಮಾಲವಿಯ ರೈತರಿಗೆ ನಿಲುಕಲಿಲ್ಲ. ಮಾಲವಿ ಈ ವರ್ಷ ತನಗೆ ಬೇಕಾದಷ್ಟು ಆಹಾರ ಬೆಳೆದು ಹಸಿವು ನಿವಾರಿಸಿತು ಮಾತ್ರವಲ್ಲ, ಕ್ಷಾಮದಿಂದ ಬಳಲುತ್ತಿದ್ದ ಆಫ್ರಿಕಾದ ಇತರ ದೇಶಗಳಿಗೆ ಆಹಾರ ರಫ್ತು ಮಾಡಿತು. ಇದು ವಿಶ್ವಬ್ಯಾಂಕಿನ ಪರಿಣತರಿಗೆ ಗೊತ್ತಿರಲಿಲ್ಲವೆಂದಲ್ಲ. ಅವರಿಗೆ ಬೇಕಾಗಿರಲಿಲ್ಲ. ವಿಶ್ವಬ್ಯಾಂಕಿನ ಒಂದು ಅಧ್ಯಯನ ಸಬ್ಸಿಡಿ ಮರಳಿ ಕೊಡುವುದು, ಸರ್ಕಾರದ ಮಧ್ಯ ಪ್ರವೇಶ ಪುನಃ ಸ್ಥಾಪಿಸುವುದು - ಸಹಾರಾ-ಅಂಚಿನ ದೇಶಗಳ ಕ್ಷಾಮಕ್ಕೆ ಒಂದೇ ಪರಿಹಾರ ಎಂದು ಹೇಳಿತ್ತು.



ಊಟಕ್ಕಿಲ್ಲದ ಉಪ್ಪಿನಕಾಯಿ

■ ಜಿ.ಎಸ್.ಮಣಿ

ಇತ್ತೀಚಿಗೆ ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ ಕರಡನ್ನು ಅನುಮೋದಿಸಲು ಸೇರಿದ್ದ ಯೋಜನಾ ಆಯೋಗದ ಪೂರ್ಣ ಪ್ರಮಾಣದ ಸಭೆಯಲ್ಲಿ ಪ್ರಧಾನ ಮಂತ್ರಿ ಮನಮೋಹನಸಿಂಗ್‌ರು ಆಹಾರ, ಪೆಟ್ರೋಲಿಯಂ ಮತ್ತು ರಸಗೊಬ್ಬರಗಳ ಸಹಾಯಧನದತ್ತ ಕೆಕ್ಕರಿಸುತ್ತಾ ಹೇಳಿದ್ದು "ಈ ವರ್ಷ ಸಹಾಯಧನಗಳಿಗೆ ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚಿಗೆ ವ್ಯಯವಾಗುತ್ತದೆ. ಇದರರ್ಥ ನಾವು ಅಭಿವೃದ್ಧಿಯ ಅವಕಾಶಗಳನ್ನೇ ಹೊರಕ್ಕೆ ದಬ್ಬುತ್ತಿದ್ದೇವೆ. ಎಂದರೆ ಕಡಿಮೆ ಶಾಲೆಗಳು ಕಡಿಮೆ ಆಸ್ಪತ್ರೆಗಳು, ಕಡಿಮೆ ವಿದ್ಯಾರ್ಥಿ ವೇತನ, ಕೃಷಿಯಲ್ಲಿ ಮತ್ತು ಮೂಲ ರಚನಾ ಸೌಕರ್ಯಗಳಲ್ಲಿ ಕಡಿಮೆ ಹೂಡಿಕೆ" ಎಂದರು. ಆಹಾರದ ಮೇಲಿನ ಸಹಾಯಧನ ಕಡಿತ ಮಾಡಲು ಹೊರಟರೆ ಖಂಡಿತ ಪ್ರತಿರೋಧ ಇದ್ದೇ ಇರುತ್ತದೆ. ಹಾಗೆಯೇ ಇನ್ನುಳಿದ ಸಹಾಯಧನಗಳು ಅವಶ್ಯಕತೆಗಳಿಗೆ ತಕ್ಕಂತೆ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾದ ಅವಶ್ಯಕತೆಯೂ ಬಹಳವಾಗಿದೆ. ಯಾಕೆಂದರೆ ಈ ಅಭಿವೃದ್ಧಿ ಕಾರ್ಯಗಳನ್ನು ಹೊರದಬ್ಬಿದರೆ ದೇಶದ ಬಡ ಜನತೆಯು ಹೆಚ್ಚು ಕಷ್ಟ ಅನುಭವಿಸಬೇಕಾಗುತ್ತದೆ. ಬೆಲೆ ಏರಿಕೆ ನಿರುದ್ಯೋಗ, ಅನಕ್ಷರತೆ ಇತ್ಯಾದಿ ಸಮಸ್ಯೆಗಳೆಲ್ಲ ಈ ಸಹಾಯಧನಗಳ ಕಡಿತದಿಂದ ಉಂಟಾಗುತ್ತದೆ.

ಬಿಸಿ ತುಪ್ಪ: ಇದೇ ಸಂದರ್ಭದಲ್ಲಿ ಮತ್ತೊಂದು ಮುಖ್ಯ ಬೆಳವಣಿಗೆಯೆಂದರೆ ಅಪಾರ ಪ್ರಮಾಣದ ವಿದೇಶೀ ಹಣಕಾಸು ಬಂಡವಾಳ ದೇಶದೊಳಕ್ಕೆ ಹರಿದು ಬರುತ್ತಿರುವುದು ಇಲ್ಲಿನ ವೈರುಧ್ಯವನ್ನು ನೋಡಿ ಹಲವು ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲವೆಂದು ಪ್ರಧಾನ ಮಂತ್ರಿಗಳೇ ಹೇಳುತ್ತಿದ್ದಾರೆ. ಅದೇ ಸಮಯದಲ್ಲಿ ವಿದೇಶೀ ಹಣಕಾಸು ಬಂಡವಾಳ ಅಪಾರ ಪ್ರಮಾಣದಲ್ಲಿ ದೇಶದೊಳಕ್ಕೆ ಹರಿದು ಬರುತ್ತಿದೆ. ಹೀಗೆ ಹಣಕಾಸು ಬಂಡವಾಳ ಹರಿದು ಬರಲೆಂದೇ ನಾವೂ ನಮ್ಮ ಆರ್ಥಿಕ ನೀತಿಗಳ ಉದಾರೀಕರಣವನ್ನು ತಂದಿದ್ದು, ಈ ಹಣಕಾಸು ಬಂಡವಾಳದ ಅರ್ಥಪೂರ್ಣ ಬಳಕೆ ಮಾತ್ರ ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಇದು 'ಹಾಟ್ ಮನಿ' (ಬಿಸಿ ತುಪ್ಪದಂತೆ ಬಿಸಿ ಹಣ) ಇದನ್ನು ಬಳಸಿಕೊಳ್ಳುವಂತಿಲ್ಲ, ನಿರಾಕರಿಸುವಂತಿಲ್ಲ.

ಕಳೆದೆರಡು ವರ್ಷಗಳಲ್ಲಿ ದೇಶದ ಚಾಲ್ತಿ ಖಾತೆಯ ಕೊರತೆ ಒಂದೇ ಪ್ರಮಾಣದಲ್ಲಿದ್ದರೂ . ನಿವ್ವಳ ಬಂಡವಾಳ ಹರಿವು 23.4 ಶತಕೋಟಿ ಡಾಲರುಗಳಿಂದ 44.9 ಶತಕೋಟಿ ಡಾಲರುಗಳಿಗೆ ಏರಿದೆ ಎಂದರೆ ದೇಶದೊಳಗೆ ಹಣಕಾಸು ಬಂಡವಾಳದ ಹರಿವಿನ ಸೆಳವು ಎಷ್ಟು ಎಂಬುದು ಗೊತ್ತಾಗುತ್ತದೆ.

ಇದಲ್ಲದೆ ಉದಾರೀಕರಣದ ನೀತಿಗಳಿಂದಾಗಿ ಭಾರತದ ಕಂಪನಿಗಳು ವಿದೇಶಿ ವಾಣಿಜ್ಯ ಸಾಲಗಳನ್ನು ಪಡೆಯುತ್ತಿದ್ದಾರೆ. ಈ ಸಾಲಿನ ಅಂದರೆ 2007 ರ ಜನವರಿಯಿಂದ ಮೇ ತಿಂಗಳವರೆಗೆ ಹೀಗೆ ಭಾರತದ ಕಂಪನಿಗಳು ಪಡೆದ ಸಾಲದ ಮೊತ್ತ 15.3 ಶತಕೋಟಿ ಡಾಲರುಗಳು.

ಇಷ್ಟು ದೊಡ್ಡ ಪ್ರಮಾಣದಲ್ಲಿ ವಿದೇಶಿ ಹಣಕಾಸು ಬಂಡವಾಳ ಹರಿದು ಬರುತ್ತಿದ್ದರೂ ಪ್ರಧಾನಮಂತ್ರಿಗಳು ಅಭಿವೃದ್ಧಿಗೆ ಹಣವಿಲ್ಲವೆಂದು ಯಾಕೆ ಹೇಳುತ್ತಿದ್ದಾರೆ ಎಂಬುದು ಪ್ರಶ್ನೆ.

ವಿದೇಶಿ ಬಂಡವಾಳಕ್ಕೆ ಲಗಾಮಿಲ್ಲ:

ದೇಶದ ಷೇರು ಮಾರುಕಟ್ಟೆಗೆ ಮುಖ್ಯವಾಗಿ ಹರಿದು ಬರುವ ಈ ಹಣಕಾಸು ಬಂಡವಾಳಕ್ಕೆ ನಿಜವಾದ ಲಗಾಮಿಲ್ಲ. ನಾವು ನಮ್ಮ ಆರ್ಥಿಕ ನೀತಿಗಳನ್ನು ಉದಾರೀಕರಿಸಿದ್ದೇವೆ. ಈ ಉದಾರೀಕರಣದಿಂದಾಗಿ ವಿದೇಶೀ ಹಣಕಾಸು ಬಂಡವಾಳ ಹರಿದು ಬರುತ್ತಿರುವುದು ನಿಜ. ಆದರೆ ಯಾರ ಲಾಭಕ್ಕಾಗಿ ವಿದೇಶೀ ಬಂಡವಾಳಿಗರ ಲಾಭಕ್ಕಾಗಿ ಮಾತ್ರ. ನಮ್ಮ-ಅವರ ಎರಡೂ ಕಡೆಯ ಲಾಭಕ್ಕಾಗಿ ಅಲ್ಲ. ಇನ್ನೂ ಮುಂದುವರಿದು ಹೇಳಬಹುದಾದರೆ ನಮ್ಮ ಹಾನಿಗಾಗಿ ಅವರ ಲಾಭಕ್ಕಾಗಿ.

ವಿದೇಶೀ ಹಣಕಾಸು ಬಂಡವಾಳದ ಹರಿವನ್ನು ಉದಾರೀಕರಿಸಿದ ಭಾರತೀಯ ರಿಸರ್ವ್ ಬ್ಯಾಂಕಿಗೆ ಈ ಹಣವನ್ನು ಹತೋಟಿಯಲ್ಲಿಟ್ಟು ದೇಶದ ಅಭಿವೃದ್ದಿಗೆ ಬಳಸುವ ತಾಕತ್ತಿಲ್ಲ.

ಭಾರತದ ರೂಪಾಯಿ ಡಾಲರಿಗೆದುರು ಗಟ್ಟಿಯಾಗುತ್ತಿರುವುದರಿಂದ ವಿದೇಶಿ ಹೂಡಿಕೆದಾರರು ಡಾಲರುಗಳಲ್ಲಿರುವ ಹೂಡಿಕೆಗಳನ್ನು ತೆಗೆದು ಭಾರತದ ಶೇರು ಮಾರುಕಟ್ಟೆ ಮತ್ತು ಭಾರತದ ಸ್ಥಿರಾಸ್ತಿಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಇದರಿಂದಲೇ ಇಷ್ಟು ದೊಡ್ಡ ಪ್ರಮಾಣದ ಬಂಡವಾಳ ಹರಿದು ಬರುತ್ತಿದೆ. ಇದೇ ಹಣವನ್ನು ಭಾರತದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸಲು (ಅಂದರೆ ಶಿಕ್ಷಣ ಕ್ಷೇತ್ರದಲ್ಲಿ ಹೂಡಿಕೆ) ಜನತೆಗೆ ವಸತಿ ಒದಗಿಸಲು ಉಪಯೋಗಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಳಸಬಹುದಾದರೆ? ನಮ್ಮ ದೇಶಕ್ಕೆ ಅದು ಬಹಳ ಒಳ್ಳೆಯದು. ಆದರೆ ವಿದೇಶಿ ಬಂಡವಾಳ ಇದಕ್ಕೆ ತಯಾರಿಲ್ಲ. ಅದಕ್ಕೆಯಾವುದೇ ತರಹದ ತಡೆ ಇರಬಾರದು. ಯೋಜನೆಗಳಲ್ಲಿ ಹೂಡಿದ ಹಣ ಕೂಡಲೇ ಬೇಕೆಂದರೆ ವಾಪಸ್ಸು ಸಿಗಲಾರದು. ಹೀಗಿರುವಾಗ ವಿದೇಶಿಯರ ಈ ಬಂಡವಾಳ ಹರಿದು ಬರಲು ತಯಾರಿಲ್ಲ. ಈ ಕಾರಣಕ್ಕೆ ವಿದೇಶೀ ಬಂಡವಾಳದ ಹರಿವು ಬತ್ತಬಾರದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ನಿರ್ಬಂಧ ಹೇರಲು ತಯಾರಿಲ್ಲ.

ತೆರಿಗೆ ಹಾಕಲೂ ಸಿದ್ಧವಿಲ್ಲ

ಇದೇ ರೀತಿ ಭಾರತ ಸರ್ಕಾರ ಬಂಡವಾಳ ಲಾಭದ ಮೇಲೆ ಹೆಚ್ಚಿನ ತೆರಿಗೆ ಹೇರಿ ಸಂಪನ್ಮೂಲ ಕ್ರೋಢೀಕರಿಸಲೂ ಸಿದ್ಧವಿಲ್ಲ.

ಇದಲ್ಲದೆ ಭಾರತ ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಸೆಕ್ಯೂರಿಟಿಗಳನ್ನಿಟ್ಟು ಮಾರುಕಟ್ಟೆ ಸ್ಥಿರೀಕರಣದ ನಿಧಿಯೊಂದನ್ನು' ಹೊಂದಿದೆ. ಇದರ ಮೇಲೆ ಅದು ಭಾರತೀಯ ರಿಸರ್ವ್ ಬ್ಯಾಂಕಿಗೆ ಬಡ್ಡಿ ನೀಡಬೇಕಾಗುತ್ತದೆ.ಈ ಪಾಲಿಗೆ (ಅಂದರೆ 2007) ಈ ನಿಧಿಯನ್ನು 1,50,000 ಕೋಟಿ ರೂಪಾಯಿಗಳಿಗೆ ನಿಗದಿ ಮಾಡಲಾಗಿದೆ. ನವೆಂಬರ್‌ನಲ್ಲಿ ಈ ನಿಧಿಯ ಪ್ರಮಾಣ 1,85,100 ಕೋಟಿ ರೂಪಾಯಿಗಳು. ಈ ನಿಧಿಯ ಮೇಲಿನ ಬಡ್ಡಿ ಋಣಭಾರ 12,400 ಕೋಟಿ ರೂಪಾಯಿಗಳು. ಗ್ರಾಮೀಣ ಉದ್ಯೋಗ ಭರವಸೆ ಯೋಜನೆ ವೆಚ್ಚದ ಬಜೆಟ್ಟು ಬರೀ 12,000 ಕೋಟಿ ರೂಪಾಯಿಗಳು ಇದೊಂದು ಉದಾಹರಣೆ ಅಷ್ಟೇ!

ದೇಶದೊಳಕ್ಕೆ ಹರಿದು ಬರುತ್ತಿರುವ ಬಹುತೇಕ ವಿದೇಶಿ ಹಣಕಾಸು ಬಂಡವಾಳದಿಂದ ಭಾರತಕ್ಕೆ ಯಾವುದೇ ಉಪಯೋಗವಿಲ್ಲ. ಈ ಬಂಡವಾಳದ ಹರಿವು ಸಟ್ಟಾ ವ್ಯವಹಾರದಂತೆ. ಹೀಗಿರುವಾಗ ಅಭಿವೃದ್ಧಿಗೆ ಹಣವಿಲ್ಲವೆನ್ನುವ ಸರ್ಕಾರ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಹಲವು ಅವಕಾಶಗಳನ್ನು ಗಾಳಿಗೆ ತೂರಿಬಿಟ್ಟಿದೆ.

ಇದು ಉದಾರೀಕರಣದ ರಾಜಕೀಯ ಅಲ್ಲ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಹುನ್ನಾರ!

ಕಮ್ಯೂನಿಸ್ಟ್ ಚೀನಾದ ಸಾಧನೆ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಒಂದು ವರ್ಷದ ನಂತರ ಚೀನಾ ದೇಶದ ವಿಮೋಚನೆಯಾಯಿತು. ಆದರೆ ಒಂದು ವ್ಯತ್ಯಾಸ, ಬ್ರಿಟಿಷರ ದಾಸ್ಯದಿಂದ ವಿಮೋಚನೆಗೊಂಡ ಭಾರತದಲ್ಲಿ ಅಧಿಕಾರವು ಬಂಡವಾಳಶಾಹಿ, ಭೂಮಾಲಿಕ ನೇತೃತ್ವದ ಕಾಂಗ್ರೆಸ್ ಕೈಗೆ ಸಿಕ್ಕಿದರೆ, ಜಪಾನ್, ಫ್ರಾನ್ಸ್, ಅಮೇರಿಕಾ, ಮೊದಲಾದ ಸಾಮ್ರಾಜ್ಯಶಾಹಿಗಳನ್ನು ಕಿತ್ತೊಗೆದು ಕಮ್ಯುನಿಸ್ಟ್ ಪಕ್ಷ ಚೀನಾದಲ್ಲಿ ಅಧಿಕಾರ ಪಡೆದುಕೊಂಡಿತು. ಅಲ್ಲಿ ಇಡೀ ಸಮಾಜದ ಬೆಳವಣಿಗೆಗೆ ಪ್ರಯತ್ನ ನಡೆದರೆ, ಇಲ್ಲಿ ಭಾರತದಲ್ಲಿ ದೊಡ್ಡ ಮನೆತನಗಳ ಆಸ್ತಿ ಬೆಳವಣಿಗೆಗೆ ಆದ್ಯತೆ ನೀಡಲಾಯಿತು.

ಅಂತೆಯೇ ಚೀನಾದಲ್ಲಿ ಸಾರ್ವಜನಿಕ ಉದ್ದಿಮೆಗಳ ಬೆಳವಣಿಗೆಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗಿತ್ತು, ಭಾರತದಲ್ಲಿ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಖಾಸಗಿ ಕುಟುಂಬಗಳು ಮುಂದೆಬರದೆ ಇದ್ದಾಗ, ಸಾರ್ವಜನಿಕ ಉದ್ದಿಮೆಗಳಿಗೆ ಪ್ರಾಶಸ್ತ್ಯ ನೀಡಿದ್ದರೂ ಈಗ ಹೊಸ ಆರ್ಥಿಕ ನೀತಿಗಳು ಜ್ಯಾರಿಗೆ ಬಂದ ನಂತರ ಸಾರ್ವಜನಿಕ ಉದ್ದಿಮೆಗಳನ್ನು ನಾಶ ಮಾಡಿ ಖಾಸಗಿ ಉದ್ದಿಮೆಗಳ ಆಸ್ತಿ ಹೆಚ್ಚಿಸುವ ಹುನ್ನಾರ ತಡೆಯಿಲ್ಲದೆ ಸಾಗುತ್ತಿದೆ.

ಚೀನಾದ ಸಾರ್ವಜನಿಕ ಉದ್ದಿಮೆಗಳು ವಿಸ್ತಾರವಾಗಿ ಬೆಳೆದಿವೆ. 8 ಸಾರ್ವಜನಿಕ ಉದ್ದಿಮೆ ಕಂಪನಿಗಳು ಶೇರು ಮಾರುಕಟ್ಟೆಯಲ್ಲಿ ಪಟ್ಟಿಮಾಡಿದ ಜಗತ್ತಿನ ಅತಿ ಹೆಚ್ಚು ಮೌಲ್ಯಗಳ 20 ಕಂಪನಿಗಳಲ್ಲಿ ಸ್ಥಾನವನ್ನು ಪಡೆದಿವೆ.

1989 ಅಥವಾ 1999ರಲ್ಲಿ ಚೀನಾದ ಯಾವುದೇ ಕಂಪೆನಿಗಳು ಈ ಸ್ಥಾನವನ್ನು ಪಡೆದಿರಲಿಲ್ಲ. ಉದಾಹರಣೆಗೆ 1989ರಲ್ಲಿ ಅತಿ ಹೆಚ್ಚು ಮೌಲ್ಯವುಳ್ಳ 20 ಕಂಪೆನಿಗಳಲ್ಲಿ 14 ಜಪಾನ್ ದೇಶಕ್ಕೆ ಸೇರಿದವುಗಳಾಗಿದಿದ್ದರೆ, 5 ಅಮೇರಿಕಾ ಹಾಗೂ 1 ನೆದರ್ ಲ್ಯಾಂಡ್ ದೇಶಕ್ಕೆ ಸೇರಿತ್ತು. 1999ರಲ್ಲಿ ಜಪಾನಿನ ಕಂಪೆನಿಗಳು ಆ ಸ್ಥಾನವನ್ನು ಕಳೆದುಕೊಂಡು ಅಮೇರಿಕಾ ಆ ಸ್ಥಾನಕ್ಕೆ ಬಂದಿತ್ತು. ಅಂದರೆ ಜಗತ್ತಿನ 20 ಅತಿ ಹೆಚ್ಚು ಮೌಲ್ಯವುಳ್ಳ ಕಂಪೆನಿಗಳಲ್ಲಿ ಅಮೇರಿಕಾದ 14 ಕಂಪೆನಿಗಳು, ಜಪಾನಿನ 3 ಕಂಪೆನಿಗಳು ಹಾಗೂ ಜರ್ಮನಿ, ಫಿನ್‌ಲ್ಯಾಂಡ್ ಮತ್ತು ಬ್ರಿಟನ್‌ನ ತಲಾ 1 ಕಂಪೆನಿಗಳು ಆ ಸ್ಥಾನವನ್ನು ಪಡೆದಿದ್ದವು. ಆದರೆ 2007ರಲ್ಲಿ ಚೀನಾದ 8 ಸಾರ್ವಜನಿಕ ಉದ್ದಿಮೆಯಲ್ಲಿರುವ ಕಂಪೆನಿಗಳು 7 ಅಮೇರಿಕಾದ ಖಾಸಗಿ ಕಂಪನಿಗಳು ಬ್ರಿಟನ್‌ನ 2, ರಶಿಯಾ, ನೆದರ್‌ಲ್ಯಾಂಡ್ ಹಾಗೂ ಫ್ರಾನ್ಸ್‌ನ ತಲಾ ಒಂದು ಕಂಪೆನಿಗಳು ಈ ಸ್ಥಾನಗಳನ್ನು ಪಡೆದಿವೆ.

2007ರ ವಿವರ ಈ ಕೆಳಗಿನಂತಿವೆ.

ಕ್ರ. ಸಂಖ್ಯೆ	ಕಂಪೆನಿಗಳು	ದೇಶ	ಕಂಪನೆಯ ಶೇರು ಮೌಲ್ಯ ಕೋಟಿ ಡಾಲರುಗಳಲ್ಲಿ
1	ಎಕ್ಸಾನ್ ಮೊಬಿಲ್	ಅಮೇರಿಕಾ	52500
2	ಪೇಟ್ರೋಚೀನಾ	ಚೀನಾ	42900
3	ಜನರಲ್ ಎಲೆಕ್ಟ್ರಿಕ್	ಅಮೇರಿಕಾ	41800
4	ಚೀನಾ ಮೊಬೈಲ್	ಚೀನಾ	37000
5	ಇಂಡ್& ಕಮರ್ಷಿಯಲ್ ಬ್ಯಾಂಕ್	ಚೀನಾ	33600
6	ಮೈಕ್ರೋಸಾಫ್ಟ್	ಅಮೇರಿಕಾ	28500
7	ರಾಯಲ್ ಡಚ್	ನೆದರ್ ಲ್ಯಾಂಡ್	27100
8	ಚೀನಾ ಪೇಟ್ರೋಲಿಯಂ	ಚೀನಾ	26900
9	ಗಾಝುಪ್ರಂ	ರಶಿಯಾ	26600
10	ಎಟಿ & ಟಿ	ಅಮೇರಿಕಾ	25500
11	ಬಿಪಿ	ಬ್ರಿಟನ್	24200
12	ಚೈನಾ ಲೈಫ್	ಚೀನಾ	24200
13	ಹೆಚ್ ಎಸ್‌ಬಿಸಿ	ಬ್ರಿಟನ್	22700
14	ಸಿಟಿಗ್ರೂಪ್	ಅಮೇರಿಕಾ	22300
15	ಬ್ಯಾಂಕ್ ಆಫ್ ಅಮೇರಿಕಾ	ಅಮೆರಿಕಾ	22300
16	ಪ್ರೋಕ್ಟಾರ್ &ಗ್ಯಾಂಬೆಲ್	ಅಮೇರಿಕಾ	22100
17	ಚೈನಾ ಕನ್‌ಸ್ಟ್ರಕ್ಷನ್	ಚೀನಾ	22000
18	ಶೆನುಹಾ ಎನರ್ಜಿ	ಚೀನಾ	21600
19	ಬ್ಯಾಂಕ್ ಆಪ್ ಚೈನಾ	ಚೀನಾ	20900
20	ಎಲೆಕ್ಟ್ರಿಸ್ಟೈಟ್ ಡಿ ಫ್ರಾನ್ಸ್	ಫ್ರಾನ್ಸ್	20300

1999ರಲ್ಲಿ 20 ಕಂಪೆನಿಗಳ ಒಟ್ಟು ಷೇರುಗಳ ಮೌಲ್ಯವು 5,21,000 ಕೋಟಿ ಡಾಲರುಗ ಳಾಗಿತ್ತು. ಅದರಲ್ಲೂ ಅಮೇರಿಕಾದ 14 ಕಂಪೆನಿಗಳ ಪಾಲು ಶೇಕಡಾ 72ರಷ್ಟು ಅಂದರೆ 375, 120 ಕೋಟಿ ಡಾಲರು. 2007ರಲ್ಲಿ 20 ಕಂಪೆನಿಗಳ ಷೇರುಗಳ ಒಟ್ಟು ಮೌಲ್ಯ 5,65,000 ಕೋಟಿ ಡಾಲರುಗಳಿಗೇರಿದ್ದರೆ, ಚೀನಾದ 8 ಸಾರ್ವಜನಿಕ ಉದ್ದಿಮೆಯಲ್ಲಿರುವ ಕಂಪೆನಿಗಳ ಒಟ್ಟು ಮೌಲ್ಯ 2,31,000 ಕೋಟಿ ಡಾಲರುಗಳು(ಶೇ41) ಅಮೇರಿಕಾದ 7 ಕಂಪೆನಿಗಳ ಒಟ್ಟು ಷೇರುಗಳ ಮೌಲ್ಯ ಶೇ 38ಕ್ಕೆ ಇಳಿದಿದ್ದು 2,15,000 ಕೋಟಿ ಡಾಲರುಗಳಿಗೆ ಇಳಿದಿದೆ.

ಸಮಾಜವಾದ ಬೆಳೆಯುತ್ತಿದೆಯೇ ಅಥವಾ ಕುಸಿಯುತ್ತಿದೆಯೇ ಎಂದು ಬಂಡವಾಳಶಾಹಿ ಏಜೆಂಟರು ಉತ್ತರಿಸಬೇಕಾಗುತ್ತದೆ.

ಮಾಧ್ಯಮಗಳಲ್ಲಿ ಸುದ್ದಿ ಇಲ್ಲ : ಕಮ್ಯುನಿಸ್ಟ್ ಚೀನಾದ ಸಾರ್ವಜನಿಕ ಉದ್ದಿಮೆ ಕಂಪನಿಗಳು ಜಗತ್ತಿನ ಅತಿದೊಡ್ಡ ಕಂಪೆನಿಗಳ ಸ್ಥಾನ ಪಡೆದರೆ ಬಂಡವಾಳಶಾಹಿ ನಿಯಂತ್ರಿತ ಮಾಧ್ಯಮಗಳಲ್ಲಿ ಸುದ್ದಿಯಾಗುವುದಿಲ್ಲ. ಆದರೆ ಭಾರತದ ಕೆಲವೇ ಕೆಲವು ಶ್ರೀಮಂತರು ಜಗತ್ತಿನ ಅತಿದೊಡ್ಡ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದರೆ ಪತ್ರಿಕೆಗಳಲ್ಲಿ ವಾರವಿಡೀ ಅಥವಾ ಟಿವಿಗಳಲ್ಲಿ ದಿನದ 24ಗಂಟೆಯೂ ಸುದ್ದಿಯಾಗುತ್ತದೆ.ಅಷ್ಟಕ್ಕೂ ಮಾಧ್ಯಮಗಳ ಹಿಡಿತ ಯಾರ ಕೈಯಲ್ಲಿ?

■ ಬಾಲಕೃಷ್ಣ ಶೆಟ್ಟಿ



ತಲೆಬುಡವಿಲ್ಲದ ಪ್ರೀತಿಯ ಪುರಾಣ

'ಪ್ರೀತಿ ಏಕೆ ಭೂಮಿ ಮೇಲಿದೆ - A New Philosophy'. ಯಾರಿಗೆ ಬೇಕು ಸ್ವಾಮಿ ಇವ್ರ ನ್ಯೂ ಫಿಲಾಸಫಿ! ಏನೋ ಎರಡು ಗಂಡೆ ಟೈಂಪಾಸ್ ಮಾಡಿ, ಬೇಜಾರು ಕಳ್ಕೋಳ್ಳೋಣ ಅಂತ ಬರೋ ಪ್ರೇಕ್ಷಕನಿಗೆ ಈ ಪರಿ ಬೆಸ್ತು ಬೀಳ್ಸೋದೆ! ಏನು ಪ್ರಚಾರ,ಅಬ್ಬರ! 9 ಕೋಟಿ ಖರ್ಚಾಯ್ತಂತೆ! ಒಂದು ಹಾಡಿಗೇ 70 ಲಕ್ಷ ಅಂತೆ! ಬಾಲಿವುಡ್ ಬೆಡಗಿ ಮಲ್ಲಿಕಾ ಶರಾವತ್ ಬೇರೆ! ಎರಡು ವರ್ಷದಿಂದ ಜನ ಕಾದಿದ್ದೇ ಕಾದಿದ್ದು. ಕೊನೆಗೂ ಬಿಡುಗಡೆಯಾಯ್ತಲ್ಲ. ಜನ ನುಗ್ಗಿದ್ದೇ ನುಗ್ಗಿದ್ದು! ಸಿನಿಮಾ ನೋಡಿದ ಮೇಲೆ ಒಂದು ಬಾಕಿ ಉಳಿದಿದ್ದು - ಕಾಲಲ್ಲಿರೋ ಎಕ್ಕಡ ತಕ್ಕೊಂಡು ಹೊಡ್ಕೊಳ್ಳೋದು!

ಏನೋ ಚೆನ್ನಾಗಿ ಎಸಿತಾನೆ ಅಂದ್ರೆ ಮತ್ತೆ ಮತ್ತೆ ಎಸೆದನಂತೆ ಸಗಣಿ ಉಂಡೆನ ಅನ್ನೋ ಹಾಗಾಯ್ತು ಪ್ರೇಮ್ ಕಥೆ. ರೌಡಿಸಂ ಕಥೆಯಾದ 'ಕರಿಯಾ'ನನ್ನು ಪಡ್ಡೆ ಹುಡುಗರು ಗೆಲ್ಲಿಸಿದರೆ, 'ಎಕ್ಸ್‌ಕ್ಯೂಸ್‌ಮಿ' ಹಾಗೂ ಹೀಗೂ ಯಶಸ್ವಿ ಅನ್ನಿಸಿಕೊಳ್ತು. ಇನ್ನು 'ಜೋಗಿ'. ಕೈಯಲ್ಲಿ ಮಚ್ಚು ಹಿಡಿದ ಶಿವಣ್ಣನ ಖದರ್ ನೋಡಿಯೇ ಜನ ಸಿನಿಮಾ ಗೆಲ್ಲಿಸಿದರು. ಈ ಎಲ್ಲಾ ಚಿತ್ರಗಳಲ್ಲಿ ಹಾಡುಗಳು ಹಿಟ್ ಆಗಿ ಸಿನಿಮಾದ ಗೆಲುವಿಗೆ ಪ್ರಮುಖ ಕಾರಣವಾಗಿದ್ದವೇ ಹೊರತು ಕಥೆಯಲ್ಲಿ 'ದಮ್' ಇರಲಿಲ್ಲ ಎಂಬುದು ವಾಸ್ತವ.

'ಪ್ರೀತಿ ಏಕೆ ಭೂಮಿ ಮೇಲಿದೆ' ಯಲ್ಲೂ ಅದೇ ರಿಪೀಟ್ ಆಗಿದೆ. ಈ ಚಿತ್ರದ ಹಾಡುಗಳೂ ನಿಜಕ್ಕೂ ಚೆನ್ನಾಗಿವೆ. ಆರ್.ಪಿ.ಪಟ್ನಾಯಕ್‌ರ ಸಂಗೀತ ಮೆಚ್ಚುವಂತದ್ದು. ಆದರೆ ಕಥೆಯಲ್ಲಿ ಏನೂ ಸ್ವಾರಸ್ಯವಿಲ್ಲ. 'ಯಾರೆ ನೀನು ಚೆಲುವೆ' ಚಿತ್ರದಂತೆ ಒಬ್ಬರನ್ನೊಬ್ಬರು ನೋಡದೆ, ಭೇಟಿಯಾಗದೆ ಪ್ರೀತಿಸುವುದು ಒಂದು ಎಳೆಯಾದರೆ, ಹಿಂದಿ ಚಿತ್ರ 'ದಿಲ್ ತೊ ಪಾಗಲ್ ಹೈ' ನಂತೆ ಪ್ರತಿಯೊಬ್ಬ



ಹುಡುಗ-ಹುಡುಗಿಗೆ ಅವರು ಬಯಸುವಂತಹ ಜೊತೆಗಾರ ಇರುತ್ತಾನೆ, ಒಂದಲ್ಲ ಒಂದು ದಿನ ಭೇಟಿಯಾಗುತ್ತಾನೆ - ಆಗ ಈತನೇ ತನ್ನ ಜೊತೆಗಾರ ಎಂಬ 'ಕ್ಲೂ' ಸಿಗುತ್ತದೆ ಎಂಬ ಭ್ರಮೆಯಲ್ಲಿ ತೇಲಾಡುವುದು.


ಈ ಚಿತ್ರದಲ್ಲೂ ನಾಯಕನಿಗೆ ತಾನು ಮೆಚ್ಚುವ ಚಂದ್ರಮತಿ ಒಂದಲ್ಲ ಒಂದು ದಿನ ಸಿಗುತ್ತಾಳೆ ಎನ್ನುವ ಭ್ರಮೆ. ದೂರದೂರಿನಲ್ಲಿರುವ ನಾಯಕಿಗೂ ತನ್ನ ಚಂದ್ರಮ ಭೇಟಿಯಾಗುತ್ತಾನೆ ಎಂಬ ನಂಬಿಕೆ. ಇಬ್ಬರೂ ಭೇಟಿಯಾಗುತ್ತಾರೆ - ಒಮ್ಮೆಯಲ್ಲ ಹಲವು ಬಾರಿ! ಆದರೆ ಅವಳೇ ಇವಳು, ಇವನೇ ಅವನು ಎಂಬುದು ಇಬ್ಬರಿಗೂ ಗೊತ್ತಾಗುವುದೇ ಇಲ್ಲ ಎಂಬುದು ವಿಪರ್ಯಾಸ! ಚಿತ್ರದ ಕೊನೆಗೂ ಇವರಿಬ್ಬರು ಒಂದಾಗುವುದೇ ಇಲ್ಲ ಎಂಬುದು ಮತ್ತೊಂದು ದುರಂತ! ಇಂತಹ ಕಣ್ಣಾಮುಚ್ಚಾಲೆ ಆಟ ಪ್ರೇಕ್ಷಕನಿಗೆ ಮೆಚ್ಚುಗೆಯಾಗಬಹುದು ಎಂಬ ಭ್ರಮೆ ಪ್ರೇಮ್‌ಗೆ. ಆದರೆ ಇಂತಹ 'ಗಿಮಿಕ್'ಗಳನ್ನು ಸಾಕಷ್ಟು ಚಿತ್ರಗಳಲ್ಲಿ ನೋಡಿರುವುದರಿಂದ ಪ್ರೇಕ್ಷಕನಿಗೆ ಇದರಲ್ಲೇನೂ ಸ್ವಾರಸ್ಯ ಕಾಣುವುದಿಲ್ಲ. ಇದರ ಜೊತೆಗೆ 'ಮದರ್ ಸೆಂಟಿಮೆಂಟ್' ನ ವಿಕೃತ ಕರುಣಾಜನಕ ಕಥೆಯೂ ಸೇರಿಕೊಂಡಿದೆ. ಚಿತ್ರಕ್ಕೆ ಯಾವ ಕೋನದಿಂದಲೂ ಇದು ಪೂರಕವಾಗಿ ನಿಲ್ಲದೆ ನೋಡಗನ ತಾಳ್ಮೆಯನ್ನು ಮತ್ತಷ್ಟು ಕೆಡಿಸುತ್ತದೆ. 'Love ಅಂದ್ರೆ ಅದೊಂಥರಾ Feel' ಎನ್ನುತ್ತಾನೆ ನಾಯಕ ಪ್ರೇಮ್. ಆದರೆ ಚಿತ್ರದಲ್ಲೆಲ್ಲೂ ಆ Feel ಅನುಭವಕ್ಕೇ ಬರುವುದಿಲ್ಲ! 'ಯಾರೆ ನೀನು ಚೆಲುವೆ' ಗೆದ್ದಿದ್ದೇ ಅಂತಹ `Feel ನ ಅನುಭವದಿಂದಾಗಿ. ಚಿತ್ರಮಂದಿರದಿಂದ ಹೊರಬಂದು ಸಿನಿಮಾ ನೆನಪಿಸಿಕೊಂಡರು ಮನಸೆಳೆಯುವ ಒಂದು ದೃಶ್ಯವೂ ಕಣ್ಮುಂದೆ ಬಾರದಿರುವುದು ಈ ಚಿತ್ರದ ವೈಫಲ್ಯಕ್ಕೆ ಹಿಡಿದ ಕನ್ನಡಿ.

ನಟ ಉಪೇಂದ್ರರು ನಿರ್ದೇಶಿಸಿದರೆ ಅದಕ್ಕೇ ಒಂದು ಸ್ಟೈಲ್ ಇರುತ್ತದೆ. ಅದು 'ಉಪೇಂದ್ರ ಮಾದರಿ'. ಈ ಚಿತ್ರದಲ್ಲಿ ಪ್ರೇಮ್ ಅದೇ ಮಾದರಿಯನ್ನು ಅನುಸರಿಸಿದ್ದಾರೆ. ಉಪೇಂದ್ರರ 'ಎ', 'ಉಪೇಂದ್ರ' ಚಿತ್ರಗಳ ಮುಂದುವರಿದ ಭಾಗದಂತೆ ಭಾಸವಾಗುತ್ತದೆ ಈ ಚಿತ್ರ!. ನಾಯಕನಾಗಿಯೂ ಪ್ರೇಮ್ ಸೋತಿದ್ದಾರೆ. 'ಜೋಗಿ' ಚಿತ್ರದಲ್ಲಿ ದೇಸೀ ಸಂಭಾಷಣೆಯಿಂದ ಗಮನ ಸೆಳೆದಿದ್ದ ಮಳವಳ್ಳಿ ಸಾಯಿಕೃಷ್ಣ ಈಗ ಪ್ರೇಮ್‌ರಿಂದ ದೂರವಾಗಿರುವುದು, ಈ ಚಿತ್ರದಲ್ಲಿ ಗ್ರಾಮ್ಯ ಭಾಷೆ ನಾಟಕೀಯವಾಗಿ ಕಾಣುವುದು, ಚಿತ್ರದ ಕಳಪೆ ಗುಣಮಟ್ಟಕ್ಕೆ ಮತ್ತೊಂದು ಉದಾಹರಣೆಯಷ್ಟೆ.

ಇನ್ನು 'ಸುಳ್ಳೇ ಸುಳ್ಳು' ಹಾಡಿನ ವಿವಾದ. ತಮ್ಮ ಇರುವಿಕೆಯ ಪ್ರದರ್ಶನಕ್ಕೆ ನೆಪ ಹುಡುಕುವ ರಾಮಸೇನೆ, ಭಜರಂಗಿಗಳಿಗೆ ಇದೊಂದು ನೆಪವಷ್ಟೆ! ಈ ಹಾಡಿನಲ್ಲಿ ಅಂಥಹ ಅನರ್ಥವೇನೂ ಇಲ್ಲ, ಅದು ಅರ್ಥವಾಗುವುದು ಅವರಿಗೂ ಬೇಕಾಗಿಲ್ಲ. ಶಿಶುನಾಳ ಶರೀಫರ ರಚನೆಯಾದ ಈ ಗೀತೆಯನ್ನು ಪ್ರೇಮ್ ಸ್ವಲ್ಪ ತಿರುಚಿದಂತೆ ಕಾಣುತ್ತದೆ. ಹಾಗೇನಾದರೂ ಆಗಿದ್ದಲ್ಲಿ ಅದು ಅಕ್ಷಮ್ಯ.

ಈ ಚಿತ್ರಕ್ಕೆ 9 ಕೋಟಿ ಖರ್ಚಾಗಿದೆಯಂತೆ! ಬೆಂಗಳೂರಿನ ಸಂದಿಗೊಂದಿಗಳಲ್ಲೇ ಬಹುತೇಕ ಚಿತ್ರೀಕರಣವಾಗಿರುವ ಈ ಚಿತ್ರಕ್ಕೆ ಇಷ್ಟೊಂದು ದುಬಾರಿ ಖರ್ಚಾದದ್ದಾರೂ ಏಕೆ? ಇದು ಮತ್ತದೇ 'ಫಾರಿನ್‌ಟೂರ್' ನ ಖಯ್ಯಾಲಿಯ ಮತ್ತೊಂದು ಸ್ಯಾಂಪಲ್ ಅಷ್ಟೆ!. ಚಿತ್ರಕ್ಕೆ ಅಗತ್ಯವೂ ಅಲ್ಲದ, ಅನಿವಾರ್ಯವೂ ಅಲ್ಲದೆ ಇಂತಹ ಚಮತ್ಕಾರಗಳನ್ನು ಪ್ರೇಕ್ಷಕ ಒಪ್ಪುವುದಿಲ್ಲವೆಂಬುದು ಇವರಿಗೆ ಅರ್ಥವಾಗುವುದಾದರೂ ಯಾವಾಗ?

ಫೋಟೋ



ತಲೆ ಮೇಲಿನ ಜಾಹಿರಾತು ನಿನಗೇನು ಬೇಕು? ಇಂಟರ್‌ನೆಟ್ಟಾ ಎಂದೇನೋ ಕೇಳುತ್ತಿದೆ. ಪಾಪ ಈತನಿಗೆ ಅದು ಅರ್ಥವಾಗಬೇಕಲ್ಲ. ಆತನಿಗೆ ಸಂಜೆ ಸರಿಯಾಗಿ ಕೂಲಿ ಸಿಕ್ಕರೆ ಅದೇ ಸಾಕಾಗಿದೆ.

ಶುಭಾಶಯ

ಓ ನನ್ನ ಶ್ರಮ ಜೀವಿಗಳೇ
ಇದೋ ನಿಮಗೆ ಶುಭಾಶಯ
ಹೊಸದು ಈ ವರ್ಷ ನಿಮಗೆ
ಹೊಸದೊಂದು ಶಕ್ತಿ ಕೊಡಲಿ

ಸಾಮ್ರಾಜ್ಯಶಾಹಿಗಳ ಸಾಮ್ರಾಜ್ಯ ವನಳಿಸುವ
ಧರ್ಮದ ಮತ್ತೇರಿಸುವವರಿಗೆ ಧರ್ಮದೇಟು ನೀಡುವ
ಜಾತಿ ಅಸಮಾನತೆಯ ಬುಡ ಮೂಲ ಕೀಳುವ
ಶ್ರಮದ ಈ ಬದುಕಿನಲ್ಲಿ ಸಂತೋಷವ ಹೊಂದುವ

ಶುಭಾಶಯ ಹೊಸದು ಈ ವರ್ಷದಲಿ
ಧರ್ಮ ದ್ವೇಷದ ಮತ್ತಿನಲ್ಲಿರುವವರ
ಕರ್ಮವ ನೋಡು
ಕೋಮುವಾದಿಗಳ ಕೈಗೆ ಸಿಕ್ಕಿ
ಸಾಯುವ ಅವರ ನಾಯಿ ಪಾಡು

ಖಂಡಿತ ಧರ್ಮಾಂಧರಿಂದ
ನಮ್ಮ ದೇಶಕ್ಕೆ ಕೇಡು
ಇವರನ್ನು ಖಂಡಿಸಿ
ನೀ ದೂರವಿಡು

- ವಿಜಯಕೃಷ್ಣ



JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH